ಕರ್ನಾಟಕ ಸರ್ಕಾರ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

ಹಾಗೂ

ಸಾರ್ವಜನಿಕ ಶಿಕ್ಷಣ ಇಲಾಖೆ

# ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿರುವ ಜಿಲ್ಲಾ

# ಹಾಗೂ

# ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ 2009-2010

# ಮಾಹಿತಿ ಕೈಪಿಡಿ 2009

ಸಂವ್ಯಶಾಇ 15 ಸಂವ್ಯವಿ 2009

## ವಿಷಯಸೂಚಿ


| ಕ್ರಮ ಸಂಖ್ಯೆ | ವಿಷಯಗಳು | ಪುಟ ಸಂಖ್ಯೆ |
|---|---|---|
| 1. | ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ಯೋಜನೆ – ರಾಜ್ಯ ಸರ್ಕಾರದ ಆದೇಶ | 1–3 |
| 2. | ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯದ ಪತ್ರ | 4–6 |
| 3. | ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವು ಯೋಜನೆ – (ಅನುಬಂಧ–I ರಿಂದ III) | 7–16 |
| 4. | ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ಮಾರ್ಗಸೂಚಿಗಳು | 17–21 |
| 5. | ಮಾದರಿ ಕಾರ್ಯಕ್ರಮಗಳು (ಅನುಬಂಧ–ಎ) | 22 |
| 6. | ಕಡ್ಡಾಯ ಹಾಗೂ ಐಚ್ಛಿಕ ವಿಷಯಗಳ ಪಟ್ಟಿ (ಅನುಬಂಧ–ಬಿ) | 23 |
| 7. | ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿದ ಶಾಲೆಗೆ ಹಾಗೂ ಬಹುಮಾನಿತರಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ (ಅನುಬಂಧ–IV-V) | 24–25 |
| 8. | ಕರ್ನಾಟಕ ರಾಜ್ಯದ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ಯುವ ಸಂಸತ್ ಸ್ಪರ್ಧೆಗೆ ಪೂರಕವಾಗಿ ಸಂಸತ್ ಕಾರ್ಯಕಲಾಪಗಳ ಬಗೆಗೆ ಕೆಲವು ವಿಶೇಷ ಮಾಹಿತಿಗಳು | 26–28 |
| 9. | ಕರ್ನಾಟಕ ವಿಧಾನ ಸಭೆಯ ಮಾದರಿ ಕಾರ್ಯಕಲಾಪಗಳ ಪಟ್ಟಿ (ಅನುಬಂಧ–VI) | 29–31 |
| 10. | ಕರ್ನಾಟಕ ವಿಧಾನ ಪರಿಷತ್ತಿನ ಮಾದರಿ ಕಾರ್ಯಕಲಾಪಗಳ ಪಟ್ಟಿ | 32–33 |
| 11. | ಮಾದರಿ ಸಂತಾಪ ಸೂಚನೆಗಳು (ಅನುಬಂಧ–VII) | 34–36 |
| 12. | ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಹಾಗೂ ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳ ಹಾಗೂ ಉತ್ತರಗಳ ಕೆಲವು ಮಾದರಿಗಳು | 37–60 |
| 13. | ಗಮನ ಸೆಳೆಯುವ ಸೂಚನೆಗಳ ಮಾದರಿಗಳು | 61–64 |
| 14. | ನಿಯಮ–330ರ ಮೇರೆಗೆ ಚರ್ಚೆ | 65–66 |
| 15. | ಸಾರ್ವಜನಿಕ ಮಹತ್ವದ ಜರೂರು ವಿಷಯದ ಅಲ್ಪ ಕಾಲಾವಧಿ ಚರ್ಚೆಯ ಸೂಚನೆ ಹಾಗೂ ಉತ್ತರದ ಮಾದರಿ (ಅನುಬಂಧ–VIII) | 67 |
| 16. | ಶಾಸನ ರಚನೆ – ಮಾದರಿ ವಿಧೇಯಕ (ಅನುಬಂಧ–IX) | 68–108 |
| 17. | ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ನಿಯಮ 324 ರಿಂದ 351ರ ಉದ್ಧೃತ ಭಾಗ (ಅನುಬಂಧ–X) | 109–117 |
| 18. | ತೀರ್ಪುಗಾರರ ಮಾದರಿ ಅಂಕಪಟ್ಟಿ | 118 |
| 19. | ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿದ ಸ್ಪರ್ಧೆಗಳ ಪಟ್ಟಿ – (ಶಾಲೆಯ ಹೆಸರು, ಸ್ಪರ್ಧಾರ್ಥಿಗಳ ಹೆಸರು) | 119 |

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ

ಹಾಗೂ

ಸಾರ್ವಜನಿಕ ಶಿಕ್ಷಣ ಇಲಾಖೆ

# ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿರುವ ಜಿಲ್ಲಾ

# ಹಾಗೂ

# ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ 2009-2010

# ಮಾಹಿತಿ ಕೈಪಿಡಿ 2009

ಸಂವ್ಯಶಾಇ 15 ಸಂವ್ಯವಿ 2009

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ :** ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ಯೋಜನೆ.

**ಓದಲಾಗಿದೆ :** (1) ಸರ್ಕಾರದ ಆದೇಶ ಸಂಖ್ಯೆ:ಸಂವ್ಯಶಾಇ 6 ಸಂವ್ಯವಿ 97, ದಿನಾಂಕ: 9.10.2002.

(2) ಸರ್ಕಾರದ ಆದೇಶ ಸಂಖ್ಯೆ:ಸಂವ್ಯಶಾಇ 150 ಆಡಳಿತ 2002, ದಿನಾಂಕ: 11.11.2002.

(3) ಕೇಂದ್ರ ಸರ್ಕಾರದ ಸಂಸದೀಯ ವ್ಯವಹಾರಗಳ ಸಚಿವಾಲಯದ ಪತ್ರ ಸಂಖ್ಯೆ: ಎಫ್.2(2).2005–ಆರ್ ಅಂಡ್ ಸಿ, ದಿನಾಂಕ: 7.2.2006.

(4) ಸರ್ಕಾರದ ಆದೇಶ ಸಂಖ್ಯೆ:ಸಂವ್ಯಶಾಇ 11 ಸಂವ್ಯವಿ 2006, ದಿನಾಂಕ: 19.5.2006.

(5) ಕೇಂದ್ರ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯದ ಪತ್ರ ಸಂಖ್ಯೆ: ಎಫ್ 3(3) 2008 ವೈಪಿ, ದಿ:12–05–2009.

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾಗಿರುವ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ಯುವ ಸಂಸತ್ ಸ್ಪರ್ಧೆ ನಿಯಮಗಳು, 1999ನ್ನು ಹೊರಡಿಸಲಾಗಿದೆ.

ಮೇಲೆ (2)ರಲ್ಲಿ ಓದಲಾಗಿರುವ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ಯುವ ಸಂಸತ್ ಸ್ಪರ್ಧೆ (ತಿದ್ದುಪಡಿ) ನಿಯಮಗಳು, 2002ನ್ನು ಹೊರಡಿಸಲಾಗಿದೆ.

ಮೇಲೆ (3)ರಲ್ಲಿ ಓದಲಾಗಿರುವ ಕೇಂದ್ರ ಸರ್ಕಾರದ ಪತ್ರದಲ್ಲಿ 2005ರ ಫೆಬ್ರವರಿ 4–5ನೇ ದಿನಾಂಕಗಳಂದು ಹೈದರಾಬಾದ್‌ನಲ್ಲಿ ನಡೆದ 13ನೇ ಅಖಿಲ ಭಾರತ ಸಚೇತಕರ ಸಮ್ಮೇಳನವು, ಸಂಸದೀಯ ವ್ಯವಹಾರಗಳ ಮಂತ್ರಾಲಯವು ಪ್ರಸ್ತುತ ಒದಗಿಸುತ್ತಿರುವ ಹಣಕಾಸು ನೆರವಿನ ಪ್ರಮಾಣವನ್ನು ಒಂದು ಲಕ್ಷ ರೂಪಾಯಿಗಳಿಂದ ಮೂರು ಲಕ್ಷ ರೂಪಾಯಿಗಳಿಗೆ ಹೆಚ್ಚಿಸತಕ್ಕದ್ದೆಂದು ಇತರೆ ವಿಷಯಗಳ ಜೊತೆಯಲ್ಲಿ ಶಿಫಾರಸ್ಸು ಮಾಡಿದೆ. ಸದರಿ ಶಿಫಾರಸ್ಸನ್ನು ಭಾರತ ಸರ್ಕಾರವು ಪರಿಶೀಲಿಸಿ 2005–06ರ ಶೈಕ್ಷಣಿಕ ವರ್ಷದಿಂದ ಹಣಕಾಸು ನೆರವನ್ನು ವಾರ್ಷಿಕ ಎರಡು ಲಕ್ಷ ರೂಪಾಯಿಗಳಿಗೆ ಹೆಚ್ಚಿಸಲು ತೀರ್ಮಾನಿಸಿದೆ ಮತ್ತು ಹಣಕಾಸು ನೆರವಿನ ಯೋಜನೆಯ ಒಂದು ಪ್ರತಿಯನ್ನು ಲಗತ್ತಿಸಿ ಕಳುಹಿಸಿ ಕೊಟ್ಟಿರುತ್ತದೆ. ಪ್ರಸ್ತುತ ಜಾರಿಯಲ್ಲಿರುವ ನಿಯಮಗಳು ಕೇಂದ್ರ ಸರ್ಕಾರವು ಒದಗಿಸಿರುವ ಹಣಕಾಸು ಯೋಜನೆಯ ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿರುವುದರಿಂದ ಜಾರಿಯಲ್ಲಿರುವ ನಿಯಮಗಳನ್ನು ನಿರಸನಗೊಳಿಸಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಯುವ ಸಂಸತ್ ಸ್ಪರ್ಧೆಗಳನ್ನು ನಡೆಸಲು ನಿರ್ಧರಿಸಲಾಗಿದೆ.

ಮೇಲೆ (4)ರಲ್ಲಿ ಓದಲಾಗಿರುವ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ಯುವ ಸಂಸತ್ ಸ್ಪರ್ಧೆ ನಿಯಮಗಳು, 1999ನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿರಸನ ಗೊಳಿಸಲಾಗಿದೆ. ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರ ಇವರ ಪತ್ರ ಸಂಖ್ಯೆ:ಎಫ್ 2(2) 2005–ಆರ್ ಸಿ, ದಿನಾಂಕ:7.2.2006 ಹಾಗೂ ಇದರೊಂದಿಗೆ ಲಗತ್ತಿಸಿರುವ ಯುವ ಸಂಸತ್ ಸ್ಪರ್ಧೆಗಳನ್ನು ನಡೆಸುವುದಕ್ಕಾಗಿ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ಯೋಜನೆ 2006ನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ರಾಜ್ಯದಲ್ಲಿ ಜಾರಿ ಗೊಳಿಸಲು ಆದೇಶಿಸಿದೆ.

ಮೇಲೆ (5) ರಲ್ಲಿ ಓದಲಾಗಿರುವ ಕೇಂದ್ರ ಸರ್ಕಾರದ ಪತ್ರದಲ್ಲಿ 2008ರ ಫೆಬ್ರವರಿ 4–5ನೇ ದಿನಾಂಕಗಳಂದು ಮುಂಬೈನಲ್ಲಿ ನಡೆದ 14ನೇ ಅಖಿಲ ಭಾರತ ಸಚೇತಕರ ಸಮ್ಮೇಳನವು, ಇತರೆ ವಿಷಯಗಳ ಜೊತೆಯಲ್ಲಿ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಒದಗಿಸುತ್ತಿರುವ ಹಣಕಾಸು ನೆರವಿನ ಪ್ರಮಾಣವನ್ನು ಈ ಮುಂದಿನಂತೆ ಹೆಚ್ಚಿಸತಕ್ಕದ್ದೆಂದು ಶಿಫಾರಸ್ಸು ಮಾಡಿದೆ.

| | | |
|---|---|---|
| (ಎ) | 100 ರವರೆಗೆ ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳಿಗೆ | ವರ್ಷಕ್ಕೆ 3 ಲಕ್ಷ ರೂಪಾಯಿಗಳು |
| (ಬಿ) | 100 ರಿಂದ 200ರ ನಡುವೆ ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳು | ವರ್ಷಕ್ಕೆ 4 ಲಕ್ಷ ರೂಪಾಯಿಗಳು |
| (ಸಿ) | 200ಕ್ಕೂ ಹೆಚ್ಚು ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳು | ವರ್ಷಕ್ಕೆ 5 ಲಕ್ಷ ರೂಪಾಯಿಗಳು |

(ವಿಧಾನಮಂಡಲಗಳನ್ನು ಹೊಂದಿರುವ ಕೇಂದ್ರಾಡಳಿತ ಪ್ರದೇಶಗಳ ಸಂಬಂಧದಲ್ಲಿ ಮಿತಿಯು ಈ ಹಿಂದೆ ಇದ್ದಂತೆಯೇ ಇರತಕ್ಕದ್ದು ಎಂದರೆ, ಪ್ರತಿಯೊಂದು ಕೇಂದ್ರಾಡಳಿತ ಪ್ರದೇಶಕ್ಕೆ ಪ್ರತಿವರ್ಷಕ್ಕೆ 2,00,000/– ರೂಪಾಯಿಗಳು)

ಈ ವಿಷಯವನ್ನು ಭಾರತ ಸರ್ಕಾರವು ಹಣಕಾಸು ಮಂತ್ರಾಲಯದೊಡನೆ ಸಮಾಲೋಚಿಸಿ ಪ್ರಸಕ್ತ ಹಣಕಾಸು ವರ್ಷದಿಂದ ಎಂದರೆ 2009–2010 ರಿಂದ 14 ನೇ ಅಖಿಲ ಭಾರತ ಸಚೇತಕರ ಸಮ್ಮೇಳನದಲ್ಲಿ ಶಿಫಾರಸ್ಸು ಮಾಡಿರುವಂತೆ ಹಣಕಾಸು ನೆರವನ್ನು ಹೆಚ್ಚಿಸಲು ತೀರ್ಮಾನಿಸಿದೆ ಮತ್ತು ಹಣಕಾಸು ನೆರವಿನ ಯೋಜನೆ ಒಂದು ಪ್ರತಿಯನ್ನು ಲಗತ್ತಿಸಿ ಕಳುಹಿಸಿಕೊಟ್ಟಿರುತ್ತದೆ. ಪ್ರಸ್ತುತ ಜಾರಿಯಲ್ಲಿರುವ ನಿಯಮಗಳು ಕೇಂದ್ರ ಸರ್ಕಾರವು ಒದಗಿಸಿರುವ ಹಣಕಾಸು ಯೋಜನೆಯ ಮಾರ್ಗಸೂಚಿಗಳಿಗೆ ವ್ಯತಿರಿಕ್ತವಾಗಿರುವುದರಿಂದ ಜಾರಿಯಲ್ಲಿರುವ ನಿಯಮಗಳನ್ನು ನಿರಸನಗೊಳಿಸಿ ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ ಯುವ ಸಂಸತ್ ಸ್ಪರ್ಧೆಗಳನ್ನು ನಡೆಸಲು ನಿರ್ಧರಿಸಲಾಗಿದೆ. ಆದ್ದರಿಂದ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ:ಸಂವ್ಯಶಾಇ 15 ಸಂವ್ಯವಿ 2009,**
**ಬೆಂಗಳೂರು, ದಿನಾಂಕ: 14.07.2009**

ಕರ್ನಾಟಕ ರಾಜ್ಯದಲ್ಲಿ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ಯುವ ಸಂಸತ್ ಸ್ಪರ್ಧೆ ನಿಯಮಗಳು, 2006ನ್ನು ತಕ್ಷಣದಿಂದ ಜಾರಿಗೆ ಬರುವಂತೆ ನಿರಸನಗೊಳಿಸಲಾಗಿದೆ. ಹಾಗೂ

ಸಂಸದೀಯ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರ ಇವರ ಪತ್ರ ಸಂಖ್ಯೆ:ಎಫ್ 3(3) 2008 ವೈಪಿ, ದಿ:12-05-2009 ಹಾಗೂ ಇದರೊಂದಿಗೆ ಲಗತ್ತಿಸಿರುವ ಯುವ ಸಂಸತ್ ಸ್ಪರ್ಧೆಗಳನ್ನು ನಡೆಸುವುದಕ್ಕಾಗಿ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವು ಯೋಜನೆ 2009ನ್ನು (ಅನುಬಂಧದಲ್ಲಿ ಲಗತ್ತಿಸಿ) ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ರಾಜ್ಯದಲ್ಲಿ ಜಾರಿಗೊಳಿಸಲು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಬಿ.ಜಿ.ಶ್ಯಾಮಲ)**
ಸಹಾಯಕ ಪಾರೂಪಕಾರ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.

ಗೆ,

1. ಸರ್ಕಾರದ ಮುಖ್ಯ ಕಾರ್ಯದರ್ಶಿ : ಅಪರ ಮುಖ್ಯ ಕಾರ್ಯದರ್ಶಿ.
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು (ಆಡಿಟ್ ಮತ್ತು ಅಕೌಂಟ್ಸ್)
3. ಸರ್ಕಾರದ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕರ್ನಾಟಕ ವಿಧಾನಮಂಡಲ, ವಿಧಾನ ಸೌಧ, ಬೆಂಗಳೂರು.
6. ಮಾನ್ಯ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಆಪ್ತ ಕಾರ್ಯದರ್ಶಿಯವರಿಗೆ.
7. ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ನಿರ್ದೇಶನಾಲಯ, ನಂ.4., 100 ಫೀಟ್ ರಿಂಗ್ ರೋಡ್, (ಕೆ.ಎಸ್.ಹಾಸ್ಪಟಲ್ ಪಕ್ಕದಲ್ಲಿ) ಹೊಸಕೆರೆಹಳ್ಳಿ, ಬೆಂಗಳೂರು.-560 085.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನ ಸೌಧ, ಬೆಂಗಳೂರು.
9. ಸಂಕಲನಕಾರರು, ಸರ್ಕಾರಿ ಮುದ್ರಣಾಲಯ ಇವರಿಗೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲು.
10. ಶಾಖಾ ರಕ್ಷಕ ಕಡತ.
11. ಹೆಚ್ಚುವರಿ ಪ್ರತಿ.

**ಸಂಖ್ಯೆ: ಎಫ್ 3(3) 2008–ವೈಪಿ**

**ಭಾರತ ಸರ್ಕಾರ**

**ಸಂಸದೀಯ ವ್ಯವಹಾರಗಳ ಮಂತ್ರಾಲಯ**

92, ಸಂಸತ್ ಭವನ,
ನವದೆಹಲಿ–110001

ದಿನಾಂಕ 12.05.2009

ಇವರಿಗೆ,

ಮಾನ್ಯ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ.
ಬೆಂಗಳೂರು.

ಮಾನ್ಯರೆ,

ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ 'ಯುವ ಸಂಸತ್ ಸ್ಪರ್ಧೆಗಳನ್ನು' ನಡೆಸುವುದಕ್ಕಾಗಿ ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಹಣಕಾಸು ನೆರವನ್ನು ಒದಗಿಸುತ್ತಾ ಇದೆ ಎಂಬ ಅಂಶವನ್ನು ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ. 2008ರ ಫೆಬ್ರವರಿ 4–5ನೇ ದಿನಾಂಕಗಳಂದು ಮುಂಬೈನಲ್ಲಿ ನಡೆದ 14ನೇ ಅಖಿಲ ಭಾರತ ಸಚೇತಕರ ಸಮ್ಮೇಳನವು, ಇತರೆ ವಿಷಯಗಳ ಜೊತೆಯಲ್ಲಿ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಒದಗಿಸುತ್ತಿರುವ ಹಣಕಾಸು ನೆರವಿನ ಪ್ರಮಾಣವನ್ನು ಈ ಮುಂದಿನಂತೆ ಹೆಚ್ಚಿಸತಕ್ಕದ್ದೆಂದು ಶಿಫಾರಸ್ಸು ಮಾಡಿದೆ.

| | |
|---|---|
| (ಎ) 100ರವರೆಗೆ ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳಿಗೆ | ವರ್ಷಕ್ಕೆ 3 ಲಕ್ಷ ರೂಪಾಯಿಗಳು |
| (ಬಿ) 100ರಿಂದ 200ರ ನಡುವೆ ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳು | ವರ್ಷಕ್ಕೆ 4 ಲಕ್ಷ ರೂಪಾಯಿಗಳು |
| (ಸಿ) 200ಕ್ಕೂ ಹೆಚ್ಚು ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳು | ವರ್ಷಕ್ಕೆ 5 ಲಕ್ಷ ರೂಪಾಯಿಗಳು |

(ವಿಧಾನಮಂಡಲಗಳನ್ನು ಹೊಂದಿರದ ಕೇಂದ್ರಾಡಳಿತ ಪ್ರದೇಶಗಳ ಸಂಬಂಧದಲ್ಲಿ ಮಿತಿಯು ಈ ಹಿಂದೆ ಇದ್ದಂತೆಯೇ ಇರತಕ್ಕದ್ದು ಎಂದರೆ, ಪ್ರತಿಯೊಂದು ಕೇಂದ್ರಾಡಳಿತ ಪ್ರದೇಶಕ್ಕೆ ಪ್ರತಿವರ್ಷಕ್ಕೆ 5,00,000/– ರೂಪಾಯಿಗಳು)

ಈ ವಿಷಯವನ್ನು ಭಾರತ ಸರ್ಕಾರವು ಹಣಕಾಸು ಮಂತ್ರಾಲಯದೊಡನೆ ಸಮಾಲೋಚಿಸಿದೆ ಮತ್ತು ಪ್ರಸಕ್ತ ಹಣಕಾಸು ವರ್ಷದಿಂದ ಎಂದರೆ, 2009–2010ರಿಂದ 14ನೇ ಅಖಿಲ ಭಾರತ ಸಚೇತಕರ ಸಮ್ಮೇಳನದಲ್ಲಿ ಶಿಫಾರಸ್ಸು ಮಾಡಿರುವಂತೆ ಹಣಕಾಸು ನೆರವನ್ನು ಹೆಚ್ಚಿಸಲು ತೀರ್ಮಾನಿಸಿದೆ.

2. ಹಣಕಾಸು ನೆರವಿನ ಯೋಜನೆಯ ಒಂದು ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಸ್ಪರ್ಧೆಗಳನ್ನು ನಡೆಸುವಲ್ಲಿ ವಹಿಸಲಾದ ವೆಚ್ಚಗಳನ್ನು ಮರುಸಂದಾಯಕ್ಕಾಗಿ ಪ್ರಸ್ತಾವಗಳನ್ನು ಈ ಮಂತ್ರಾಲಯವು ಕ್ಲೇಮುಗಳ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳುವುದು ಸಾಧ್ಯವಾಗುವಂತೆ ಯೋಜನೆಯ ಅನುಬಂಧ-IIIರಲ್ಲಿ ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ಮಾತ್ರವೇ ಈ ಮಂತ್ರಾಲಯಕ್ಕೆ ಕಳುಹಿಸಬೇಕೆಂದು ಕೋರಲಾಗಿದೆ. ಮರುಸಂದಾಯದ ಕ್ಲೇಮನ್ನು ಮಾಡುವಾಗ ಮೂಲ ಓಚರುಗಳು/ಬಿಲ್ಲುಗಳನ್ನು ಈ ಮಂತ್ರಾಯಲಕ್ಕೆ ಒದಗಿಸುವ ಅವಶ್ಯಕತೆ ಇರುವುದಿಲ್ಲ.

3. ಪರಿಷ್ಕೃತ ಹಣಕಾಸು ನೆರವು ಯೋಜನೆಯ ವಿವರಗಳು ಅಧಿಕೃತ ವೆಬ್‌ಸೈಟ್ ಎಂದರೆ., www.mpa.nic.in ನಲ್ಲಿಯೂ ಲಭ್ಯವಿದೆ.

4. ಇದನ್ನು ಸಂಸದೀಯ ವ್ಯವಹಾರಗಳ ಮಂತ್ರಾಲಯದ ಕಾರ್ಯದರ್ಶಿಗಳ ಅನುಮೋದನೆಯೊಡನೆ ಹೊರಡಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಿ/-
(ಆರ್.ಸಿ. ಮೊಹಂತಿ)
ಭಾರತ ಸರ್ಕಾರದ ಅಧೀನ ಕಾರ್ಯದರ್ಶಿ,
ದೂರವಾಣಿ: 011-23034761
ಫ್ಯಾಕ್ಸ್ : 23018220

# ಯುವ ಸಂಸತ್ ಸ್ಪರ್ಧೆಗಳನ್ನು ನಡೆಸುವುದಕ್ಕಾಗಿ ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವು ಯೋಜನೆ

**ಸಂಸದೀಯ ವ್ಯವಹಾರಗಳ ಮಂತ್ರಾಲಯ**

**ಭಾರತ ಸರ್ಕಾರ**

**2009**

==============================================

## ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ಏರ್ಪಡಿಸುವುದಕ್ಕಾಗಿ ರಾಜ್ಯ ಸರ್ಕಾರಗಳು /ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ಯೋಜನೆ.

### ಪೀಠಿಕೆ

ಶೈಕ್ಷಣಿಕ ಸಂಸ್ಥೆಗಳಲ್ಲಿ ಯುವ ಸಂಸತ್ ಸ್ಪರ್ಧೆಗಳನ್ನು ಏರ್ಪಡಿಸಿ ನಡೆಸುವ ಪರಿಕಲ್ಪನೆ 1962 ರಲ್ಲಿ ಮುಂಬಯಿಯಲ್ಲಿ ನಡೆದ ನಾಲ್ಕನೇ ಅಖಿಲ ಭಾರತ ಸಚೇತಕರ ಸಮ್ಮೇಳನದಲ್ಲಿ ರೂಪ ತಳೆಯಿತು. ಸದರಿ ಸಮ್ಮೇಳನದಲ್ಲಿ ಇತರೆ ವಿಷಯಗಳ ಜೊತೆಗೆ ಈ ಮುಂದಿನ ಶಿಫಾರಸುಗಳನ್ನು ಮಾಡಲಾಯಿತು:–

> "ಈ ಸಮಿತಿಯು, ಅಣಕು ಸಂಸತ್ ಕಾರ್ಯಕ್ರಮಗಳನ್ನು ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ಪಂಚಾಯತಿಗಳ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ನಡೆಸಲು ಸರ್ಕಾರವು ಪ್ರೋತ್ಸಾಹಿಸತಕ್ಕದ್ದೆಂದು ಶಿಫಾರಸು ಮಾಡುತ್ತದೆ".

ಮೇಲ್ಕಂಡ ಶಿಫಾರಸುಗಳನ್ನು 1966 ರಲ್ಲಿ ಬೆಂಗಳೂರಿನಲ್ಲಿ ನಡೆದ ಐದನೇ ಅಖಿಲ ಭಾರತ ಸಚೇತಕರ ಸಮ್ಮೇಳನವು ಈ ಮುಂದೆ ಹೇಳಿರುವಂತೆ ಪುನರುಚ್ಚರಿಸಿತು:–

> "ಮುಂಬಯಿಯಲ್ಲಿ ನಡೆದ ನಾಲ್ಕನೇ ಅಖಿಲ ಭಾರತ ಸಚೇತಕರ ಸಮ್ಮೇಳನವು, ಜನಪ್ರತಿನಿಧಿ ಸಂಸ್ಥೆಗಳ ಪಾತ್ರದ ಬಗ್ಗೆ ಅರಿವು ಮೂಡಿಸಲು ಗ್ರಾಮ ಪಂಚಾಯತಿಗಳಲ್ಲಿ ಅಣಕು ಸಂಸತ್ ಕಾರ್ಯಕ್ರಮಗಳನ್ನು ನಡೆಸಬೇಕೆಂದು ಶಿಫಾರಸು ಮಾಡಿತ್ತು. ಈ ಶಿಫಾರಸುಗಳನ್ನು ಕೆಲವು ರಾಜ್ಯಗಳಲ್ಲಿ ಜಾರಿಗೆ ತಂದಿರುವುದಿಲ್ಲ ಎಂಬುದನ್ನು ಈ ಸಮ್ಮೇಳನವು ಗಮನಿಸಿದೆ. ಸಮ್ಮೇಳನವು, ಸಂಬಂಧಪಟ್ಟ ರಾಜ್ಯ ಸರ್ಕಾರಗಳು ತಮ್ಮ ತೀರ್ಮಾನಗಳನ್ನು ಮರುಪರಿಶೀಲಿಸುವಂತೆ ಅವುಗಳ ಮನವೊಲಿಸಬೇಕೆಂದು ಪುನರುಚ್ಚರಿಸುತ್ತದೆ."

ಮೇಲ್ಕಂಡ ಶಿಫಾರಸುಗಳಿಗನುಸಾರ, ಸಂಸದೀಯ ವ್ಯವಹಾರಗಳ ಮಂತ್ರಾಲಯವು ಅಣಕು ಸಂಸತ್ (ಈಗ "ಯುವ ಸಂಸತ್") ಸ್ಪರ್ಧೆಯ ಯೋಜನೆಯ ವಿವರಗಳನ್ನು ತಯಾರಿಸಿತು ಮತ್ತು ಅದನ್ನು ಪ್ರಾಯೋಗಿಕ ರೂಪದಲ್ಲಿ ನಡೆಸುವ ಉದ್ದೇಶದಿಂದ ದೆಹಲಿಯ ಪ್ರೌಢ ಶಾಲೆಗಳಲ್ಲಿ ಸ್ಪರ್ಧೆಗಳನ್ನು ಪ್ರಾರಂಭಿಸಲು ತೀರ್ಮಾನಿಸಿತು. 1967 ರಲ್ಲಿ ಸಿಮ್ಲಾದಲ್ಲಿ ಮತ್ತು 1969 ರಲ್ಲಿ ಮದ್ರಾಸಿನಲ್ಲಿ ಅನುಕ್ರಮವಾಗಿ ನಡೆದ ಆರು ಮತ್ತು ಏಳನೇ ಅಖಿಲಭಾರತ ಸಚೇತಕರ ಸಮ್ಮೇಳನದಲ್ಲಿ ಈ ಮುಂದಿನ ಶಿಫಾರಸುಗಳನ್ನು ಮಾಡಲಾಯಿತು:–

"ದೆಹಲಿಯ ಶಾಲೆಗಳಲ್ಲಿ "ಯುವ ಸಂಸತ್" ಕಾರ್ಯಕ್ರಮವನ್ನು ಉತ್ತೇಜಿಸುವುದಕ್ಕಾಗಿ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಮಾಡಿರುವ ಉತ್ತಮ ಕಾರ್ಯವನ್ನು ಪ್ರಶಂಸಿಸುತ್ತಾ, ಉಳಿದ ರಾಜ್ಯಗಳು ಸಹ ತಮ್ಮ ತಮ್ಮ ರಾಜ್ಯಗಳಲ್ಲಿ ಈ ಯೋಜನೆಯನ್ನು ಅಳವಡಿಸಲು ವ್ಯವಸ್ಥೆಯನ್ನು ಮಾಡತಕ್ಕದ್ದೆಂದು ಸಮ್ಮೇಳನವು ಆಗ್ರಹಪೂರ್ವಕವಾಗಿ ಶಿಫಾರಸು ಮಾಡುತ್ತದೆ. [6ನೇ ಅಖಿಲ ಭಾರತ ಸಚೇತಕರ ಸಮ್ಮೇಳನ]"

"ದೆಹಲಿಯ ಶಾಲೆಗಳಲ್ಲಿ 'ಅಣಕು ಸಂಸತ್' ಯೋಜನೆಯ ಯಶಸ್ವಿ ಅನುಷ್ಠಾನವನ್ನು ಹಾಗೂ ಪ್ರಮುಖ ಸಂಸದರು, ಪತ್ರಿಕಾ ಮಾಧ್ಯಮಗಳು ಮತ್ತು ಶಿಕ್ಷಣ ತಜ್ಞರಿಂದ ಆ ಬಗ್ಗೆ ಬಂದ ವ್ಯಾಪಕ ಮೆಚ್ಚುಗೆಯನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಷ್ಟ್ರದಲ್ಲಿ ಸುಭದ್ರ ಸಂಸದೀಯ ಪದ್ಧತಿಯನ್ನು ಅನುಷ್ಠಾನಗೊಳಿಸುವ ದೃಷ್ಟಿಯಿಂದ ಸಮ್ಮೇಳನವು ಈ ಮುಂದಿನ ಶಿಫಾರಸ್ಸುಗಳನ್ನು ಮಾಡುತ್ತದೆ.–

(ಎ) ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು ಅನುಸರಿಸಿದ ಮಾದರಿಯನ್ನೇ ಅನುಸರಿಸಿ ಎಲ್ಲಾ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ತಮ್ಮ ತಮ್ಮ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮಕೈಗೊಳ್ಳತಕ್ಕದ್ದು;

(ಬಿ) ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು, ಅಗತ್ಯವಿದ್ದಲ್ಲಿ ಹಣಕಾಸು ನೆರವನ್ನು ನೀಡುವ ಮೂಲಕ ಯೋಜನೆಯನ್ನು ಜಾರಿಗೆ ತರಲು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಎಲ್ಲಾ ಬಗೆಯ ಪ್ರೋತ್ಸಾಹಗಳನ್ನು ನೀಡತಕ್ಕದ್ದು; ಮತ್ತು

(ಸಿ) ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು, ಯೋಜನೆಯನ್ನು ಈಗಾಗಲೇ ಜಾರಿಗೊಳಿಸಿರುವ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ನಡುವೆ ಅಂತರ್ ರಾಜ್ಯ ಸ್ಪರ್ಧೆಗಳನ್ನು ಸಹ ವ್ಯವಸ್ಥೆಗೊಳಿಸತಕ್ಕದ್ದು. [7ನೇ ಅಖಿಲ ಭಾರತ ಸಚೇತಕರ ಸಮ್ಮೇಳನ]"

7ನೇ ಅಖಿಲ ಭಾರತ ಸಚೇತಕರ ಸಮ್ಮೇಳನವು ಮಾಡಿದ ಮೇಲ್ಕಂಡ ಶಿಫಾರಸುಗಳ (ಬಿ) ಭಾಗದ ಪಾಲನೆಯಲ್ಲಿ, ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ – ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ನೀಡುವುದಕ್ಕಾಗಿ ಈ ಯೋಜನೆಯನ್ನು ರೂಪಿಸಿದೆ.

1. **ಯೋಜನೆಯ ಉದ್ದೇಶ:–** ಪ್ರಜಾಪ್ರಭುತ್ವದ ಬುನಾದಿಯನ್ನು ಭದ್ರಪಡಿಸುವ, ಶಿಸ್ತು, ಇತರರ ಅಭಿಪ್ರಾಯಗಳ ಬಗ್ಗೆ ತಾಳ್ಮೆ ಮುಂತಾದ ಆರೋಗ್ಯಕರ ಗುಣ ವಿಶೇಷಗಳನ್ನು ಮೈಗೂಡಿಸುವ ಮತ್ತು ವಿದ್ಯಾರ್ಥಿ ಸಮುದಾಯದಲ್ಲಿ ಸಂಸತ್ ಕಾರ್ಯ ಕಲಾಪದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ, ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು, ದೆಹಲಿಯಲ್ಲಿರುವ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ – "ಯುವ ಸಂಸತ್" ನ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವಂಥ ಮತ್ತು ದೆಹಲಿಯ ಎನ್‌ಸಿಟಿ ಸರ್ಕಾರದ ಶಿಕ್ಷಣ ನಿರ್ದೇಶನಾಲಯವು ಪ್ರಾಯೋಜಿಸಿದಂಥ ಶಾಲೆಗಳ ನಡುವೆ ಪ್ರತಿವರ್ಷ "ಯುವ ಸಂಸತ್ ಸ್ಪರ್ಧೆ" ನಡೆಸುತ್ತಾ ಬಂದಿದೆ. ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು, ಇಂಥವೇ ಸ್ಪರ್ಧೆಗಳನ್ನು ತಮ್ಮ ಮಾನ್ಯತೆ ಪಡೆದ ಶಾಲೆಗಳಲ್ಲಿ ನಡೆಸಲು ಹಣಕಾಸು ನೆರವನ್ನು ನೀಡುವುದೇ ಈ ಯೋಜನೆಯ ಉದ್ದೇಶ.

2. **ಯೋಜನೆಯ ಕಾರ್ಯಾಚರಣೆ:–** ಈ ಯೋಜನೆಯನ್ನು ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಸಾರ್ವಜನಿಕ ಶಿಕ್ಷಣ ನಿರ್ದೇಶಕರ ಸಹಯೋಗದೊಂದಿಗೆ ಸಂಬಂಧಪಟ್ಟ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆಯ ಮೂಲಕ ನಿರ್ವಹಿಸಲಾಗುವುದು. ಸಂಸದೀಯ ವ್ಯವಹಾರಗಳ ಇಲಾಖೆಯು ಇಲ್ಲದಿರುವ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ, ಯೋಜನೆಯನ್ನು ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ನೇರವಾಗಿ ಕಾರ್ಯಗತಗೊಳಿಸುತ್ತದೆ.

3. **ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಅರ್ಹತೆ:–** ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಮಾನ್ಯತೆ ಪಡೆದ ಎಲ್ಲಾ ಹೈಯರ್ ಸೆಕೆಂಡರಿ ಸಂಸ್ಥೆಗಳು/ಪ್ರೌಢ ಶಾಲೆಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆ ಹೊಂದಿವೆಯೆಂದು ಪರಿಗಣಿಸಬಹುದು. ಭಾಗವಹಿಸುವ ಶಾಲೆಗಳ ಪಟ್ಟಿಯನ್ನು, ಪ್ರತಿವರ್ಷದ ಮಾರ್ಚ್ 31ರೊಳಗೆ ಸಂದರ್ಭಾನುಸಾರ, ಸಂಬಂಧಪಟ್ಟ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ ಅಥವಾ ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ಅಂತಿಮಗೊಳಿಸುತ್ತವೆ.

4. **ಯುವ ಸಂಸತ್ ಸ್ಪರ್ಧೆಯನ್ನು ನಡೆಸುವ ಅವಧಿ:–** “ಯುವ ಸಂಸತ್ ಸ್ಪರ್ಧೆ” ಯನ್ನು, ಪ್ರತಿವರ್ಷವು ನಡೆಸಲಾಗುವುದು. ಈ ಬಗ್ಗೆ ಸವಿವರ ಕಾರ್ಯಕ್ರಮವನ್ನು ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ರೂಪಿಸತಕ್ಕದ್ದು ಮತ್ತು ವಾರ್ಷಿಕ ಸ್ಪರ್ಧೆಯಲ್ಲಿ ಭಾಗವಹಿಸಲಿರುವ ಸಂಸ್ಥೆಗಳಿಗೆ ಸುತ್ತೋಲೆ ಮೂಲಕ ತಿಳಿಸತಕ್ಕದ್ದು. ಸದರಿ ವಿಷಯವನ್ನು ನವದೆಹಲಿಯ ಭಾರತ ಸರ್ಕಾರದ ಸಂಸದೀಯ ವ್ಯವಹಾರ ಮಂತ್ರಾಲಯಕ್ಕೂ ತಿಳಿಸತಕ್ಕದ್ದು.

5. **ಯುವ ಸಂಸತ್ತಿನಲ್ಲಿ ಭಾಗವಹಿಸುವವರ ಸಂಖ್ಯೆ:–** ಪ್ರತಿಯೊಂದು ಶಾಲೆಯಲ್ಲಿ “ಯುವ ಸಂಸತ್ ಸ್ಪರ್ಧೆಯನ್ನು” ನಡೆಸುವುದಕ್ಕಾಗಿ ಬೇಕಾಗುವ ವಿದ್ಯಾರ್ಥಿಗಳ ಸಂಖ್ಯೆಗೆ ಯಾವುದೇ ಮಿತಿ ಇಲ್ಲ. ಆದಾಗ್ಯೂ, ಅಧಿವೇಶನದ ಅವಧಿಯನ್ನು ಸೀಮಿತಗೊಳಿಸುವುದು ಅಪೇಕ್ಷಣೀಯವಾಗಿರುವ ಕಾರಣ, ಭಾಗವಹಿಸಿರುವ ವಿದ್ಯಾರ್ಥಿಗಳಲ್ಲಿ ಹಲವರು ಸಂಸತ್ತಿನ ಅಧಿವೇಶನದ ಒಂದು ಚಿತ್ರಣವನ್ನು ಮೂಡಿಸುವುದಕ್ಕೆ ಮಾತ್ರವೇ ಸುಮ್ಮನೆ ಕುಳಿತುಕೊಂಡಿರಬೇಕಾಗುತ್ತದೆ ಮಾತ್ರವಲ್ಲದೆ ಅವರಿಗೆ ಮಾತನಾಡುವ ಅಗತ್ಯವಿರುವುದಿಲ್ಲ.

6. **ಯುವ ಸಂಸತ್ತಿನ ಅಧಿವೇಶನದ ಅವಧಿ:–** ಯುವ ಸಂಸತ್ತಿನ ಅಧಿವೇಶನದ ಅವಧಿಯು ಒಂದು ಗಂಟೆ ಅವಧಿಯನ್ನು ಮೀರತಕ್ಕದಲ್ಲ ಮತ್ತು ಇದರಲ್ಲಿ ಸುಮಾರು 20 ನಿಮಿಷಗಳ ಅವಧಿಯನ್ನು ಪ್ರಶ್ನೆಗಳಿಗೆ ಕಾಯ್ದಿರಿಸತಕ್ಕದ್ದು.

7. **ಯುವ ಸಂಸತ್ತಿನ ಅಧಿವೇಶನದಲ್ಲಿಯ ಚರ್ಚೆಯ ವಿಷಯ:–** ಪ್ರಶ್ನೋತ್ತರಗಳಿಗೆ ಅಥವಾ ಇತರ ಚರ್ಚೆಗೆ ಯಾವುದೇ ನಿರ್ದಿಷ್ಟ ವಿಷಯಗಳನ್ನು ಗೊತ್ತುಪಡಿಸಿರುವುದಿಲ್ಲ. ಆದಾಗ್ಯೂ, ಯುವ ಸಂಸತ್ತಿನಲ್ಲಿ ಕೇಳಲಾಗುವ ಪ್ರಶ್ನೆಗಳು, ಕ್ಷೇಮಾಭ್ಯುದಯ ಕಾರ್ಯ ಚಟುವಟಿಕೆಗಳು, ರಾಷ್ಟ್ರದ ರಕ್ಷಣೆ, ಸಾಮಾಜಿಕ ನ್ಯಾಯ, ಸಮಾಜ ಸುಧಾರಣೆಗಳು, ಆರ್ಥಿಕ ಅಭಿವೃದ್ಧಿ, ಮತೀಯ ಸಾಮರಸ್ಯ, ಆರೋಗ್ಯ, ವಿದ್ಯಾರ್ಥಿಗಳಲ್ಲಿ ಶಿಸ್ತು ಮುಂತಾದವುಗಳಿಗೆ ಸಂಬಂಧಿಸಿದ ವಿಷಯಗಳಾಗಿರುವುದು ಅಪೇಕ್ಷಣೀಯ.

8. **ಭಾಷೆ:–** ಭಾಗವಹಿಸುವವರು, ಹಿಂದಿ ಅಥವಾ ಇಂಗ್ಲಿಷ್ ಅಥವಾ ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ನಿರ್ದಿಷ್ಟಪಡಿಸಬಹುದಾದಂಥ ಪ್ರಾದೇಶಿಕ ಭಾಷೆಯಲ್ಲಿ ಮಾತನಾಡಬಹುದು.

9. **ಯುವ ಸಂಸತ್ ನಡೆಯುವ ಸ್ಥಳ:–** ಪ್ರತಿಯೊಂದು ಸಂಸ್ಥೆಯು, ಯುವ ಸಂಸತ್ ಸ್ಪರ್ಧೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ತನ್ನದೇ ಆದ ಕಟ್ಟಡದಲ್ಲಿ ಅಥವಾ ತಾನು ಇಚ್ಛಿಸುವಂಥ ಯಾವುದೇ ಇತರ ಸ್ಥಳದಲ್ಲಿ ನಡೆಸತಕ್ಕದ್ದು. ಸ್ಪರ್ಧೆಯಲ್ಲಿ ಭಾಗವಹಿಸುವ ಸಂಸ್ಥೆಗಳು, ಸಂಬಂಧಪಟ್ಟ ರಾಜ್ಯದ ಸಂಸದೀಯ ವ್ಯವಹಾರಗಳ ಇಲಾಖೆಗೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯಕ್ಕೆ ಚರ್ಚೆಯ ವಿಷಯಗಳ ಮಾಹಿತಿಯೊಂದಿಗೆ ಸ್ಪರ್ಧೆ ನಡಸುವ ಸ್ಥಳದ ವಿವರಗಳನ್ನು ಸ್ಪರ್ಧೆಯ ದಿನಾಂಕಕ್ಕಿಂತ ಹತ್ತು ದಿನಗಳ ಮೊದಲೇ ತಿಳಿಸತಕ್ಕದ್ದು.

10. **ಬಹುಮಾನಗಳು:–** ಈ ಮುಂದಿನ ಬಹುಮಾನಗಳನ್ನು ಇರಿಸಲಾಗಿದೆ:–

(i) ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಸಂಸ್ಥೆಗೆ ಪಾರಿತೋಷಕ (ಸಂಸದೀಯ ಪಾರಿತೋಷಕ).

(ii) ಅರ್ಹತೆಯ ಆಧಾರದ ಮೇಲೆ ಸ್ಪರ್ಧೆಯಲ್ಲಿನ ಉತ್ತಮ ಗುಣಮಟ್ಟದ ಪ್ರದರ್ಶನಕ್ಕಾಗಿ ಮೊದಲ ಐದು ಸ್ಥಾನ ಪಡೆದ ಸಂಸ್ಥೆಗಳಿಗೆ ಟ್ರೋಫಿಗಳು.

(iii) ಪ್ರತಿಯೊಂದು ಸಂಸ್ಥೆಯಿಂದ ಭಾಗವಹಿಸಿರುವ ವಿದ್ಯಾರ್ಥಿಗಳಿಂದ ಆಯ್ಕೆ ಮಾಡಲಾದವರಿಗೆ ಪದಕಗಳು / ಕಪ್ಪುಗಳು/ಪುಸ್ತಕಗಳ ರೂಪದಲ್ಲಿ ವೈಯಕ್ತಿಕ ಬಹುಮಾನಗಳು. ಬಹುಮಾನಗಳ ಒಟ್ಟು ಸಂಖ್ಯೆಯು 80ನ್ನು ಮೀರತಕ್ಕದ್ದಲ್ಲ.

(iv) ಇತರೆ ವೆಚ್ಚಗಳು.

**ಸೂಚನೆ:–** ಸಂಬಂಧಪಟ್ಟ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ಸ್ಥಳೀಯ ಪರಿಸ್ಥಿತಿಗಳಿಗೆ ಅನುಸಾರವಾಗಿ ಮೇಲಿನ ನಾಲ್ಕು ಬಾಬುಗಳಿಗೆ ಸಂಬಂಧಿಸಿದ ವೆಚ್ಚವನ್ನು ವ್ಯತ್ಯಾಸಗೊಳಿಸಬಹುದು. ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯದಿಂದ ಮರುಸಂದಾಯವಾಗುವ ಗರಿಷ್ಠ ಮೊಬಲಗು ವಾರ್ಷಿಕವಾಗಿ, ಯೋಜನೆಯ 15ನೇ ಕಂಡಿಕೆಯಲ್ಲಿ ಹೇಳಿರುವುದನ್ನು ಮೀರತಕ್ಕದ್ದಲ್ಲ.

ಪಾರಿತೋಷಕವು ಪರ್ಯಾಯ ಪಾರಿತೋಷಕವಾಗಿದ್ದು ಅದನ್ನು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಹೊಂದಿದ ಸಂಸ್ಥೆಯು ಒಂದು ವರ್ಷದವರೆಗೆ ಉಳಿಸಿಕೊಳ್ಳಬಹುದಾಗಿದೆ. ಆದಾಗ್ಯೂ, ಒಂದೇ ಸಂಸ್ಥೆಯು ಮೂರು ನಿರಂತರ ವರ್ಷಗಳು ಪಾರಿತೋಷಕವನ್ನು ಗೆದ್ದರೆ ಆ ಸಂಸ್ಥೆಯೇ ಅದನ್ನು ಖಾಯಂ ಆಗಿ ಇಟ್ಟುಕೊಳ್ಳುವುದು.

ಅನುಬಂಧ–I ರಲ್ಲಿ ಇದ್ದಂತೆ ಒಂದು ಪ್ರಮಾಣ ಪತ್ರವನ್ನು ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ಸಂಸ್ಥೆಗಳಿಗೆ ನೀಡತಕ್ಕದ್ದು.

ಅನುಬಂಧ–IIರಲ್ಲಿ ಇದ್ದಂತೆ ಒಂದು ಪ್ರಮಾಣ ಪತ್ರವನ್ನು ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನವನ್ನು ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ನೀಡತಕ್ಕದ್ದು.

**11. ತೀರ್ಪುಗಾರರ ಸಮಿತಿ:–** ಪ್ರತಿಯೊಂದು ಸಂಸ್ಥೆಗಳ ಮೌಲ್ಯ ಮಾಪನಕ್ಕಾಗಿ ತೀರ್ಪುಗಾರರ ಸಮಿತಿಯನ್ನು ಸಂಬಂಧಿಸಿದ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ರಚಿಸತಕ್ಕದ್ದು ಹಾಗೂ ಅದರಲ್ಲಿ ಶಿಕ್ಷಣ ತಜ್ಞರು ವಿಧಾನಸಭೆ/ಪರಿಷತ್ತಿನ ಸದಸ್ಯರು ಮತ್ತು ಸಂಸದೀಯ ಸಂಸ್ಥೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟ ಇತರರನ್ನು ಒಳಗೊಂಡಿರಬಹದು. ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯದ ಒಬ್ಬ ಅಧಿಕಾರಿಯು ಸಮಿತಿಯ ಪದನಿಮಿತ್ತ ಸದಸ್ಯರಾಗಿರತಕ್ಕದ್ದು.

**12. ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವಾಗ ಪರಿಗಣಿಸಬೇಕಾದ ಅಂಶಗಳು.–** ಸ್ಪರ್ಧೆಯಲ್ಲಿ ಸಾಧನೆಯನ್ನು ನಿರ್ಧರಿಸುವಾಗ ಸಮಿತಿಯು, ಈ ಮುಂದಿನ ಅಂಶಗಳನ್ನು ಗಮನದಲ್ಲಿಟ್ಟು ಕೊಂಡಿರತಕ್ಕದ್ದು.

**13. ಮರು ಪ್ರದರ್ಶನ:–** ಪ್ರತಿ ವರ್ಷದ ಸ್ಪರ್ಧೆಗಳ ಮುಕ್ತಾಯದ ಸಂದರ್ಭದಲ್ಲಿ ಸಂಬಂಧಿಸಿದ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ನಿರ್ಧರಿಸಬಹುದಾದ ಸ್ಥಳ ಮತ್ತು ದಿನಾಂಕದಂದು ಸ್ಪರ್ಧೆಯ ಬಹುಮಾನ ವಿತರಣೆಯ ಸಮಾರಂಭದಲ್ಲಿ, ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಸಂಸ್ಥೆಯು ಮತ್ತೊಮ್ಮೆ ಪ್ರದರ್ಶನ ಮಾಡುವಂತೆ ಅಗತ್ಯಪಡಿಸಬಹುದು.

14. **ವರದಿ:–** ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ಸ್ಪರ್ಧೆಯು ಮುಗಿದ ಮೇಲೆ ಅನುಬಂಧ–IIIರಲ್ಲಿ ನಿಯಮಿಸಲಾದ

ನಮೂನೆಯಲ್ಲಿ, ಅದರಲ್ಲಿ ಮೆರಿಟ್ ಆಧಾರದ ಮೇಲೆ, ಮೊದಲನೇ ಐದು ಸ್ಥಾನ ಪಡೆದ ಶಾಲೆಗಳೂ ಸೇರಿದಂತೆ ಭಾಗವಹಿಸಿದ ಎಲ್ಲಾ ಶಾಲೆಗಳ ಸಂಖ್ಯೆಯನ್ನು ಸೂಚಿಸಿ ವೈಯಕ್ತಿಕ ಬಹುಮಾನಗಳ ಸಂಖ್ಯೆ ಮುಂತಾದವುಗಳನ್ನು ಒಳಗೊಂಡ ಒಂದು ವರದಿಯನ್ನು ತಯಾರಿಸತಕ್ಕದ್ದು. ವರದಿಯಲ್ಲಿ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಕ್ಕೆ ಮರುಸಂದಾಯ ಮಾಡಬೇಕಾದ ಮೊಬಲಗನ್ನು ಸ್ಪಷ್ಟವಾಗಿ ಮತ್ತು ಪ್ರತ್ಯೇಕವಾಗಿ ಸೂಚಿಸತಕ್ಕದ್ದು. ವರದಿಯನ್ನು ಸಂಬಂಧಿಸಿದ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಯೋಜನೆಯ ಪ್ರಭಾರವನ್ನು ಹೊಂದಿರುವ ಇಲಾಖೆಯ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ಪ್ರತಿನಿಧಿಯು ಸಹಿ ಮಾಡತಕ್ಕದ್ದು. ಚೆಕ್ಕನ್ನು ಯಾರಿಗೆ ಸಂದಾಯ ಮಾಡಲು ಬರೆಯಬೇಕು ಮತ್ತು ಲೆಕ್ಕ ಶೀರ್ಷಿಕೆ ಮುಂತಾದ ವಿವರಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

ನಿಯಮಿಸಲಾದ ನಮೂನೆಯಲ್ಲಿನ ವರದಿಯನ್ನು ಯೋಜನೆಯ ಅಡಿಯಲ್ಲಿ ಹಣಕಾಸಿನ ನೆರವಿನ ಕೋರಿಕೆಯೊಂದಿಗೆ ಸಂಸದೀಯ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಇವರಿಗೆ ಕಳುಹಿಸತಕ್ಕದ್ದು.

**15. ವೆಚ್ಚದ ಮರುಸಂದಾಯದ ಪರಿಮಿತಿ:–** ರಾಜ್ಯ/ಕೇಂದ್ರಾಡಳಿತ ಪ್ರದೇಶ ಸರ್ಕಾರಗಳು ಮಾಡಿದ ವಾಸ್ತವಿಕ ವೆಚ್ಚವನ್ನು, ವರದಿಯನ್ನು ಆಧರಿಸಿ ಈ ಮುಂದಿನ ಮಿತಿಗೊಳಪಟ್ಟು ಸಂಸದೀಯ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರದಿಂದ ಮರುಸಂದಾಯ ಮಾಡಲಾಗುವುದು:

| | |
|---|---|
| (ಎ) 100ರವರೆಗೆ ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳು | ಪ್ರತಿವರ್ಷಕ್ಕೆ 3 ಲಕ್ಷ ರೂಪಾಯಿಗಳು |
| (ಬಿ) 100ರಿಂದ 200ರ ನಡುವೆ ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳು | ಪ್ರತಿವರ್ಷಕ್ಕೆ 4 ಲಕ್ಷ ರೂಪಾಯಿಗಳು |
| (ಸಿ) 200ಕ್ಕೂ ಹೆಚ್ಚಿನ ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳು | ಪ್ರತಿ ವರ್ಷಕ್ಕೆ 5 ಲಕ್ಷ ರೂಪಾಯಿಗಳು |

(ವಿಧಾನಮಂಡಲಗಳನ್ನು ಹೊಂದಿರದ ಕೇಂದ್ರಾಡಳಿತ ಪ್ರದೇಶಗಳ ಸಂಬಂಧದಲ್ಲಿ ಮಿತಿಯು ಪ್ರತಿಯೊಂದು ಕೇಂದ್ರಾಡಳಿತ ಪ್ರದೇಶಕ್ಕೆ ಪ್ರತಿವರ್ಷಕ್ಕೆ 5,00,000/– ರೂಪಾಯಿಗಳು ಆಗಿರುತ್ತದೆ)

––– * ––  –*––– –– *– ––

**ಅನುಬಂಧ – I**

**ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ**
**ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/ನಿರ್ದೇಶನಾಲಯ**

**"ಯುವ ಸಂಸತ್ ಸ್ಪರ್ಧೆ"**

(ಶಾಲೆಯ ಹೆಸರು)

---------------------------------------------------------------

ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯ, ನವದೆಹಲಿ ಇವರು -------ನೇ ವರ್ಷದಲ್ಲಿ ನಡೆಸಿದ "ಯುವ ಸಂಸತ್" ಸ್ಪರ್ಧೆಯಲ್ಲಿ ಭಾಗವಹಿಸಿದೆಯೆಂದು ಪ್ರಮಾಣೀಕರಿಸಲಾಗಿದೆ.

**ಸಕ್ಷಮ ಪ್ರಾಧಿಕಾರಿ**
**ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/**
**ನಿರ್ದೇಶನಾಲಯ.**

## ಅನುಬಂಧ – II

**ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ**

**ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/ನಿರ್ದೇಶನಾಲಯ**

....

**"ಯುವ ಸಂಸತ್ ಸ್ಪರ್ಧೆ"**

-------------------------------ಶಾಲೆಯ --------------------- ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ --------------------------------ಅವರಿಗೆ ---------------- ವರ್ಷದಲ್ಲಿ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯ, ನವದೆಹಲಿ ಇವರ ನೇತೃತ್ವದಲ್ಲಿ ನಡೆಸಲಾದ "ಯುವ ಸಂಸತ್ ಸ್ಪರ್ಧೆ" ಯಲ್ಲಿನ ಅತ್ಯುತ್ತಮ ಸಾಧನೆಗೆ ----------------------------ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

**ಸಕ್ಷಮ ಪ್ರಾಧಿಕಾರಿ**
**ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/**
**ನಿರ್ದೇಶನಾಲಯ.**

## ಅನುಬಂಧ – III

**ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ *ಸರ್ಕಾರವು --------ವರ್ಷದಲ್ಲಿ ನಡೆಸಿದ ಯುವ ಸಂಸತ್ ಸ್ಪರ್ಧೆಯ ವರದಿ– ಹಣಕಾಸು ನೆರವಿನ ಕೋರಿಕೆ.**

| | | | |
|---|---|---|---|
| 1. | ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಹೆಸರು: | | |
| 2. | ಯುವ ಸಂಸತ್ ಸ್ಪರ್ಧೆಯನ್ನು ನಡೆಸಿದ ಮತ್ತು ಮರು ಸಂದಾಯದ ಕ್ಲೇಮನ್ನು ಮಾಡಿದ ಹಣಕಾಸಿನ ವರ್ಷ: | | |
| 3. | ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿದ ಶಾಲೆಗಳ ಸಂಖ್ಯೆ: | | |
| 4. | ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ: | | |
| 5. | ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನಗಳನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ: | | |
| 6. | ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಮೊದಲ ಐದು ಸ್ಥಾನಗಳನ್ನು ಗಳಿಸಿದ ಶಾಲೆಗಳ, ಮೆರಿಟ್ ಆಧಾರದ ಮೇಲೆ, ಹೆಸರು ಮತ್ತು ವಿಳಾಸ: | | |
| 7. | ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರವು ಕ್ಲೇಮು ಮಾಡಿದ ಮೊಬಲಗು: | | |
| | **ವೆಚ್ಚಗಳ ಬಾಬು** | **ವೆಚ್ಚ ಮಾಡಿದ ಒಟ್ಟು ಮೊಬಲಗು** | **ಕ್ಲೇಮು ಮಾಡಿದ ಮೊಬಲಗು** |
| | **ವಿಷಯಾಭಿಮುಖ ಶಿಕ್ಷಣಕ್ಕಾಗಿ**<br>1.<br>2. | | |
| | **ಯುವಸಂಸತ್ ಸ್ಪರ್ಧೆಯ ವ್ಯವಸ್ಥೆಗಾಗಿ**<br>1.<br>2. | | |
| | **ಬಹುಮಾನ ವಿತರಣೆ ಸಮಾರಂಭಕ್ಕಾಗಿ**<br>1.<br>2. | | |
| 8. | ಚೆಕ್ಕನ್ನು ಯಾರ ಹೆಸರಿಗೆ ನೀಡಬೇಕೋ ಅವರ ಹೆಸರು/ವಿಳಾಸ/ದೂರವಾಣಿ ಸಂಖ್ಯೆ ಮತ್ತು ಲೆಕ್ಕ ಶೀರ್ಷಿಕೆಯ ವಿವರ. | | |

1. ಮೇಲೆ ಸೂಚಿಸಿದಂತೆ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ನಡೆಸಲಾಯಿತು.
2. ವೆಚ್ಚದ ಮರುಸಂದಾಯದ ಕ್ಲೇಮುಗಳನ್ನು ಮೂಲ ಓಚರುಗಳೊಂದಿಗೆ ತಾಳೆ ನೋಡಲಾಗಿದ್ದು ಅವುಗಳು ಸರಿಯಾಗಿದೆ ಎಂದು ಕಂಡುಬಂದಿದೆ.

– ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ:

**(ಹೆಸರು)**

**ಪದನಾಮದ**

(ಉಪಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಗಳು ಸಹಿಮಾಡುವುದು)

**ರಾಜ್ಯ/ಕೇಂದ್ರಾಡಳಿತ ಪ್ರದೇಶ ಸರ್ಕಾರದ ವಿಳಾಸ,**

**ದೂರವಾಣಿ ಸಂಖ್ಯೆ/ ಇಮೇಲ್ ಐ.ಡಿ.**

**ಸೂಚನೆ:–**

**ವಿಷಯಾಭಿಮುಖ ಶಿಕ್ಷಣ** ಎಂದರೆ ಯುವ ಸಂಸತ್ತನ್ನು ನಡೆಸುವುದರ ಪ್ರಭಾರದಲ್ಲಿರುವ ಶಿಕ್ಷಕರ/ಶಿಕ್ಷಣ ಅಧಿಕಾರಿಗಳ ಪ್ರಯೋಜನಕ್ಕಾಗಿ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ನೋಡಲ್ ಪ್ರಾಧಿಕಾರಿಗಳು ನಡೆಸುವ ಒಂದು ಕೋರ್ಸು. ಭಾಗವಹಿಸುವವರಿಗೆ ಹಂಚುವ ಸಾಹಿತ್ಯ/ಲೇಖನ ಸಾಮಗ್ರಿಗಳ ರೂಪದಲ್ಲಿ ವೆಚ್ಚಗಳುಂಟಾಗುತ್ತವೆ.

**ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆ** ಎಂದರೆ, ಸ್ಪರ್ಧೆಯನ್ನು ನಡೆಸುವುದಕ್ಕೆ ವಹಿಸಿದ ವೆಚ್ಚ, ಇದು ಉಪಹಾರಕ್ಕೆ, ಭಾಗವಹಿಸುವ ವಿದ್ಯಾರ್ಥಿಗಳ ಸಾರಿಗೆ ವ್ಯವಸ್ಥೆಗೆ, ಬಹುಮಾನ/ಪಾರಿತೋಷಕ ಮುಂತಾದವುಗಳಿಗೆ ತಗಲಿದ ವೆಚ್ಚವನ್ನು ಒಳಗೊಳ್ಳುತ್ತದೆ.

**ಬಹುಮಾನ ವಿತರಣೆ ಸಮಾರಂಭ** ಎಂದರೆ, ರಾಜ್ಯ ಮಟ್ಟದ ಬಹುಮಾನ ವಿಜೇತರು ಮುಂತಾದವರಿಗೆ ಬಹುಮಾನಗಳು/ಷೀಲ್ಡ್‌ಗಳನ್ನು (ಪಾರಿತೋಷಕಗಳನ್ನು) ವಿತರಣೆ ಮಾಡುವುದಕ್ಕಾಗಿ ನಡೆಸಿದ ಸಮಾರಂಭ, ಇದು ಪ್ರತಿಭಾನ್ವಿತ ಶಾಲೆಗಳು ಮತ್ತು ವಿದ್ಯಾರ್ಥಿಗಳಿಗೆ ಪುಸ್ತಕಗಳು, ನೆನಪಿನ ಕಾಣಿಕೆಗಳು, ಪ್ರಮಾಣ ಪತ್ರಗಳು, ಷೀಲ್ಡ್‌ಗಳ (ಪಾರಿತೋಷಕಗಳು) ರೂಪದಲ್ಲಿ ಬಹುಮಾನ ಮುಂತಾದವುಗಳಿಗಾಗಿ ವಹಿಸಿದ ವೆಚ್ಚವನ್ನು ಒಳಗೊಳ್ಳುತ್ತದೆ.

(ಮರುಸಂದಾಯದ ಕ್ಲೇಮಿನಲ್ಲಿ, ಶಿಕ್ಷಕರಿಗೆ/ಅಧಿಕಾರಿಗಳಿಗೆ, ಪ್ರಯಾಣಭತ್ಯೆ/ದಿನಭತ್ಯೆಗಳ ವೆಚ್ಚಗಳನ್ನು ಸೇರಿಸತಕ್ಕದ್ದಲ್ಲ)

*ಸ್ಪರ್ಧೆಗಾಗಿ ವಹಿಸಿದ ವೆಚ್ಚಗಳ ಮರುಸಂದಾಯಕ್ಕಾಗಿ "ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ಯೋಜನೆ"ಯ 14ನೇ ಕಂಡಿಕೆಯಲ್ಲಿ ಹೇಳಿರುವಂತೆ, ಯುವ ಸಂಸತ್ ಸ್ಪರ್ಧೆಗಳು ಮುಕ್ತಾಯವಾದ ಮೇಲೆ, ರಾಜ್ಯ/ಕೇಂದ್ರಾಡಳಿತ ಸರ್ಕಾರಗಳು ಭರ್ತಿ ಮಾಡಿ ಕಳುಹಿಸಬೇಕು.

## ಜಿಲ್ಲಾಮಟ್ಟದ ಯುವ ಸಂಸತ್ ಸ್ಪರ್ಧೆಯ ಮಾರ್ಗಸೂಚಿಗಳು

**1. ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆ:–** (ಎ) ಸಂಬಂಧಪಟ್ಟ ಶೈಕ್ಷಣಿಕ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ತಮ್ಮ ಜಿಲ್ಲೆಯ ನೋಡಲ್ ಅಧಿಕಾರಿ ಹಾಗೂ ಇತರ ಸಿಬ್ಬಂದಿಯ ಸಮನ್ವಯದೊಂದಿಗೆ ಯುವಸಂಸತ್ ಸ್ಪರ್ಧೆಯನ್ನು ಸರ್ಕಾರ ನಿಗದಿಪಡಿಸಿದ ಕಾಲಮಿತಿಯೊಳಗೆ ವ್ಯವಸ್ಥಿತವಾಗಿ ನಡೆಸತಕ್ಕದ್ದು. ಸ್ಪರ್ಧೆಗಾಗಿ ಉತ್ತಮ ವೇದಿಕೆ, ಧ್ವನಿವರ್ಧಕ, ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಉಪಹಾರ, ಸ್ಪರ್ಧಾವಿಜೇತರಿಗೆ ಬಹುಮಾನ, ಮುಂತಾದವನ್ನು ಪ್ರತಿ ಜಿಲ್ಲೆಗೆ ನೀಡಲಾಗುವ ಅನುದಾನದಿಂದ ಏರ್ಪಾಡು ಮಾಡತಕ್ಕದ್ದು.

(ಬಿ) ಜಿಲ್ಲಾ ಮಟ್ಟದ ಸ್ಪರ್ಧೆಗೆ 2009–10ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪ್ರತಿಯೊಂದು ಜಿಲ್ಲೆಗೆ ರೂ. 6,000/– (ಆರು ಸಾವಿರ ರೂಪಾಯಿಗಳು ಮಾತ್ರ) ಅಥವಾ ಸ್ಪರ್ಧೆಯ ವಾಸ್ತವ ವೆಚ್ಚ ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ಮೂಲಕ ನೀಡಲಾಗುವುದು.

**2. ಯುವ ಸಂಸತ್ ಸ್ಪರ್ಧೆಗಳಿಗೆ ವಿಧ್ಯಾರ್ಥಿಗಳನ್ನು ಆಯ್ಕೆ ಮಾಡುವ ವಿಧಾನ.–** ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಗಳಿಗೆ ಕರ್ನಾಟಕ ರಾಜ್ಯದ ಮಾನ್ಯತೆ ಪಡೆದ ಎಲ್ಲಾ ಪ್ರೌಢ ಶಾಲೆಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವ ಅರ್ಹತೆ ಹೊಂದಿರುವುದರಿಂದ ಸುಮಾರು 60 ರಿಂದ 90 ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಅವಕಾಶ ನೀಡಬೇಕು. ಇದಕ್ಕಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಈ ಮುಂದೆ ಹೇಳಿದ ಅರ್ಹತೆಗಳನ್ನು ಸಾಮಾನ್ಯವಾಗಿ ಪರಿಗಣಿಸಬೇಕು.

(1) ಚರ್ಚಿಸುವ ಸಾಮರ್ಥ್ಯವಿರುವ ವಿದ್ಯಾರ್ಥಿಗಳು.

(2) ನಮ್ಮ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಬಗ್ಗೆ ಸಾಕಷ್ಟು ಚೆನ್ನಾಗಿ ತಿಳಿದುಕೊಂಡ ವಿದ್ಯಾರ್ಥಿಗಳು.

(3) ತಮ್ಮ ತಮ್ಮ ತರಗತಿಗಳಲ್ಲಿ ಉತ್ತಮ ಮೆರಿಟ್ ಪಡೆದಿರುವ ವಿದ್ಯಾರ್ಥಿಗಳು.

(4) ಮುಖಂಡತ್ವದ ಗುಣಗಳಿರುವ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು.

(5) ಮಾಧ್ಯಮಿಕ ಶಾಲೆಗಳು ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು.

ಪ್ರತಿ ವರ್ಷವೂ ಹೊಸ ವಿದ್ಯಾರ್ಥಿಗಳ ಗುಂಪುಗಳಿಗೆ ಆದ್ಯತೆ ನೀಡಿ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ನೋಡಿಕೊಳ್ಳಬೇಕೆಂದು ಮತ್ತು ಪ್ರಶ್ನೋತ್ತರ ಅವಧಿಯಲ್ಲಿ ಮತ್ತು ಇತರ ಶಾಸನ–ಕಲಾಪಗಳ ಅವಧಿಯಲ್ಲಿ ಆಯ್ಕೆ ಮಾಡಿದ ವಿಷಯಗಳಿಗೆ ಸಂಬಂಧಪಟ್ಟ ಅಂಕಿ ಅಂಶಗಳನ್ನು ಸಂಗ್ರಹಿಸುವಂತೆ ಅವರಿಗೆ ಸೂಚಿಸಬೇಕು. ವಿದ್ಯಾರ್ಥಿನಿಯರಿಗೂ ಯುವ ಸಂಸತ್ತಿನಲ್ಲಿ ಭಾಗವಹಿಸಲು ಸಮಾನ ಅವಕಾಶ ನೀಡತಕ್ಕದ್ದು.

**3. ಯುವ ಸಂಸತ್ ರಚನೆ.–** (ಎ) ಪ್ರತಿ ಜಿಲ್ಲೆಯಲ್ಲಿ, ನಿಗದಿತ ದಿನಾಂಕ ಹಾಗೂ ಸ್ಥಳದಲ್ಲಿ ಅಧಿವೇಶನದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳು ಹತ್ತು ಗಂಟೆಗೆ ತಮ್ಮ ಹೆಸರನ್ನು ನೋಂದಾಯಿಸುವರು.

(ಬಿ) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯಿಂದ ನಿಯೋಜಿತ ತೀರ್ಪುಗಾರರ ಸಮಿತಿಯ ಸದಸ್ಯರು ವಿದ್ಯಾರ್ಥಿಗಳನ್ನು,–

| | |
|---|---|
| ಶೇಕಡ 60 | – ಆಡಳಿತ ಪಕ್ಷದ ಸದಸ್ಯರು. |
| ಶೇಕಡ 40 | – ವಿರೋಧ ಪಕ್ಷದ ಸದಸ್ಯರನ್ನಾಗಿ ವಿಂಗಡಿಸುವರು. |

(ಸಿ) ಆಡಳಿತ ಪಕ್ಷದ ಸದಸ್ಯರು ತಮ್ಮೊಳಗೆ ಇಬ್ಬರನ್ನು ಆರಿಸುವರು. ಇವರಲ್ಲಿ ಒಬ್ಬರನ್ನು “ಮುಖ್ಯಮಂತ್ರಿ” ಎಂದು ಕರೆಯಲಾಗುವುದು. ಹಾಗೂ ಇನ್ನೊಬ್ಬರನ್ನು ಸಭಾಧ್ಯಕ್ಷರು (speaker) ಯೆಂದು ಕರೆಯಲಾಗುವುದು. ಮುಖ್ಯಮಂತ್ರಿಯವರು ಆಡಳಿತ ಪಕ್ಷದ 5 ಸದಸ್ಯರನ್ನು ಮಂತ್ರಿಗಳನ್ನಾಗಿ ಆರಿಸುವರು. ಇವರನ್ನು

(ಅ) ಶಿಕ್ಷಣ ಸಚಿವರು.

(ಆ) ಗೃಹ ಸಚಿವರು.

(ಇ) ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು.

(ಈ) ಆರೋಗ್ಯ ಸಚಿವರು; ಹಾಗೂ

(ಉ) ಸಮಾಜ ಕಲ್ಯಾಣ ಸಚಿವರು.

ಎಂದು ನಾಮಕರಣ ಮಾಡಲಾಗುವುದು.

(ಡಿ) ವಿರೋಧ ಪಕ್ಷದ ಸದಸ್ಯರು ಸಮನಾದ ಮೂರು ಪಂಗಡಗಳಲ್ಲಿ ವಿಭಜಿಸಿ ಕೊಳ್ಳುವರು, ಪ್ರತಿಯೊಂದು ವಿರೋಧ ಪಕ್ಷವನ್ನು

(ಅ) ವಿರೋಧ ಪಕ್ಷ–1

(ಆ) ವಿರೋಧ ಪಕ್ಷ–2

(ಇ) ವಿರೋಧ ಪಕ್ಷ–3

ಎಂದು ಕರೆಯಲಾಗುವುದು. ವಿರೋಧ ಪಕ್ಷದ ಸದಸ್ಯರು ತಮ್ಮೊಳಗೆ ಒಬ್ಬ ನಾಯಕನನ್ನು ಆರಿಸುವರು. ಅವರನ್ನು ಆಯಾ ವಿರೋಧ ಪಕ್ಷದ ಹೆಸರಿನ ನಾಯಕರೆಂದು ಕರೆಯಲಾಗುವುದು.

4. **ಆಸನಗಳ ವ್ಯವಸ್ಥೆ.–** (ಎ) ಆಡಳಿತ ಪಕ್ಷದ ಸದಸ್ಯರು ಕೊಠಡಿಯ (ಇನ್ನು ಮುಂದೆ ಸದನ ಎಂದು ಕರೆಯಲಾಗುವುದು) ಬಲ ಭಾಗದಲ್ಲಿ, ವಿರೋಧ ಪಕ್ಷದ ಸದಸ್ಯರು ಸದನದ ಎಡಭಾಗದಲ್ಲಿ ಕುಳಿತು ಕೊಳ್ಳುವರು. ಸಭಾಧ್ಯಕ್ಷರ ಆಸನವು ಸದನದ ವೇದಿಕೆಯಲ್ಲಿ ಇರುವುದು. ಮುಖ್ಯಮಂತ್ರಿ ಹಾಗೂ ಇತರ ಸಚಿವರು ಆಡಳಿತ ಪಕ್ಷದ ಆಸನಗಳಲ್ಲಿ ಮುಂದಿನ ಸ್ಥಾನಗಳನ್ನು, ವಿರೋಧ ಪಕ್ಷದ ಮುಖಂಡರು ತಮ್ಮ ಪಕ್ಷದ ವಿಭಾಗದಲ್ಲಿ ಮುಂದಿನ ಸ್ಥಳಗಳಲ್ಲಿ ಆಸೀನರಾಗುವರು.

(ಬಿ) ತೀರ್ಪುಗಾರರ ಸಮಿತಿಯ ಸದಸ್ಯರು ಎಲ್ಲಾ ಸದಸ್ಯರನ್ನು ವೀಕ್ಷಿಸಲು ಹಾಗೂ ಆಲಿಸಲು ಸಾಧ್ಯವಾಗುವಂತಹ ಸೂಕ್ತ ಸ್ಥಳದಲ್ಲಿ ಆಸೀನರಾಗುವರು.

5. **ಸ್ಪರ್ಧೆಗಳನ್ನು ನಡೆಸುವ ವಿಧಾನ.–**(ಎ) ಮೊದಲಿಗೆ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರು ತಮ್ಮ ತಮ್ಮ ನಾಯಕರನ್ನು ಆಯ್ಕೆ ಮಾಡಲು ವಿಫಲರಾದಲ್ಲಿ ತೀರ್ಪುಗಾರರ ಸಮಿತಿಯ ಸದಸ್ಯರು ಅವರಿಗೆ ಮಾರ್ಗದರ್ಶನ ನೀಡುವರು ಅಥವಾ ಸೂಕ್ತ ವಿದ್ಯಾರ್ಥಿಯನ್ನು ನಾಮನಿರ್ದೇಶನ ಮಾಡುವರು. ಮೇಲಿನ ಪ್ರಕಾರ್ಯಗಳು 10–00 ಗಂಟೆಯಿಂದ 10–55 ರೊಳಗೆ ಮುಕ್ತಾಯಗೊಳ್ಳಬೇಕಾಗಿದೆ.

(ಬಿ) 11–00 ಗಂಟೆಗೆ "ಸಭಾಧ್ಯಕ್ಷರು ಸದನಕ್ಕೆ ಆಗಮಿಸುತ್ತಿದ್ದಾರೆ" ಯೆಂಬುದಾಗಿ ಶಾಲಾ ಸಿಬ್ಬಂದಿಯೊಬ್ಬರು ಘೋಷಿಸುವರು.

(ಸಿ) ಸದನದ ಸದದ್ಯರು ತಮ್ಮ ಆಸನಗಳಿಂದ ಎದ್ದು ನಿಲ್ಲುವರು. ಸಭಾಧ್ಯಕ್ಷರು ತಮ್ಮ ಸ್ಥಾನದಲ್ಲಿ ಕುಳಿತ ನಂತರ ಸದಸ್ಯರು ಆಸೀನರಾಗುವರು.

(ಡಿ) ಸಭಾಧ್ಯಕ್ಷರು.– 1. ಪ್ರಶ್ನೋತ್ತರ

ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳು

ಪ್ರಶ್ನೆ ಸಂಖ್ಯೆ–1

ಸಚಿವರು – ಉತ್ತರ ಒದಗಿಸಲಾಗಿದೆ.

ಸಭಾಧ್ಯಕ್ಷರು – ಪ್ರಶ್ನೆ ಸಂಖ್ಯೆ –2

ಸಚಿವರು – ಉತ್ತರ ಒದಗಿಸಲಾಗಿದೆ.

(ಇದೇ ಕ್ರಮವನ್ನು ಅನುಬಂಧ–3 ರ ಪ್ರಶ್ನೆಗಳ ಬಗ್ಗೆ ಅನುಸರಿಸಲಾಗುವುದು)

ಸಭಾಧ್ಯಕ್ಷರು – ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳು ಮುಗಿದಿವೆ.

ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳು

ಸಚಿವರು – ಉತ್ತರಗಳನ್ನು ಕಳುಹಿಸಲಾಗಿದೆ.

ಪ್ರಶ್ನೆ ಕೇಳುವ ಸದಸ್ಯರು – (ಅ) ಉತ್ತರಗಳು ತೃಪ್ತಿಕರವಿಲ್ಲ;

(ಆ) ಉತ್ತರಗಳು ಸತ್ಯಕ್ಕೆ ದೂರವಾಗಿದೆ.

(ಇ) ಮಾನ್ಯ ಸಚಿವರು ಆಶ್ವಾಸನೆ ಕೊಡಬೇಕು.

(ಮುಂತಾದ ವಿಷಯಗಳ ಬಗ್ಗೆ ಮಾತಾಡುವರು)

ಇತರೆ ಸದಸ್ಯರು – ಅಧ್ಯಕ್ಷರ ಅನುಮತಿಯೊಂದಿಗೆ ಉತ್ತರಗಳ ಬಗ್ಗೆ ಮಾತಾಡಬಹುದು.

(ಇದೇ ಕ್ರಮವನ್ನು ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಬಗ್ಗೆ ಜರುಗಿಸುವುದು)

(ಇ) **ಶೂನ್ಯ ವೇಳೆ.–** ವಿಧಾನ ಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ನಿಗದಿಪಡಿಸಿರುವ ಒಂದು ಕಾರ್ಯಕಲಾಪವನ್ನು ಪೂರೈಸಿದನಂತರ ಇನ್ನೊಂದು ಕಾರ್ಯಕಲಾಪ ಪ್ರಾರಂಭಿಸುವ ಅವಧಿಯನ್ನು "ಶೂನ್ಯ ವೇಳೆ" ಯೆಂದು ಕರೆಯಲಾಗುವುದು. ಪ್ರಸ್ತುತ ಅಧಿವೇಶನದಲ್ಲಿ ಪ್ರಶ್ನೋತ್ತರ ಮುಗಿದಿದೆ. "ಗಮನ ಸೆಳೆಯುವ ಸೂಚನೆ" ಗಳನ್ನು ತೆಗೆದು ಕೊಳ್ಳಬೇಕಾಗಿದೆ. ಈ ಶೂನ್ಯ ವೇಳೆಯಲ್ಲಿ ಅನೇಕ ಶಾಸಕರು ಪ್ರಸ್ತುತ ನಡೆಯುತ್ತಿರುವ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ "ವಿಜ್ಞಾನ" ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆ ಪತ್ರಿಕೆಗಳು ಬಯಲಾಗಿರುವ ವಿಷಯದ ಬಗ್ಗೆ ಪ್ರಸ್ತಾಪಿಸಲು ಎದ್ದು ನಿಂತು ಅಧ್ಯಕ್ಷರ ಅನುಮತಿ ಕೋರುವರು.

ಸದಸ್ಯರು: ಪ್ರಸ್ತುತ ನಡೆಯುತ್ತಿರುವ ಎಸ್. ಎಸ್. ಎಲ್. ಸಿ. ಪರೀಕ್ಷೆಯ ವಿಜ್ಞಾನ ವಿಷಯದ ಪ್ರಶ್ನೆ ಪತ್ರಿಕೆ ನೂರು ರೂಪಾಯಿಗೆ ದೊರೆಯುತ್ತಿದೆ. ಇದರ ಬಗ್ಗೆ ಪ್ರಸ್ತಾಪಿಸಲು ನಮಗೆ ಅನುಮತಿ ಕೊಡಬೇಕು ಇತ್ಯಾದಿ.

ಸಭಾಧ್ಯಕ್ಷರು: ತಾವು ಎತ್ತ ಬೇಕೆಂದಿರುವ ವಿಷಯದ ಬಗ್ಗೆ ಸೂಚನಾ ಪತ್ರ ಕೊಡಿ. ಮಾನ್ಯ ಸಚಿವರು ಅದಕ್ಕೆ ಉತ್ತರಿಸಲು ಕಾಲಾವಕಾಶ ಬೇಕು. ನಂತರ ತೆಗೆದುಕೊಳ್ಳೋಣ.

ಸದಸ್ಯರು: ಇದು ಅತ್ಯಂತ ಗಂಭೀರವಾದ ತುರ್ತು ವಿಷಯ ನಡೆಯುತ್ತಿರುವ ಪರೀಕ್ಷೆಗಳು ತುರ್ತಾಗಿ ನಿಲ್ಲಬೇಕು. ಉಳಿದ ಕಲಾಪಗಳನ್ನು ನಂತರ ತೆಗೆದುಕೊಳ್ಳಬಹುದು.

ಸಂಬಂಧಪಟ್ಟ ಸಚಿವರು: ಈಗಾಗಲೇ ನಾನು ಎಸ್. ಎಸ್. ಎಲ್. ಸಿ. ಪರೀಕ್ಷಾ ಮಂಡಳಿಯಿಂದ ವರದಿ ಕೋರಿದ್ದೇನೆ. ಇಂದು ಸಂಜೆ ವರದಿ ತಲುಪುವ ನಿರೀಕ್ಷೆಯಿದೆ. ನಾಳೆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

ಸಭಾಧ್ಯಕ್ಷರು: ವಿಷಯವನ್ನು ನಾಳಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ "ಗಮನ ಸೆಳೆಯುವ ಸೂಚನೆಗಳಡಿಯಲ್ಲಿ ತೆಗೆದುಕೊಳ್ಳಲಾಗುವುದು" ಮುಂದಿನ ಕಾರ್ಯಕಲಾಪ "ಗಮನ ಸೆಳೆಯುವ ಸೂಚನೆ".

(ಎಫ್) **ಗಮನ ಸೆಳೆಯುವ ಸೂಚನೆ.–** ಪುಟ ಸಂಖ್ಯೆ ೭೫-೭೮ ರಲ್ಲಿರುವ ವಿಷಯದ ಬಗ್ಗೆ ಸಂಬಂಧಪಟ್ಟ ಸಚಿವರು ವಿವರಣೆಯನ್ನು ನೀಡುವರು. ಪುಟ 75 ರಿಂದ 78ರ ಮಾದರಿಗಳನ್ನು ನೋಡಿ.

ಗಮನ ಸೆಳೆಯುವ ಸೂಚನೆ ನೀಡಿರುವ ಶಾಸಕರು "ವಿವರಣೆ ತೃಪ್ತಿಕರವಾಗಿಲ್ಲ". ವಾಸ್ತವಿಕತೆ ದೂರವಾಗಿದೆ, ಸರ್ಕಾರವು ತಮ್ಮ ಅಸಮರ್ಥತೆಯನ್ನು ಒಪ್ಪಿಕೊಳ್ಳಬೇಕು. ಸದನ ಸಮಿತಿ ರಚಿಸಬೇಕು ಇತ್ಯಾದಿ ವಿಷಯಗಳ ಬಗ್ಗೆ ಮಾತಾಡುವರು.

ಉಳಿದ ಶಾಸಕರು ಅಧ್ಯಕ್ಷರ ಅನುಮತಿಯ ಮೇರೆಗೆ ಚರ್ಚೆಯಲ್ಲಿ ಭಾಗವಹಿಸಬಹುದು. ನಂತರ ಸಚಿವರು ಉತ್ತರ/ ಆಶ್ವಾಸನೆ ನೀಡುವರು.

(ಜಿ) **ಅಲ್ಪ ಕಾಲಾವಧಿ ಚರ್ಚೆ.–** ಪುಟ ಸಂಖ್ಯೆ ೮೨-೮೩ರ ಮಾದರಿಗಳನ್ವಯ ಸೂಚನೆಯನ್ನು ಕೊಟ್ಟಿರುವ ಸದಸ್ಯರು ಒಂದು ಸಂಕ್ಷಿಪ್ತ ಹೇಳಿಕೆಯನ್ನು ಕೊಡುವರು. ಸಂಬಂಧಪಟ್ಟ ಮಂತ್ರಿಯವರು ಸಂಕ್ಷಿಪ್ತ ಉತ್ತರ ನೀಡುವರು. ಕೆಲವು ಸದಸ್ಯರು ಅಧ್ಯಕ್ಷರ ಅನುಮತಿ ಪಡೆದು ಚರ್ಚೆಯಲ್ಲಿ ಭಾಗವಹಿಸುವರು.

(ಹೆಚ್) **ವಿಧೇಯಕದ ಮಂಡನೆ.–** ಪುಟ ಸಂಖ್ಯೆ ೮೪-೧೩೨ರ ಮಾದರಿಗಳನ್ವಯ ವಿಧೇಯಕವನ್ನು ಮಂಡಿಸುವಂತೆ ಸಂಬಂಧಪಟ್ಟ ಸಚಿವರಿಗೆ ಸಭಾಧ್ಯಕ್ಷರು ಸೂಚಿಸುವರು.

ಸಂಬಂಧಪಟ್ಟ ಸಚಿವರು (ಮಾನ್ಯ ಉನ್ನತ ಶಿಕ್ಷಣ ಸಚಿವರು) ಎದ್ದು ನಿಂತು.– ನಾನು ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ, ವಿಧೇಯಕ 2009 ನ್ನು ಮಂಡಿಸುತ್ತಿದ್ದೇನೆ.

ಸಭಾಧ್ಯಕ್ಷರು – ವಿಧೇಯಕವನ್ನು ಮಂಡಿಸಲಾಗಿದೆ.

(ಐ) **ವಿಧೇಯಕದ ಪರ್ಯಾಲೋಚನೆ.–** ಸಂಬಂಧಪಟ್ಟ ಸಚಿವರು ವಿಧೇಯಕದ ಉದ್ದೇಶವನ್ನು ವಿವರಿಸುವರು ಹಾಗೂ ಮುಗಿಸಿದನಂತರ ಕುಳಿತು ಕೊಳ್ಳುವರು.

ಸಭಾಧ್ಯಕ್ಷರು: ವಿಧೇಯಕದ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಳ್ಳಲು ಸೂಚನೆ ನೀಡಿರುವ ಶಾಸಕರ ಹೆಸರನ್ನು ಕರೆಯುವರು– ತಮ್ಮ ತಮ್ಮ ಸರದಿಯನ್ವಯ ಶಾಸಕರು ಚರ್ಚೆಯಲ್ಲಿ ಭಾಗವಹಿಸಿ ಸಲಹೆ/ಸೂಚನೆ ನೀಡುವರು.

ಸಂಬಂಧಪಟ್ಟ ಸಚಿವರು: ಸಲಹೆಗಳ ಬಗ್ಗೆ ಉತ್ತರಿಸುವರು. ಇದಾದ ನಂತರ

ಸಭಾಧ್ಯಕ್ಷರು: ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕಲಾಗಿದೆ. ವಿಧೇಯಕದ ಪರವಾಗಿರುವವರು "ಹೌದು" ಎಂದು ಉತ್ತರಿಸಬೇಕು. ವಿಧೇಯಕಕ್ಕೆ ವಿರುದ್ಧವಾಗಿರುವವರು "ಇಲ್ಲ" ಎಂದು ಉತ್ತರಿಸಬೇಕು ಎಂದು ಹೇಳುವರು.

(ಸದಸ್ಯರು ತಮ್ಮ ತಮ್ಮ ನಿರ್ಣಯಗಳನ್ನು "ಹೌದು" ಅಥವಾ "ಇಲ್ಲ" ಎಂದು ಉತ್ತರಿಸುವರು.)

ಸಭಾಧ್ಯಕ್ಷರು – ವಿಧೇಯಕ ಅಂಗೀಕಾರವಾಗಿದೆ.

ಸಭಾಧ್ಯಕ್ಷರು – ಇಂದಿನ ಕಾರ್ಯಕಲಾಪಗಳು ಮುಗಿದಿವೆ. ನಾಳೆ ಪೂರ್ವಾಹ್ನ 11–00 ಗಂಟೆಗೆ ಸೇರಲಾಗುವುದು.

ಎಂದು ತಿಳಿಸುವರು. ಸದಸ್ಯರೆಲ್ಲರೂ ಎದ್ದು ನಿಲ್ಲುವರು. ಸಭಾ ಸದಸ್ಯರು ನಿರ್ಗಮಿಸಿದ ನಂತರ ಸದಸ್ಯರು ತಮ್ಮ ಆಸನಗಳಿಂದ ನಿರ್ಗಮಿಸುವರು.

ಮಾದರಿ ಕಾರ್ಯಕ್ರಮ ಹಾಗೂ ಕಡ್ಡಾಯ ವಿಷಯಗಳ ಪಟ್ಟಿಯನ್ನು ಕ್ರಮವಾಗಿ ಅನುಬಂಧ–ಎ ಮತ್ತು ಅನುಬಂಧ–ಬಿ ಯಲ್ಲಿ ಒದಗಿಸಲಾಗಿದೆ.

**(ಜೆ) ಶಿಷ್ಟಾಚಾರ ಸಂಹಿತೆ** – ಸ್ಪರ್ಧೆಗೆ ಭಾಗವಹಿಸುವ ವಿದ್ಯಾರ್ಥಿಗಳು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.–

(1) ವಿದ್ಯಾರ್ಥಿಗಳು ಕೊಟ್ಟ ವಿಷಯವನ್ನು ಮಾತನಾಡಬೇಕಾಗುತ್ತದೆ. ವಿಷಯವನ್ನು ಮೀರಿ ಮಾಡನಾಡಲು ಅವಕಾಶವಿರುವುದಿಲ್ಲ.

(2) ಶಿಸ್ತು ಸಂಯಮಗಳು, ನಿಯಮಗಳು ಎಲ್ಲಾ ಸ್ಪರ್ಧೆಯ ವಿದ್ಯಾರ್ಥಿಗಳಿಗೆ ಮೀಸಲಾಗಿರುತ್ತದೆ.

**6. ತೀರ್ಪುಗಾರರ ಸಮಿತಿಯ ರಚನೆ:–** ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ತೀರ್ಪುಗಾರರ ಸಮಿತಿಯಲ್ಲಿ,–

(1) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ನಿಯೋಜಿತ ಅಧಿಕಾರಿ;

(2) ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಯ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿ;

(3) ಸ್ಥಳೀಯ ಶಾಸಕರು/ಜಿಲ್ಲಾ ಪಂಚಾಯತ್/ ತಾಲ್ಲೂಕ್ ಪಂಚಾಯತ್ ಸದಸ್ಯರು.

ಇರತಕ್ಕದ್ದು.

**7. ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವುದು ಹಾಗೂ ಬಹುಮಾನ:–** ಮೆರಿಟ್ ಪಟ್ಟಿ ಹಾಗೂ ವರದಿಯನ್ನು ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆಗೆ ನಿಗದಿ ಪಡಿಸಿರುವ ಮಾದರಿಯಲ್ಲೇ ಸಿದ್ದಪಡಿಸತಕ್ಕದ್ದು. ಬಹುಮಾನಗಳನ್ನು ಸ್ಥಳೀಯ ಅಗತ್ಯತೆಗಳಿಗನುಗುಣವಾಗಿ ಮೊದಲ 5 ಸ್ಥಾನ ಗಳಿಸಿದವರಿಗೆ ಉತ್ತಮ ನಿರ್ವಹಣೆಗಾಗಿ ಬಹುಮಾನಗಳನ್ನು ನೀಡುವುದರೊಂದಿಗೆ, ಸ್ಪರ್ಧಿಗಳಿಗೆ ಬಹುಮಾನ ನೀಡುವುದನ್ನು ತೀರ್ಪುಗಾರರ ಸಮಿತಿಯು ನಿರ್ಧರಿಸಬಹುದು. ಜಿಲ್ಲಾ ಮಟ್ಟದ ಸ್ಪರ್ಧಿಗಳಿಗೆ/ಶಾಲೆಗಳಿಗೆ ಅನುಬಂಧ IV (ಪುಟ 31 ನೋಡಿ) ಮತ್ತು V (ಪುಟ 32 ನೋಡಿ)ರಲ್ಲಿ ನಿಗದಿ ಪಡಿಸಿದ ರೀತ್ಯಾ ಪ್ರಮಾಣ ಪತ್ರಗಳನ್ನು ಸ್ಪರ್ಧೆಯ ಸ್ಥಳದಲ್ಲೇ ನೀಡಲಾಗುವುದು.

## ಅನುಬಂಧ – ಎ

## ಮಾದರಿ ಕಾರ್ಯಕ್ರಮಗಳು

| | | |
|---|---|---|
| ಪೂರ್ವಾಹ್ನ | 11.00 ರಿಂದ 11.30 ರವರೆಗೆ | ಉದ್ಘಾಟನೆ |
| | 11.30 ರಿಂದ 11.45 ರವರೆಗೆ | ಆಸನಗಳ ಜೋಡಣೆ ಇತ್ಯಾದಿ |
| | 11.45 ರಿಂದ ಅ. 1.00 ರವರೆಗೆ | ಮೊದಲನೆ ತಂಡದ ಪ್ರದರ್ಶನ |
| ಅಪರಾಹ್ನ | 1.00 ರಿಂದ 2.00 ರವರೆಗೆ | ಊಟದ ವಿರಾಮ |
| | 2.00 ರಿಂದ 3.15 ರವರೆಗೆ | ಎರಡನೆ ತಂಡದ ಪ್ರದರ್ಶನ |
| | 3.15 ರಿಂದ 3.45 ರವರೆಗೆ | ಫಲಿತಾಂಶ ನಿರ್ಣಯ |
| | 3.45 ರಿಂದ 4.14 ರವರೆಗೆ | ಮುಕ್ತಾಯ |

## ಅನುಬಂಧ – ಬಿ

### ಭಾಗ – 1 – ಕಡ್ಡಾಯ ವಿಷಯಗಳ ಪಟ್ಟಿ

1. ಸಭಾಧ್ಯಕ್ಷರ ಆಗಮನ
2. ಪ್ರಶ್ನೋತ್ತರ ವೇಳೆ
3. ಗಮನ ಸೆಳೆಯುವ ಸೂಚನೆಗಳು
4. ವಿಧೇಯಕಗಳ ಮಂಡನೆ
5. ಅಲ್ಪ ಕಾಲಾವಧಿ ಚರ್ಚೆ

### ಭಾಗ – 2 ಐಚ್ಛಿಕ ವಿಷಯಗಳ ಪಟ್ಟಿ

1. ಸಂತಾಪ ಸೂಚನೆಗಳು
2. ಶೂನ್ಯ ವೇಳೆ
3. ವಿಧೇಯಕಗಳ ಪರಿಶೀಲನೆ / ಅಂಗೀಕಾರ
4. ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ
5. ಖಾಸಗಿ ಕಲಾಪಗಳು (ನಿರ್ಣಯ ಅಥವಾ ಖಾಸಗಿ ವಿಧೇಯಕದ ಮಂಡನೆ ಇತ್ಯಾದಿ)

ಸ್ಪರ್ಧೆಯ ಬಗ್ಗೆ ಸ್ಪಷ್ಟೀಕರಣ ಅಗತ್ಯತೆ ಇದ್ದಲ್ಲಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಂಗಳೂರು ಅಥವಾ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ವಿಧಾನಸೌಧ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು.

## ಅನುಬಂಧ – IV

**ಕರ್ನಾಟಕ ಸರ್ಕಾರ**

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ**

**ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ 200 – 200**

(ಶಾಲೆಯ ಹೆಸರು)

---------------------------------------------------------------

--------- ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ **200 – 200 ನೇ** ಶೈಕ್ಷಣಿಕ ವರ್ಷದಲ್ಲಿ ನಡೆಸಿದ **"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ"** ಭಾಗವಹಿಸಿದೆಯೆಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| ಸ್ಥಳ:____________<br>ದಿನಾಂಕ:_________ | ಉಪ ನಿರ್ದೇಶಕರು,<br>ಸಾರ್ವಜನಿಕ ಶಿಕ್ಷಣ ಇಲಾಖೆ<br>_____________ ಜಿಲ್ಲೆ | ಸಕ್ಷಮ ಪ್ರಾಧಿಕಾರಿ<br>ಸಂಸದೀಯ ವ್ಯವಹಾರಗಳು ಮತ್ತು<br>ಶಾಸನ ರಚನೆ ಇಲಾಖೆ |

## ಅನುಬಂಧ – V

**ಕರ್ನಾಟಕ ಸರ್ಕಾರ**

**ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ**

**"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ" 200 – 200**

------------------------------------------ ಶಾಲೆಯ-------------- ------------------ ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ------------------------ ----------------------- ಅವರಿಗೆ 200 – 200 ನೇ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸಹಭಾಗಿತ್ವದಲ್ಲಿ ನಡೆಸಲಾದ **"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ"** ಯಲ್ಲಿ ಅತ್ಯುತ್ತಮ ಸಾಧನೆಗೆ --- ------------------------------ ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| ಸ್ಥಳ:____________ | ಉಪ ನಿರ್ದೇಶಕರು,<br>ಸಾರ್ವಜನಿಕ ಶಿಕ್ಷಣ ಇಲಾಖೆ | ಸಕ್ಷಮ ಪ್ರಾಧಿಕಾರಿ<br>ಸಂಸದೀಯ ವ್ಯವಹಾರಗಳು ಮತ್ತು<br>ಶಾಸನ ರಚನೆ ಇಲಾಖೆ |
| ದಿನಾಂಕ:_________ | ______________ ಜಿಲ್ಲೆ | |

**ಕರ್ನಾಟಕ ರಾಜ್ಯದ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ಯುವ ಸಂಸತ್ ಸ್ಪರ್ಧೆಗೆ ಪೂರಕವಾಗಿ ಸಂಸತ್ ಕಾರ್ಯಕಲಾಪಗಳ ಬಗೆಗೆ ಕೆಲವು ವಿಶೇಷ ಮಾಹಿತಿಗಳು:–**

ಅಖಿಲ ಭಾರತ ಮುಖ್ಯ ಸಚೇತಕರ ಸಮ್ಮೇಳನವು ಮಾಡಿರುವ ಶಿಫಾರಸ್ಸುಗಳನ್ವಯ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬಗ್ಗೆ ಸಂಸತ್ತು, ವಿಧಾನ ಮಂಡಲದ ಅಧಿವೇಶನಗಳ ಬಗ್ಗೆ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವ ಉದ್ದೇಶದಿಂದ ಕರ್ನಾಟಕ ರಾಜ್ಯದಲ್ಲಿ "ಯುವ ಸಂಸತ್" ಸ್ಪರ್ಧೆಗಳನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ನಡೆಸಲಾಗುತ್ತಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ "ವಿಧಾನ ಸಭೆಯ" ಮಾದರಿ ಅಧಿವೇಶನವನ್ನು ನಡೆಸುವ ಕಾರ್ಯಕ್ರಮವನ್ನು ರೂಪಿಸಲಾಗಿದೆ.

**2. ವಿಧಾನ ಸಭೆಯ ರಚನೆ.–** ಭಾರತ ಸಂವಿಧಾನದ 170ನೇ ಅನುಚ್ಛೇದದ ಅನ್ವಯ ಕರ್ನಾಟಕ ರಾಜ್ಯದ ವಿಧಾನ ಸಭೆಯಲ್ಲಿ 224 ಚುನಾಯಿತ ಸದಸ್ಯರು ಹಾಗೂ ನಾಮನಿರ್ದೇಶಿತ ಒಬ್ಬ ಆಂಗ್ಲೋ ಇಂಡಿಯನ್ ಸದಸ್ಯರಿದ್ದಾರೆ.

**3. ವಿಧಾನ ಸಭೆಯ ಕಾರ್ಯಕಲಾಪಗಳು.–** ವಿಧಾನ ಸಭೆಯ ಕಾರ್ಯಕಲಾಪಗಳ ಪಟ್ಟಿಯನ್ನು ವಿಧಾನ ಸಭಾಧ್ಯಕ್ಷರ ಅನುಮೋದನೆಯೊಂದಿಗೆ ವಿಧಾನ ಸಭಾ ಸಚಿವಾಲಯದ ಕಾರ್ಯದರ್ಶಿಯವರು ಹೊರಡಿಸುವರು. ಕಾರ್ಯಕಲಾಪಗಳ ಪಟ್ಟಿಯಲ್ಲಿ,–

(ಅ) ಸಂತಾಪ ಸೂಚನೆ

(ಆ) ಪ್ರಶ್ನೋತ್ತರ

(ಇ) ವರದಿಗಳನ್ನು ಒಪ್ಪಿಸುವುದು

(ಈ) ಗಮನ ಸೆಳೆಯುವ ಸೂಚನೆಗಳು

(ಉ) ವಿತ್ತೀಯ ಕಾರ್ಯಕಲಾಪಗಳು

(ಊ) ಪೂರಕ ಕಾರ್ಯಕಲಾಪಗಳ ಪಟ್ಟಿ

(ಋ) ನಿಯಮ 69ರ ಅಡಿಯಲ್ಲಿ ಸಾರ್ವಜನಿಕ ಮಹತ್ವಗಳ ಜರೂರು ವಿಷಯದ ಚರ್ಚೆ.

(ಎ) ಶಾಸನ ರಚನೆ.

ಹಾಗೂ ಇನ್ನಿತರೆ ವಿಷಯಗಳನ್ನು ಸೇರಿಸಬಹುದು. ಪ್ರಸ್ತುತ ಅಧಿವೇಶನದ ಮಾದರಿ ಕಾರ್ಯಕಲಾಪಗಳ ಪಟ್ಟಿಯನ್ನು ಅನುಬಂಧ –ಗಿಖ ರಲ್ಲಿ ಒದಗಿಸಲಾಗಿದೆ.

**4. ಸಂತಾಪ ಸೂಚನೆಗಳು:** ಅಧಿವೇಶನ ಪ್ರಾರಂಭವಾದ ದಿನದ ಮೊದಲಿಗೆ ಅಗಲಿದ ಗಣ್ಯ ವ್ಯಕ್ತಿಗಳಿಗೆ ಸಭಾಧ್ಯಕ್ಷರಿಂದ ಸಂತಾಪ ಸೂಚನೆ. ಸಂತಾಪ ಸೂಚನೆಯನ್ನು ಪುಟ ಸಂಖ್ಯೆ 44–49ರಲ್ಲಿ ಒದಗಿಸಲಾಗಿದೆ.

**5. ಪ್ರಶ್ನೋತ್ತರಗಳು.–** (1) ಪ್ರತಿಯೊಂದು ದಿನದ ಅಧಿವೇಶನದ ಮೊದಲನೆಯ ಒಂದು ಗಂಟೆಯ ಅವಧಿಯನ್ನು ಪ್ರಶ್ನೆ ಕೇಳುವುದಕ್ಕೆ ಮತ್ತು ಉತ್ತರಿಸುವುದಕ್ಕೆ ಮೀಸಲಿಡಲಾಗುವುದು. ಸದರಿ ವಿಷಯದಲ್ಲಿ ಒಂದು ಉಪ ಪ್ರಶ್ನೆಗೆ ಅವಕಾಶವಿರುತ್ತದೆ.

(2) ಪ್ರಶ್ನೆಯನ್ನು ಕೇಳಲಿಚ್ಚಿಸುವ ಸದಸ್ಯರು 15 ದಿನಗಳಿಗೆ ಕಡಿಮೆ ಇಲ್ಲದೆ ಪ್ರಶ್ನೆಯ ಬಗ್ಗೆ ಸೂಚನಾ ಪತ್ರವನ್ನು ವಿಧಾನ ಸಭೆಯ ಕಾರ್ಯದರ್ಶಿಯವರಿಗೆ ಕೊಡಬೇಕು. ಪ್ರಶ್ನೆಯು ಲಿಖಿತ ರೂಪದಲ್ಲಿರಬೇಕು ಹಾಗೂ ಅದರಲ್ಲಿ ಯಾರಿಗೆ ಪ್ರಶ್ನೆ ಕೇಳಲಾಗಿದೆಯೋ ಆ ಸಚಿವರ ಪದನಾಮವನ್ನು ನಮೂದಿಸಬೇಕು.

(3) ಪ್ರಶ್ನೆಗಳನ್ನು,-

(ಅ) ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳು; ಹಾಗೂ

(ಆ) ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳು ಎಂದು ವಿಂಗಡಿಸಲಾಗಿದೆ.

(4) ಪ್ರಶ್ನೆ ಕೇಳುವ ಬಗ್ಗೆ ಕೆಳಕಂಡ ಕೆಲವು ಪ್ರಮುಖ ಷರತ್ತುಗಳಿವೆ,-

(ಎ) ಒಂದು ಪ್ರಶ್ನೆಯು ಒಂದೇ ವಿಚಾರಕ್ಕೆ ಸಂಬಂಧ ಪಟ್ಟಿರಬೇಕು.

(ಬಿ) ಪ್ರಶ್ನೆಯು ಅರ್ಥವಾಗುವಂತೆ ಇರಬೇಕು.

(ಸಿ) ಪ್ರಶ್ನೆಯು ಸಾಮಾನ್ಯವಾಗಿ 150 ಪದಗಳನ್ನು ಮೀರತಕ್ಕುದಲ್ಲ.

(ಡಿ) ಸರ್ಕಾರಕ್ಕೆ ಸಂಬಂಧಪಡದ ಯಾವುದೇ ವಿಷಯಗಳ ಬಗ್ಗೆ ಪ್ರಶ್ನೆ ಕೇಳತಕ್ಕದ್ದಲ್ಲ.

(ಇ) ಕ್ಷುಲ್ಲಕ, ಸುಲಭವಾಗಿ ದೊರೆಯುವ ಮಾಹಿತಿಗಳನ್ನು ಕೇಳತಕ್ಕದ್ದಲ್ಲ.

(ಎಫ್) ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ವಿಷಯವನ್ನು ಪ್ರಶ್ನಿಸುವಂತಿಲ್ಲ. ಇತ್ಯಾದಿ.

(5) ವಿದ್ಯಾರ್ಥಿಗಳ ಉಪಯೋಗಕ್ಕಾಗಿ, ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಹಾಗೂ ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳ ಕೆಲವು ಮಾದರಿಗಳನ್ನು ಪುಟ ಸಂಖ್ಯೆ 50-74ರಲ್ಲಿ ಒದಗಿಸಲಾಗಿದೆ.

**6. ಗಮನ ಸೆಳೆಯುವ ಸೂಚನೆಗಳು.-** (1) ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮಂತ್ರಿಯವರ ಗಮನಕ್ಕೆ ತರಬಹುದು. ಮಂತ್ರಿಯವರು ಸಂಕ್ಷಿಪ್ತವಾಗಿ ಒಂದು ಹೇಳಿಕೆಯನ್ನು ಕೊಡಬಹುದು ಅಥವಾ ಇನ್ನೊಂದು ದಿನ ತಮ್ಮ ಹೇಳಿಕೆ ನೀಡಲು ಕಾಲಾವಕಾಶ ಕೋರಬಹುದು.

(2) (ಅ) ಗಮನ ಸೆಳೆಯುವ ಸೂಚನೆಯನ್ನು ಒಂದಕ್ಕಿಂತ ಹೆಚ್ಚು ಸದಸ್ಯರು ಸಹಿ ಮಾಡಿದ್ದಲ್ಲಿ, ಕಾರ್ಯಕಲಾಪಗಳ ಪಟ್ಟಿಯಲ್ಲಿ ನಮೂದಿಸಿರುವ ಸದಸ್ಯರು ಗಮನ ಸೆಳೆಯಬಹುದು.

(ಆ) ಗಮನ ಸೆಳೆಯುವ ಕಾರ್ಯಕಲಾಪದಲ್ಲಿ ಚರ್ಚೆಗೆ ಅವಕಾಶವಿಲ್ಲ. ಆದರೆ ಸಭಾಧ್ಯಕ್ಷರ ಅನುಮತಿಯೊಂದಿಗೆ ಸ್ಪಷ್ಟೀಕರಣ ಕೋರಬಹುದು. ಗಮನ ಸೆಳೆಯುವ ಸೂಚನೆಗಳ ಮಾದರಿಗಳನ್ನು ಪುಟ ಸಂಖ್ಯೆ 75-78ರಲ್ಲಿ ನೀಡಲಾಗಿದೆ.

**7. ಸಾರ್ವಜನಿಕ ಮಹತ್ವದ ಜರೂರು ವಿಷಯದ ಅಲ್ಪ ಕಾಲಾವಧಿ ಚರ್ಚೆ.-** ನಿಯಮ 69ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸಲು ಅಪೇಕ್ಷಿಸುವ ಸದಸ್ಯರು ಬರಹದ ಮೂಲಕ ಸೂಚನೆಯನ್ನು ವಿವರಣಾತ್ಮಕ ಟಿಪ್ಪಣಿಯೊಂದಿಗೆ ಕಾರ್ಯದರ್ಶಿಯವರಿಗೆ ಕೊಡಬಹುದು. ಆ ಸೂಚನೆಗೆ ಕನಿಷ್ಠ ಬೇರೆ ಇಬ್ಬರು ಸದಸ್ಯರು ತಮ್ಮ ಸಹಿಗಳನ್ನು ಹಾಕುವುದರ ಮೂಲಕ ಬೆಂಬಲಿಸಲ್ಪಟ್ಟಿರಬೇಕು. ನಿಯಮದ ಅಡಿಯಲ್ಲಿ ಸೂಚನೆಯನ್ನು ಕೊಟ್ಟಿರುವ ಸದಸ್ಯನು ಒಂದು ಸಂಕ್ಷಿಪ್ತ ಹೇಳಿಕೆಯನ್ನು ನೀಡಬಹುದು ಮತ್ತು ಮಂತ್ರಿಗಳು ಸಂಕ್ಷಿಪ್ತವಾಗಿ ಉತ್ತರ ನೀಡಬೇಕು. ಅಧ್ಯಕ್ಷರ ಅನುಮತಿ ಪಡೆದ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಬಹುದು. ಈ ನಿಯಮದಡಿ ನೀಡುವ ಮಾದರಿ ಸೂಚನೆಯನ್ನು ಪುಟ ಸಂಖ್ಯೆ 82-83 ರಲ್ಲಿ ಒದಗಿಸಿದೆ.

**8. ಶಾಸನ ರಚನೆ.–** (1) ಶಾಸನ ರಚನೆಯು ಶಾಸಕರ ಪ್ರಮುಖ ಅಧಿಕಾರ ಮತ್ತು ಕರ್ತವ್ಯಗಳಲ್ಲಿ ಒಂದು. ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿ (ರಾಜ್ಯ ಪಟ್ಟಿ) ಹಾಗೂ ಮೂರನೇ ಪಟ್ಟಿ (ಸಂಯುಕ್ತ ಪಟ್ಟಿ) ಯಲ್ಲಿರುವ ವಿಷಯಗಳ ಬಗ್ಗೆ, ವಿಧಾನ ಸಭೆಯು ಶಾಸನಗಳನ್ನು ರಚಿಸಲು ಅಧಿಕಾರ ಹೊಂದಿದೆ.

(2) ಶಾಸನ ರಚನೆಯಲ್ಲಿ,–

(ಅ) ವಿಧೇಯಕವನ್ನು ಮಂಡಿಸುವುದು;

(ಆ) ವಿಧೇಯಕವನ್ನು ಪರ್ಯಾಲೋಚಿಸುವುದು; ಹಾಗೂ

(ಇ) ವಿಧೇಯಕವನ್ನು ಅಂಗೀಕರಿಸುವುದು.

ಈ ರೀತಿ ಮೂರು ಹಂತಗಳಿವೆ.

(3) ವಿಧೇಯಕಗಳನ್ನು ಸರ್ಕಾರವು ಸಂಬಂಧಪಟ್ಟ ಸಚಿವರ ಮುಖಾಂತರ ವಿಧಾನ ಸಭೆಯಲ್ಲಿ ಮಂಡಿಸುವುದು. ವಿಧೇಯಕದ ಪರ್ಯಾಲೋಚನೆಯಲ್ಲಿ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರು ಸಲಹೆಗಳನ್ನು ನೀಡಬಹುದು ಹಾಗೂ ತಿದ್ದುಪಡಿಗಳನ್ನು ಸೂಚಿಸಬಹುದು. ಪರ್ಯಾಲೋಚನೆಯ ನಂತರ ವಿಧೇಯಕವನ್ನು ಖಂಡ ಖಂಡವಾಗಿ (clause by clause) ಮತಕ್ಕೆ ಹಾಕಲಾಗುವುದು ಹಾಗೂ ಅಂಗೀಕರಿಸಲಾಗುವುದು.

(4) ವಿಧೇಯಕದ ಮಾದರಿಯನ್ನು ಪುಟ ಸಂಖ್ಯೆ 68–108 ರಲ್ಲಿ ಕೊಡಲಾಗಿದೆ.

## ಅನುಬಂಧ – VI

ಮಾದರಿ – 1

**(ಕರ್ನಾಟಕ ವಿಧಾನ ಸಭೆಯ ಮಾದರಿ ಕಾರ್ಯಕಲಾಪಗಳ ಪಟ್ಟಿ)**

**ಕರ್ನಾಟಕ ವಿಧಾನ ಸಭೆ**

ಹದಿಮೂರನೇ ವಿಧಾನ ಸಭೆ

(ಮೊದಲನೇ ಅಧಿವೇಶನ)

**ಕಾರ್ಯಕಲಾಪಗಳ ಪಟ್ಟಿ**

ದಿನಾಂಕ --------

(ಸಮಯ: ಬೆಳಿಗ್ಗೆ 10.00 ಗಂಟೆಗೆ)

---

### 1. ಪ್ರಶ್ನೋತ್ತರ

(i) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಮೂರನೇ ಪಟ್ಟಿ

(ii) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಹದಿಮೂರನೇ ಪಟ್ಟಿ

### 2. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು

**ಶ್ರೀ ------------------ (ಹಣಕಾಸು ಸಚಿವರು) ಅವರು:–**

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು 31ನೇ ಮಾರ್ಚ್ 2008ಕ್ಕೆ ಕೊನೆಗೊಂಡ ವರ್ಷಕ್ಕೆ ನೀಡಿರುವ ಧನವಿನಿಯೋಗ ಲೆಕ್ಕಪತ್ರಗಳು ಮತ್ತು ಆರ್ಥಿಕ ಲೆಕ್ಕಪತ್ರಗಳನ್ನು ಸಭೆಯ ಮುಂದಿಡುವುದು.

### 3. ಚುನಾವಣಾ ಪ್ರಸ್ತಾವ

**ಶ್ರೀ ------------------ (ಕಾನೂನು, ನ್ಯಾಯ ಮತ್ತು ಮಾನವಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) ಅವರು:**

1992ನೇ ಇಸವಿಯ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ನಿಯಮಾವಳಿ ನಿಯಮ 18(1)(8)ರ ಪ್ರಕಾರ ಏಕಲ ಸಂಕ್ರಮಣೀಯ ಮತದ ಮೂಲಕ ಅನುಪಾತ ಪ್ರಾತಿನಿಧ್ಯದ ನೀತಿಗೆ ಅನುಸಾರವಾಗಿ ಈ ಸಭೆಯು ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ವ್ಯವಸ್ಥಾಪನ ಮಂಡಳಿಗೆ ಇಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು.

### 4. ವಿತ್ತೀಯ ಕಾರ್ಯಕಲಾಪಗಳು

2009–10ನೇ ಸಾಲಿನ ಕೆಳಕಂಡ ಅನುದಾನ ಬೇಡಿಕೆಗಳ ಮಂಡನೆ:

| **ಬೇಡಿಕೆ ಸಂಖ್ಯೆ** | **ಬೇಡಿಕೆಗಳ ಹೆಸರು** |
|---|---|
| 04 | ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ |
| 03 | ಆರ್ಥಿಕ |
| 19 | ನಗರಾಭಿವೃದ್ಧಿ |
| 08 | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ |
| 25 | ಕನ್ನಡ ಮತ್ತು ಸಂಸ್ಕೃತಿ |
| 24 | ಇಂಧನ |
| 17 | ಶಿಕ್ಷಣ |
| 21 | ಜಲಸಂಪನ್ಮೂಲ |
| 27 | ಕಾನೂನು |
| 28 | ಸಂಸದೀಯ ವ್ಯವಹಾರಗಳಿ ಮತ್ತು ಶಾಸನ ರಚನೆ |

## 6. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

**ಶ್ರೀಯುತರುಗಳಾದ: ---------------------**(ವಿಧಾನ ಸಭೆಯ ಸದಸ್ಯರುಗಳು) ಬೆಂಗಳೂರು ಮಹಾ ನಗರದಲ್ಲಿ ಪಾದಚಾರಿಗಳು ಅನುಭವಿಸುತ್ತಿರುವ ಕಷ್ಟಗಳ ಬಗ್ಗೆ ನಡೆದ ಚರ್ಚೆಗೆ ಸರ್ಕಾರದ ಉತ್ತರ.

## 7. ಗಮನ ಸೆಳೆಯುವ ಸೂಚನೆಗಳು

(ಅ) ಶ್ರೀ ---------- (ವಿಧಾನ ಸಭಾ ಸದಸ್ಯರು) ಅವರು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನದಿ ನೀರಾವರಿ ವ್ಯವಸ್ಥೆ ಇಲ್ಲದಿರುವ ಕಾರಣ ಕುಡಿಯುವ ನೀರು ಹಾಗೂ ವ್ಯವಸಾಯಕ್ಕೆ ಶಾಶ್ವತವಾದ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ಮಾನ್ಯ ನೀರಾವರಿ ಸಚಿವರ ಗಮನ ಸೆಳೆಯುವುದು.

(ಆ) ಶ್ರೀ ---------- (ವಿಧಾನ ಸಭಾ ಸದಸ್ಯರು) ಅವರು ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಎಂ.ಆರ್.ಐ. ಸಿಟಿ ಸ್ಕ್ಯಾನಿಂಗ್ , ಸ್ಕ್ಯಾನಿಂಗ್, ವೆಂಟಿಲೇಟರ್, ಕಾರ್ಡಿಯಾಕ್ ಮಾನಿಟರ್ ಇತ್ಯಾದು ಉಪಕರಣಗಳನ್ನು ಒದಗಿಸುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯುವುದು.

## 9. ಶಾಸನ ರಚನೆ
## ವಿಧೇಯಕಗಳನ್ನು ಮಂಡಿಸುವುದು

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯ ವಿಧೇಯಕ, 2009

ಶ್ರೀ --------" (ಉನ್ನತ ಶಿಕ್ಷಣ ಸಚಿವರು), ಅವರು:–

(ಅ) 2009ನೇ ಸಾಲಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯ ವಿಧೇಯಕ, 2009 ನ್ನು ಮಂಡಿಸಲು ಅನುಮತಿಯನ್ನು ಕೋರುವುದು

(ಆ) ಹಾಗೂ ವಿಧೇಯಕವನ್ನು ಮಂಡಿಸುವುದು.

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು**

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯ
ವಿಧೇಯಕ, 2009

ಶ್ರೀ **---------- (ಉನ್ನತ ಶಿಕ್ಷಣ ಸಚಿವರು), ಅವರು:-**

(ಅ) 2009ನೇ ಸಾಲಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯ ವಿಧೇಯಕ, 2009ನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು.

(ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**ಸಹಿ/-**
**ಕಾರ್ಯದರ್ಶಿ**

**ಮಾದರಿ – 2**

**(ಕರ್ನಾಟಕ ವಿಧಾನ ಪರಿಷತ್ತಿನ ಮಾದರಿ ಕಾರ್ಯಕಲಾಪಗಳ ಪಟ್ಟಿ)**

**ಕರ್ನಾಟಕ ವಿಧಾನ ಪರಿಷತ್ತು**
ನೂರ ಎಂಟನೆಯ ಅಧಿವೇಶನ
**ಕಾರ್ಯಕಲಾಪಗಳ ಪಟ್ಟಿ**
ದಿನಾಂಕ ---------
(ಸಮಯ: ಬೆಳಿಗ್ಗೆ 10.30 ಗಂಟೆಗೆ)
---

**1. ಪ್ರಶ್ನೋತ್ತರ**

(i) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಒಂದನೆಯ ಪಟ್ಟಿ

(ii) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಒಂದನೆಯ ಪಟ್ಟಿ

**2. ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು**

**ಶ್ರೀ ------------ (ಹಣಕಾಸು ಸಚಿವರು) ಅವರು:-**

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಭಾರತದ ಲೆಕ್ಕ ನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ ದಿನಾಂಕ: 31ನೇ ಮಾರ್ಚ್ 2008ಕ್ಕೆ ಕೊನೆಗೊಂಡ ವರ್ಷಕ್ಕೆ (ರಾಜಸ್ವ ಸ್ವೀಕೃತಿ) (ವಾಣಿಜ್ಯ) ಹಾಗೂ (ಸಿವಿಲ್) ವರದಿಗಳನ್ನು ಸಭೆಯ ಮುಂದಿಡುವುದು.

**3. ವರದಿಗಳನ್ನೊಪ್ಪಿಸುವುದು**

ಶ್ರೀ. ಕೆ.ಸಿ.ಕೊಂಡಯ್ಯ (ಅಧ್ಯಕ್ಷರು, ಹಕ್ಕು ಭಾದ್ಯತ ಸಮಿತಿ) ಅವರು ಹಕ್ಕುಭಾದ್ಯತ ಸಮಿತಿಯ ಐವತ್ತೈದನೆಯ ವರದಿಯನ್ನು ಒಪ್ಪಿಸುವುದು.

**4. ಗಮನ ಸೆಳೆಯುವ ಸೂಚನೆಗಳು**

(ಅ) ಶ್ರೀ ---------- (ವಿಧಾನ ಸಭಾ ಸದಸ್ಯರು) ಅವರು ಹುಬ್ಬಳ್ಳಿ, ಧಾರವಾಡ ಕಮೀಷನರೇಟ್ ವ್ಯಾಪ್ತಿಯಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮಾನ್ಯ ಗೃಹ ಸಚಿವರ ಗಮನ ಸೆಳೆಯುವುದು.

**5. ನಿಯಮ ೩೩೦ರ ಮೇರೆಗೆ**

**6.** (ಅ) ಶ್ರೀ ---------- (ವಿಧಾನ ಸಭಾ ಸದಸ್ಯರು) ಅವರು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಲ್ಲಿ ಭಾರತ ಸಂವಿಧಾನದ 16 (4) ಮತ್ತು 16(4ಎ)ಪರಿಚ್ಛೇದದಂತೆ ನೇಮಕಾತಿ ಮತ್ತು ಪದೋನ್ನತಿಗಳಲ್ಲಿ ಮೀಸಲಾತಿ ಸೌಲಭ್ಯ ಅಳವಡಿಸಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ವರ್ಗಮವರಿಗೆ ಪ್ರಾತಿನಿಧ್ಯತೆಯನ್ನುಕಲ್ಪಿಸುವ ಬಗ್ಗೆ

ಸಮಾಜ ಕಲ್ಯಾಣ ಇಲಾಖೆಯ ತನಿಖಾ ತಂಡವು ದಿ.25–08–2007ರಂದು ಪ್ರವಾಸೋದ್ಯಮ ಇಲಾಖೆಗೆನೀಡಿರುವ ತನಿಖಾ ವರದಿಯ ಬಗ್ಗೆ ಇಲಾಖೆ ಏನು ಕ್ರಮ ಕೈಗೊಳ್ಳದಿರುವ ಬಗ್ಗೆ ಪ್ರಸ್ತಾಪಿಸುವುದು.

(ಆ) ಮೊರರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಹಂಗಾಮಿಯಾಗಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರು ಹಾಗೂ ಶಿಕ್ಷಕರ ಸೇವೆಯನ್ನು ಸಕ್ರಮಗೊಳಿಸುವ ಕುರಿತಂತೆ ಪ್ರಸ್ತಾಪಿಸುವುದು.

**6. ಶಾಸನ ರಚನೆ**

**ವಿಧೇಯಕಗಳನ್ನು ಪರ್ಯಾಲೋಚಿಸುವುದು ಮತ್ತು ಅಂಗೀಕರಿಸುವುದು**

ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯ ವಿಧೇಯಕ, 2009

ಶ್ರೀ ---------- (ಉನ್ನತ ಶಿಕ್ಷಣ ಸಚಿವರು), ಅವರು:-

(ಅ) ವಿಧಾನ ಸಭೆಯಿಂದ ಅಂಗೀಕೃತವಾದ ರೂಪದಲ್ಲಿರುವ 2009ನೇ ಸಾಲಿನ ಕರ್ನಾಟಕ ರಾಜ್ಯ ಡಾ. ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯ ವಿಧೇಯಕ,2009 ಅನ್ನು ಪರ್ಯಾಲೋಚಿಸಬೇಕೆಂದು ಸೂಚಿಸುವುದು.

(ಆ) ಹಾಗೂ ವಿಧೇಯಕವನ್ನು ಅಂಗೀಕರಿಸಬೇಕೆಂದು ಸೂಚಿಸುವುದು.

**ಸಹಿ/-**

**ಕಾರ್ಯದರ್ಶಿ.**

# ಅನುಬಂಧ – VII

## ಕರ್ನಾಟಕ ವಿಧಾನ ಪರಿಷತ್ತು

## 110ನೇ ಅಧಿವೇಶನ

## ಸಂತಾಪ ಸೂಚನೆಗಳು

**ಮಾನ್ಯ ಸಭಾಪತಿಯವರು:–**

ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀಮತಿ.ಗಂಗೂಬಾಯಿ ಹಾನಗಲ್, ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಹಾಗೂ ಮಾಜಿ ಸಚಿವರಾದ ಶ್ರೀ ಹಾರನಹಳ್ಳಿ ರಾಮಸ್ವಾಮಿ, ವಿಧಾನ ಪರಿಷತ್ತಿನ ಹಾಲಿ ಸದಸ್ಯರಾದ ಶ್ರೀ ಬಿ.ಟಿ. ಚನ್ನಬಸಪ್ಪ, ವಿಧಾನ ಪರಿಷತ್ತಿನ ಮಾಜಿ ಸದಸ್ಯರುಗಳಾದ ಶ್ರೀ ಸಿ. ಜೆ. ದೇವನಾಥ್ ಮತ್ತು ಶ್ರೀ ಎಂ.ಪಿ. ಈಶ್ವರಪ್ಪ ಹಾಗೂ ವಿಧಾನ ಸಭೆಯ ಮಾಜಿ ಸದಸ್ಯರುಗಳಾದ ಶ್ರೀ ಬಿ.ಎಂ.ಇದಿನಬ್ಬ, ಶ್ರೀ ವಿ. ವಾಸುದೇವ, ಶ್ರೀ ಜಿ. ಶಂಕರೇಗೌಡ, ಶ್ರೀ ಎಂ.ಬಿ.ದಿವಟರ್, ಶ್ರೀ ಬಿ.ಪಿ. ಗಂಗಾಧರ್ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

### 1. ಶ್ರೀಮತಿ. ಗಂಗೂಬಾಯಿ ಹಾನಗಲ್

ಮಾಜಿ ವಿಧಾನ ಪರಿಷತ್ ಸದಸ್ಯರು ಹಾಗೂ ಗಾನವಿದೂಷಿ ಗಂಗೂಬಾಯಿ ಹಾನಗಲ್ ಅವರು ದಿನಾಂಕ 21–07–2009ರಂದು ಬೆಳಿಗ್ಗೆ ಹುಬ್ಬಳ್ಳಿ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ.

ಶ್ರೀಯುತರು 1913ರ ಮಾರ್ಚ್ 05 ರಂದು ಧಾರವಾಡದಲ್ಲಿ ಜನಿಸಿದ್ದರು. 1990ರಿಂದ 1996ರವರೆಗೆ ನಾಮನಿರ್ದೇಶಿತ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಇದಲ್ಲದೆ ಹಿಂದೂಸ್ತಾನಿ ಸಂಗೀತದ ಮೇರು ಶಿಖರವಾಗಿದ್ದರು.

ಶ್ರೀಯುತರು 1929ರಲ್ಲಿ ವಿವಾಹವಾಗಿದ್ದು, 1962ರಲ್ಲಿ ರಾಜ್ಯ ಸಂಗೀತ ನಾಟಕ ಅಕಾಡಮಿ ಪ್ರಶಸ್ತಿ, 1971ರಲ್ಲಿ ಪದ್ಮಭೂಷಣ ಪ್ರಶಸ್ತಿ, 1973ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡಮಿ ಪ್ರಶಸ್ತಿ, 1964ರಲ್ಲಿ ಮಧ್ಯ ಪ್ರದೇಶ ಸರ್ಕಾರದಿಂದ ತಾನಸೇನ ಪ್ರಶಸ್ತಿ, 1987ರಲ್ಲಿ ರೂಹೆ–ಘಜಲ್ ಪ್ರಶಸ್ತಿ, 1989 ಹಫೀಝು ಆಲಿಖಾನ್ ಪ್ರಶಸ್ತಿ, 1990ರಲ್ಲಿ ಭುವಾಲಿಕ ಪ್ರಶಸ್ತಿ, 1992ರಲ್ಲಿ ಕರ್ನಾಟಕ ಸರ್ಕಾರದಿಂದ ಕನಕ–ಪುರಂಧರ ಪ್ರಶಸ್ತಿ, 1993ರಲ್ಲಿ ಸುಜನ ಗೌರವ ಪುರಸ್ಕಾರ ಮತ್ತು ಗೋದಾವರಿ ಪ್ರಶಸ್ತಿ ಹಾಗೂ 2002ರಲ್ಲಿ ಪದ್ಮವಿಭೂಷಣ ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

1924ರಲ್ಲಿ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಗಾಂಧೀಜಿ ಸಮ್ಮುಖದಲ್ಲಿ ಅವಿಸ್ಮರಣೀಯಗಾಯನ ಸಭೆ ನಡೆಸಿದ್ದರು. ಭಾರತೀಯ ಭಾಷೆಯಲ್ಲಿ ಭಾರತೀಯ ಮ್ಯೂಸಿಕ್ ಕಂಪೆನಿಯೊಂದರ ಧ್ವನಿ ಮುದ್ರಣದಲ್ಲಿ ಯುಗಳ ಗೀತೆಯನ್ನು ಹಾಡಿದ ಕೀರ್ತಿಯು ಇವರಿಗೆ ಸಲ್ಲುತ್ತದೆ. 1948 ಬನಾರಸ್ ನಲ್ಲಿ ಭಾರತೀಯ ಕಂಠ ಬಿರುದು, 1969ರಲ್ಲಿ ಪ್ರಯಾಗದಲ್ಲಿ ಸ್ವರಶಿರೋಮಣಿ ಬಿರುದುಗಳನ್ನು ನೀಡಿ ಗೌರವಿಸಲಾಗಿತ್ತು.

ಶ್ರೀಯುತರಿಗೆ ಧಾರವಾಡ, ಹಂಪಿ, ಗುಲ್ಬರ್ಗ ಮತ್ತು ದೆಹಲಿ ವಿಶ್ವವಿದ್ಯಾನಿಲಯಗಳು ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಲಾಗಿತ್ತು ಹಾಗೂ ಹದಿನೆಂಟು ದೇಶ ವಿದೇಶಗಳಲ್ಲಿ ಸಂಗೀತ ಕಛೇರಿಗಳನ್ನು ನಡೆಸಿ, ಸಂಗೀತ ಲೋಕದಲ್ಲಿ ಉತ್ತುಂಗ ಸ್ಥಾನವನ್ನು ಗಳಿಸಿದ್ದರು.

ಶ್ರೀಯುತರ ನಿಧನದಿಂದ ದೇಶವು ಖ್ಯಾತ ಗಾನಗಂಗೆಯನ್ನು ಕಳೆದುಕೊಂಡಂತಾಗಿದೆ.

## 2. ಶ್ರೀ ಹಾರನಹಳ್ಳಿ ರಾಮಸ್ವಾಮಿ

ಹಿರಿಯ ಕಾಂಗ್ರೆಸ್ ಮುಖಂಡರು, ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಮಾಜಿ ಕಾನೂನು ಸಚಿವರಾದ ಶ್ರೀ ಹಾರನಹಳ್ಳಿ ರಾಮಸ್ವಾಮಿಯವರು ದಿನಾಂಕ : 04.04.2009 ರಂದು ನಿಧನರಾದರು.

ಶ್ರೀಯುತರು 1922ರ ಫೆಬ್ರವರಿ, 22 ರಂದು ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕಿನ ಹಾರನಹಳ್ಳಿಯಲ್ಲಿ ಜನಿಸಿದ್ದರು. ಶ್ರೀಯುತರು ಬಿ.ಎಸ್ಸಿ, ಎಲ್.ಎಲ್.ಬಿ. ಪದವೀಧರರಾಗಿದ್ದು, ವೃತ್ತಿಯಲ್ಲಿ ವಕೀಲರಾಗಿ ಕಾನೂನು ಕಾಲೇಜಿನ ಪ್ರಾಂಶುಪಾಲರಾಗಿ ಹಾಗೂ ಅಧ್ಯಾಪಕರಾಗಿ ಸೇವೆಯನ್ನು ಸಲ್ಲಿಸಿದ್ದರು.

1942 ರಿಂದ 47ರ ವರೆಗೆ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿ, ಸೆರೆಮನೆ ವಾಸವನ್ನು ಸಹ ಅನುಭವಿಸಿದ್ದರು. ಕರ್ನಾಟಕ ಏಕೀಕರಣದ ರೂವಾರಿಯಾಗಿದ್ದರು. 1960 ರಿಂದ 1966ರ ವರೆಗೆ ಹಾಗೂ 1990 ರಿಂದ 1992ರ ವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. 1978 ರಿಂದ 1983ರ ವರೆಗೆ ವಿಧಾನ ಸಭಾ ಸದಸ್ಯರಾಗಿದ್ದರು. 1992 ರಲ್ಲಿ ಶ್ರೀ ವೀರಪ್ಪ ಮೊಯಿಲಿ ಅವರ ಸಚಿವ ಸಂಪುಟದಲ್ಲಿ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಾಗಿ ಹಾಗೂ ಶ್ರೀ ಎಸ್.ಎಂ.ಕೃಷ್ಣ ಅವರು ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ರಾಜ್ಯ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. 1952ರಲ್ಲಿ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಿ ಕೆಪಿಸಿಸಿಯ ಅಧ್ಯಕ್ಷರು, ಉಪಾಧ್ಯಕ್ಷರು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಎಐಸಿಸಿ ಸದಸ್ಯರಾಗಿಯೂ ಸಹ ಸೇವೆಯನ್ನು ಸಲ್ಲಿಸಿದ್ದರು. ಹುಬ್ಬಳ್ಳಿಯಲ್ಲಿ ಮೊಹರೆ ಭವನ, ಬೆಂಗಳೂರಿನಲ್ಲಿ ದಿವಾಕರ ಭವನ, ಕಲಬುರ್ಗಿಯಲ್ಲಿ ಸುಸಜ್ಜಿತ ಪ್ರೆಸ್ ಮತ್ತು ದಾವಣಗೆರೆಯಲ್ಲಿ ಸಂಯುಕ್ತ ಭವನ ನಿರ್ಮಾಣ ಮಾಡಿದ್ದರು. ಹಿರಿಯ ಸ್ವಾತಂತ್ರ್ಯ ಯೋಧ ಮತ್ತು ಲೋಕ ಶಿಕ್ಷಣ ಟ್ರಸ್ಟಿನ ಅಧ್ಯಕ್ಷರಾಗಿದ್ದ ಇವರಿಗೆ ರಾಜ್ಯ ಸರ್ಕಾರ 2006ರ ರಾಜ್ಯೋತ್ಸವ ಸಮಾರಂಭದಲ್ಲಿ ಸುವರ್ಣ ಕರ್ನಾಟಕ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಿದೆ.

ಶ್ರೀಯುತರ ನಿಧನದಿಂದ ಹಿರಿಯ ಸ್ವಾತಂತ್ರ್ಯ ಹೋರಾಟಗಾರ, ದಕ್ಷ ಆಡಳಿತಗಾರ ಹಾಗೂ ರಾಜಕೀಯ ಮುತ್ಸದ್ದಿಯೊಬ್ಬರನ್ನು ಕಳೆದುಕೊಂಡಂತಾಗಿರುತ್ತದೆ.

## 3. ಶ್ರೀ ಬಿ.ಟಿ. ಚನ್ನಬಸಪ್ಪ

ವಿಧಾನ ಪರಿಷತ್ತಿನ ಹಾಲಿ ಸದಸ್ಯರಾದ ಶ್ರೀ ಬಿ.ಟಿ. ಚನ್ನಬಸಪ್ಪ ಅವರು ದಿನಾಂಕ : 16.04.2009 ರಂದು ನಿಧನರಾದರು.

ಶ್ರೀಯುತರು 1958ರ ಜುಲೈ, 21 ರಂದು ಚಿತ್ರದುರ್ಗ ಜಿಲ್ಲೆಯ ಭೀಮಸಮುದ್ರದಲ್ಲಿ ಜನಿಸಿದ್ದರು. ವೃತ್ತಿಯಲ್ಲಿ ಅಡಿಕೆ ವ್ಯಾಪಾರಿಯಾಗಿದ್ದ ಶ್ರೀಯುತರು 1998 ರಿಂದ 2004 ಹಾಗೂ 2004 ರಿಂದ 2010ರ ಅವಧಿಗೆ ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ವಿಧಾನ ಪರಿಷತ್ತಿಗೆ ಚುನಾಯಿತರಾಗಿದ್ದರು. ಇವರು ಭೀಮಸಮುದ್ರದ ವ್ಯಾಪಾರಿಗಳ ಸಂಘದ ಅಧ್ಯಕ್ಷರಾಗಿದ್ದರು. ಇವರಿಗೆ ಇಂದಿರಾ ಪ್ರಿಯದರ್ಶಿನಿ, ರಾಷ್ಟ್ರೀಯ ನಿರ್ಮಾಣ ಹಾಗೂ ಭಾರತೀಯ ಉದ್ಯೋಗ ರತ್ನ ಪ್ರಶಸ್ತಿಗಳು ಲಭ್ಯವಾಗಿದ್ದವು.

ಶ್ರೀಯುತರ ನಿಧನದಿಂದ ಸರಳ ಸಜ್ಜನ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿರುತ್ತದೆ.

**4. ಶ್ರೀ ಸಿ. ಜೆ. ದೇವನಾಥ್**

ಮೈಸೂರು ವಿಧಾನ ಪರಿಷತ್ತಿನ ಮಾಜಿ ಸದಸ್ಯರಾದ ಶ್ರೀ ಸಿ.ಜೆ.ದೇವನಾಥ್ ಅವರು ದಿನಾಂಕ : 09.04.2009 ರಂದು ನಿಧನರಾದರು. ಶ್ರೀಯುತರು ವೃತ್ತಿಯಲ್ಲಿ ವಕೀಲರಾಗಿದ್ದರು. ಇವರು 1952ರಲ್ಲಿ ಮೈಸೂರು ವಿಧಾನ ಪರಿಷತ್ತಿಗೆ ನಾಮನಿರ್ದೇಶನ ಹೊಂದಿದ ಸದಸ್ಯರಾಗಿದ್ದರು.

ಶ್ರೀಯುತರ ನಿಧನದಿಂದ ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

**5. ಶ್ರೀ ಎಂ.ಪಿ. ಈಶ್ವರಪ್ಪ**

ವಿಧಾನ ಪರಿಷತ್ತಿನ ಮಾಜಿ ಸದಸ್ಯಯರಾದ ಶ್ರೀ ಎಂ.ಪಿ.ಈಶ್ವರಪ್ಪ ಅವರು ದಿನಾಂಕ : 17.06.2009 ರಂದು ನಿಧನರಾದರು.

ಶ್ರೀಯುತರು 1928ರ ಮಾರ್ಚ್ 1 ರಂದು ಶಿವಮೊಗ್ಗ ಜಿಲ್ಲೆಯ ಮಂಡಘಟ್ಟ ಗ್ರಾಮದಲ್ಲಿ ಜನಿಸಿದ್ದರು. ಶ್ರೀಯುತರು ವೃತ್ತಿಯಲ್ಲಿ ವಕೀಲರಾಗಿದ್ದು, ಕರ್ನಾಟಕ ವಿದ್ಯುತ್ ಮಂಡಳಿ, ಕೃಷಿ ವಿಶ್ವವಿದ್ಯಾಲಯ ಹಾಗೂ ಧಾರವಾಡ ಕೃಷಿ ವಿಶ್ವವಿದ್ಯಾಲಯಗಳಿಗೂ ಸಲಹೆಗಾರರಾಗಿದ್ದರು ಹಾಗೂ ಕರ್ನಾಟಕ ಗೃಹ ಮಂಡಳಿಯ ಅಧ್ಯಕ್ಷರಾಗಿದ್ದರು. ಶ್ರೀಯುತರು 1958ರಲ್ಲಿ ವಿಧಾನ ಸಭಾ ಕ್ಷೇತ್ರದಿಂದ ಮೈಸೂರು ವಿಧಾನ ಪರಿಷತ್ತಿಗೆ ಚುನಾಯಿತರಾಗಿದ್ದರು.

ಶ್ರೀಯುತರ ನಿಧನದಿಂದ ಹಿರಿಯ ರಾಜಕಾರಣಿಯೊಬ್ಬರನ್ನು ಕಳೆದುಕೊಂಡಂತಾಗಿದೆ.

(ಮಾನ್ಯ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿದ ನಂತರ)

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮೌನ ಆಚರಿಸಿದ ನಂತರ)

ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬಕ್ಕೆ ಕಳುಹಿಸಲಾಗುವುದು.

## ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಹಾಗೂ ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳ ಹಾಗೂ ಉತ್ತರಗಳ ಕೆಲವು ಮಾದರಿಗಳು

### ಮಾದರಿ – ೧

### (ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)

**ಕರ್ನಾಟಕ ವಿಧಾನ ಸಭೆ**

ಮೂರನೇ **ವಿಧಾನ ಸಭೆ**
(ಮೊದಲನೇ ಅಧಿವೇಶನ)

ದಿನಾಂಕ **-------**

**ರಾಜ್ಯದಲ್ಲಿ ಆರೋಗ್ಯ ಕವಚ ಯೋಜನೆಯ ಸೌಲಭ್ಯಗಳ** ಬಗ್ಗೆ .

**ಶ್ರೀ ------------ (ಸದಸ್ಯರ ಹೆಸರು)**

**01.** (360) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–'

(ಅ) ರಾಜ್ಯದಲ್ಲಿ ಆರೋಗ್ಯ ಕವಚ ಯೋಜನೆಯಡಿಯಲ್ಲಿ ಅನುಷ್ಠಾನಗೊಂಡ ಸೌಲಭ್ಯಗಳು ಮತ್ತು ಅದರಿಂದ ತುರ್ತು ಆರೋಗ್ಯ ಸೇವೆಯನ್ನು ಬಳಸಿಕೊಳ್ಳುತ್ತಿರುವ ಜಿಲ್ಲೆಗಳು ಯಾವುವು? ಯೋಜನೆಯ ಫಲಿತಾಂಶ ಮತ್ತು ಉಳಿದ ಜಿಲ್ಲೆಗಳಿಗೆ ಸೌಲಭ್ಯ ವಿಸ್ತರಣೆಗೆ ಸರ್ಕಾರದ ಕ್ರಮಗಳೇನು?

(ಆ) ಈ ಯೋಜನೆಯು ಅನುಷ್ಠಾನಕ್ಕಾಗಿ ಪ್ರಸ್ತುತ ತುರ್ತು ಸೇವೆಯಲ್ಲಿ ತೊಡಗಿಸಿರುವ ಆಂಬುಲೆನ್ಸ್‌ಗಳ ಸಂಖ್ಯೆ ಎಷ್ಟು? ಸಿಬ್ಬಂದಿ ವರ್ಗದವರನ್ನು ಸಮರ್ಪಕವಾಗಿ ಒದಗಿಸಿ ಕೊಡಲಾಗಿದೆಯೇ?

(ಇ) ಈ ಯೋಜನೆಗೆ ನಿಗದಿಪಡಿಸಿರುವ ಅನುದಾನ ಎಷ್ಟು ಮತ್ತು ಈ ಸೌಲಭ್ಯಯ ನಿರ್ವಹಣೆಯ ಕುರಿತಾದ ಸಾರ್ವಜನಿಕರ ಪ್ರತಿಕ್ರಿಯೆ ವಿವರವನ್ನು ಒದಗಿಸುವುದು?

**ಕರ್ನಾಟಕ ವಿಧಾನ ಸಭೆ**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 360

ಸದಸ್ಯರ ಹೆಸರು :

ಉತ್ತರಿಸಬೇಕಾದ ದಿನಾಂಕ :

ಉತ್ತರಿಸುವ ಸಚಿವರು : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಆರೋಗ್ಯ ಕವಚ ಯೋಜನೆಯಡಿಯಲ್ಲಿ ಅನುಷ್ಠಾನಗೊಂಡ ಸೌಲಭ್ಯಗಳು ಮತ್ತು ಅದರಿಂದ ತುರ್ತು ಆರೋಗ್ಯ ಸೇವೆಯನ್ನು ಬಳಸಿಕೊಳ್ಳುತ್ತಿರುವ ಜಿಲ್ಲೆಗಳು ಯಾವುವು? ಯೋಜನೆಯ ಫಲಿತಾಂಶ ಮತ್ತು ಉಳಿದ ಜಿಲ್ಲೆಗಳಿಗೆ ಸೌಲಭ್ಯ ವಿಸ್ತರಣೆಗೆ ಸರ್ಕಾರದ ಕ್ರಮಗಳೇನು? | ರಾಜ್ಯಾದ್ಯಾಂತ ಇದುವರೆವಿಗೆ ಒಟ್ಟು 150 ಆಂಬುಲೆನ್ಸ್ ಸೇವೆಗಳನ್ನು ಆರೋಗ್ಯ ಕವಚ ಯೋಜನೆಯಡಿ ಒದಗಿಸಲಾದೆ. ಮಾರ್ಚ್ 2010ರ ವೇಳೆಗೆ ಇನ್ನೂ ಒಟ್ಟು 367 ಆಂಬುಲೆನ್ಸ್ ಸೇವೆಗಳನ್ನು ರಾಜ್ಯದ್ಯಂತ ಒದಗಿಸಲಾಗುವುದು. ಆರೋಗ್ಯ ಕವಚ ಯೋಜನೆಯಡಿ ಈವರೆವಿಗೆ ಒಟ್ಟು 11,22,645 ಕರೆ ಗಳನ್ನು ಸ್ವೀಕರಿಸಿದ್ದು, ಒಟ್ಟು 13334 ಜೀವಗಳನ್ನು ಉಳಿಸಲಾಗಿದೆ ಹಾಗೂ 1784 ಪೋಲೀಸ್ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಕರೆಗಳನ್ನು ನಿರ್ವಹಿಸಲಾಗಿದೆ. |
| ಆ | ಈ ಯೋಜನೆಯು ಅನುಷ್ಠಾನಕ್ಕಾಗಿ ಪ್ರಸ್ತುತ ತುರ್ತು ಸೇವೆಯಲ್ಲಿ ತೊಡಗಿರುವ ಆಂಬುಲೆನ್ಸ್‌ಗಳ ಸಂಖ್ಯೆ ಎಷ್ಟು? ಸಿಬ್ಬಂದಿ ವರ್ಗದವರನ್ನು ಸಮರ್ಪಕವಾಗಿ ಒದಗಿಸಿಕೊಡಲಾಗಿದೆಯೇ? | ಈ ಯೋಜನೆಯು ಅನುಷ್ಠಾನಕ್ಕಾಗಿ ಪ್ರಸ್ತುತ ತುರ್ತು ಸೇವೆಯಲ್ಲಿ ತೊಡಗಿರುವ ಆಂಬುಲೆನ್ಸ್ ಗಳ ಸಂಖ್ಯೆ.150, ಈ ಸೇವೆಗೆ ಸಿಬ್ಬಂದಿ ವರ್ಗದವರಿಗೆ ತರಬೇತಿ ನೀಡಿ ಸಮರ್ಪಕವಾಗಿ ಒದಗಿಸಲಾಗಿದೆ |
| ಇ | ಈ ಯೋಜನೆಗೆ ನಿಗದಿಪಡಿಸಿರುವ ಅನುದಾನ ಎಷ್ಟು ಮತ್ತು ಈ ಸೌಲಭ್ಯ ನಿರ್ವಹಣೆಯ ಕುರಿತಾದ ಸಾರ್ವಜನಿಕರ ಪ್ರತಿಕ್ರಿಯೆಯ ವಿವರವನ್ನು ಒದಗಿಸುವುದು? | ಒಟ್ಟು 517 ಆಬುಲೆನ್ಸ್ ಗಳನ್ನ ಒದಗಿಸುವ ಈ ಯೋಜನೆಗೆ ಒಟ್ಟು ರೂ.221,25 ಕೋಟಿ ಬೇಕಗುವುದೆಂದು ಅಂದಾಜು ಮಾಡಲಾಗಿದೆ. ಆರೋಗ್ಯ ಕವಚ ಯೋಜನೆ ಕುರಿತು ಸಾರ್ವಜನಿಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. |

ಸಂಖ್ಯೆ. ಆಕುಕ 12 ಎಸ್ ಟಿಕ್ಯೂ 09 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು

**ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳು ಎಷ್ಟು ಇವೆ ಎಂಬುದರ ಬಗ್ಗೆ .**

**ಶ್ರೀ ------------ (ಸದಸ್ಯರ ಹೆಸರು)**

**೦2.** (85) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-'

**ಸರ್ಕಾರೀ ವೈದ್ಯಕೀಯ ಕಾಲೇಜುಗಳ ಬಗ್ಧೆ**

**ಶ್ರೀ ------------ (ಸದಸ್ಯರ ಹೆಸರು)**

**೦೨.** (85) ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ದಯವಿಟ್ಟು ಈ ವಿಷಯ ತಿಳಿಸುವರೆ:-

(ಅ) ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು?

(ಆ) ಈ ಎಲ್ಲಾ ಕಾಲೇಜುಗಳಲ್ಲಿ ಲಭ್ಯವಿರುವ ಒಟ್ಟು ವೈದ್ಯಕೀಯ ಸೀಟುಗಳ ಸಂಖ್ಯೆ ಎಷ್ಟು?

(ಇ) ಚಾಮರಾಜನಗರ ಜಿಲ್ಲೆಯು ಅತ್ಯಂತ ಹಿಂದುಳಿದಿರುವುದರಿಂದ ಹಾಗೂ ಗಡಿ ಜಿಲ್ಲೆಯಾಗಿರುವುದರಿಂದ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರವು ವೈದ್ಯಕೀಯ ಕಾಲೇಜು ಸ್ಥಾಪನೆಗೆ ಕ್ರಮ ಕೈಗೊಳ್ಳುವುದೇ?

**ಕರ್ನಾಟಕ ವಿಧಾನ ಸಭೆ**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 357

ಸದಸ್ಯರ ಹೆಸರು :

ಉತ್ತರಿಸಬೇಕಾದ ದಿನಾಂಕ :

ಉತ್ತರಿಸುವ ಸಚಿವರು : ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿರುವ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸಂಖ್ಯೆ ಎಷ್ಟು | 10 |
| ಆ | ಈ ಎಲ್ಲಾ ಕಾಲೇಜುಗಳಲ್ಲಿ ಲಭ್ಯವಿರುವ ಒಟ್ಟು ವೈದ್ಯಕೀಯ ಸೀಟುಗಳ ಸಂಖ್ಯೆ ಎಷ್ಟು? | 1050 |
| ಇ | ಚಾಮರಾಜನಗರ ಜಿಲ್ಲೆಯು ಅತ್ಯಂತ ಹಿಂದುಳಿದಿರುವುದರಿಂದ ಹಾಗೂ ಗಡಿ ಜಿಲ್ಲೆಯಾಗಿರುವುದರಿಂದ ಜಿಲ್ಲೆಯ ಅಭಿವೃದ್ಧಿ ದೃಷ್ಟಿಯಿಂದ ಸರ್ಕಾರವು ವೈದ್ಯಕೀಯ ಕಾಲೇಜು ಸ್ಥಾಪನೆಗೆ ಕ್ರಮ ಕೈಗೊಳ್ಳುವುದೇ? | –ಇಲ್ಲ– |

ಸಂಖ್ಯೆ. ಆಕುಕ 34 ಎಂಪಿಎಸ್ 09

ವೈದ್ಯಕೀಯ ಶಿಕ್ಷಣ ಸಚಿವರು

**ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕಾವೇರಿ ನೀರು ಸರಬರಾಜು ಮಾಡುವ ಬಗ್ಗೆ**

**ಶ್ರೀ ------------- (ಸದಸ್ಯರ ಹೆಸರು)**

**03**. (241) ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕರ್ನಾಟಕ ನೀರು ಸರಬರಾಜು ಇಲಾಖೆಯಿಂದ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದೆಯೆ?

(ಆ) ಹಾಗಿದ್ದಲ್ಲಿ, ದಿನಕ್ಕೆ ಎಷ್ಟು ಲೀಟರ್ ಸರಬರಾಜು ಮಾಡಲಾಗುತ್ತಿದೆ; ಕಾವೇರಿ ನೀರನ್ನು ಚಿಕ್ಕಬಳ್ಳಾಪುರ ಪಟ್ಟಣಕ್ಕೆ ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೇ; ವಿವರಣೆಯನ್ನು ಒದಗಿಸುವುದು.

**ಕರ್ನಾಟಕ ವಿಧಾನ ಸಭೆ**

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 241 |
| ಸದಸ್ಯರ ಹೆಸರು | : | |
| ಉತ್ತರಿಸಬೇಕಾದ ದಿನಾಂಕ | : | |
| ಉತ್ತರಿಸುವ ಸಚಿವರು | : | ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು, ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಕರ್ನಾಟಕ ನೀರು ಸರಬರಾಜು ಇಲಾಖೆಯಿಂದ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದೆಯೇ? | ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯಿಂದ ಕಾವೇರಿ ನೀರನ್ನು ಸರಬರಾಜು ಮಾಡಲಾಗುತ್ತಿದೆ. |
| ಆ | ಹಾಗಿದ್ದಲ್ಲಿ, ದಿನಕ್ಕೆ ಎಷ್ಟು ಲೀಟರ್ ಸರಬರಾಜು ಮಾಡಲಾಗುತ್ತಿದೆ; ಕಾವೇರಿ ನೀರನ್ನು ಚಿಕ್ಕಬಳ್ಳಾಪುರ ಪಟ್ಟಣಕ್ಕೆ ಒದಗಿಸಲು ಕ್ರಮ ತೆಗೆದುಕೊಳ್ಳಲಾಗಿದೆಯೆ; ವಿವರಣೆಯನ್ನು ಒದಗಿಸುವುದು. | ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ದಿನಂಪ್ರತಿ ಸರಾಸರಿ ಲಕ್ಷ ಲೀಟರ್ ನೀರು ಸರಬರಾಜು ಮಾಡಲಾಗುತ್ತಿದೆ. ಚಿಕ್ಕಬಳ್ಳಾಪುರ ಪಟ್ಟಣಕ್ಕೆ ಕಾವೇರಿ ನೀರು ಸರಬರಾಜು ಒದಗಿಸುವ ವಿಷಯ ಬೆಂಗಳೂರು ಜಲಮಂಡಳಿಯ ವ್ಯಾಪ್ತಿಗೆ ಬರುವುದಿಲ್ಲ. |

ಸಂಖ್ಯೆ. ನಅಇ 50 ಎಂಎನ್ ಐ 2009

ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ಮತ್ತು
ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

**ಬಿ.ಬಿ.ಎಂ.ಪಿ. ವ್ಯಾಪ್ತಿಗೆ ಪ್ರತಿದಿನ ಪೂರೈಕೆ ಮಾಡುತ್ತಿರುವ ಕುಡಿಯುವ ನೀರು ಎಷ್ಟು ಎಂಬುದರ ಬಗ್ಗೆ**

**ಶ್ರೀ ------------ (ಸದಸ್ಯರ ಹೆಸರು)**

**04**. (187) ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗ ಳೂರು ಜಲಮಂಡಳಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬಿ.ಬಿ.ಎಂ.ಪಿ ವ್ಯಾಪ್ತಿಗೆ ಪ್ರತಿದಿನ ಪೂರೈಕೆ ಮಾಡುತ್ತಿರುವ ಕುಡಿಯುವ ನೀರಿನ ಪ್ರಮಾಣ ಎಷ್ಟು?

(ಆ) ನೀರು ಪೂರೈಕೆಯ ಪ್ರಮಾಣದಲ್ಲಿ ಬಿಲ್‌ನ ಮೊತ್ತವೆಷ್ಟು?

(ಇ) ಅಕ್ರಮ ನೀರಿನ ಸಂಪರ್ಕ ಮತ್ತು ಸೋರಿಕೆಯಿಂದ ಪ್ರತಿದಿನವೂ ಜಲಮಂಡಳಿ ಹೊಂದುತ್ತಿರುವ ನಷ್ಟವೆಷ್ಟು?

(ಈ) ಅದನ್ನು ತಡೆಗಟ್ಟಲು ಸರಕಾರದ ಕ್ರಮಗಳೇನು?

(ಉ) ಬೆಂಗಳೂರು ಜಲಮಂಡಳಿಗೆ ಪಾವತಿಯಾಗಬೇಕಾಗಿರುವ ಬಾಕಿ ಬಿಲ್ ಪಾವತಿಯ ಮೊತ್ತ ಎಷ್ಟು;

(ಊ) ಬಾಕಿ ಬಿಲ್ ಪಾವತಿಯ ಕುರಿತಾಗಿರುವ ನೀತಿಯಿಂದ ಭಾರೀ ಮೊತ್ತದ ಬಾಕಿ ಹಣದ ಮೊತ್ತ ಉಳಿದುಕೊಂಡಿರುವುದು ನಿಜವಲ್ಲವೇ;

(ಋ) ಬಾಕಿ ಬಿಲ್ ಹಣ ಪಾವತಿಗೆ ಸಮಗ್ರ ಸರಳ ನೀತಿಯನ್ನು ಅಳವಡಿಸಲು ಸರಕಾರ ಮುಂದಾಗುವುದೇ?

## ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 187

ಸದಸ್ಯರ ಹೆಸರು :

ಉತ್ತರಿಸಬೇಕಾದ ದಿನಾಂಕ :

ಉತ್ತರಿಸುವ ಸಚಿವರು : ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ಬಿ.ಬಿ.ಎಂಪಿ. ವ್ಯಾಪ್ತಿಗೆ ಪ್ರತಿದಿನ ಪೂರೈಕೆ ಮಾಡುತ್ತಿರುವ ಕುಡಿಯುವ ನೀರಿನ ಪ್ರಮಾಣ ಎಷ್ಟು? | ಬಿ.ಬಿ.ಎಂಪಿ ವ್ಯಾಪ್ತಿಗೆ ಪ್ರತಿದಿನ ಪೂರೈಕೆ ಮಾಡುತ್ತಿರುವ ಕುಡಿಯುವ ನೀರಿನ ಪ್ರಮಾಣ 870 ದಶ ಲಕ್ಷ ಲೀಟರ್. |
| ಆ | ನೀರು ಪೂರೈಕೆ ಪ್ರಮಾಣದಲ್ಲಿ ಬಿಲ್ ನ ಮೊತ್ತವೆಷ್ಟು? | ಮಾಹೆಯಾನ ನೀರಿನ ಕಂದಾಯ ಸರಾಸರಿ ರೂ.37 ಕೋಟಿ. |
| ಇ | ಅಕ್ರಮ ನೀರಿನ ಸಂಪರ್ಕ ಮತ್ತು ಸೋರಿಕೆಯಿಂದ ಪ್ರತಿದಿನವೂ ಜಲಮಂಡಳಿ ಹೊಂದುತ್ತಿರುವ ನಷ್ಟ ವೆಷ್ಟು? | ಅಕ್ರಮ ನೀರಿನ ಸಂಪರ್ಕ ಮತ್ತು ಸೋರಿಕೆಯಿಂದ ಪ್ರತಿದಿನವೂ ಜಲಮಂಡಳಿ ಹೊಂದುತ್ತಿರುವ ನಷ್ಟ ಸರಾಸರಿ ಶೇ.32ರಿಂದ 36 ಅಧಿಕೃತ ಸಂಪರ್ಕಗಳಿಂದ ಬಳಕೆಯಾಗುತ್ತಿರುವ ನೀರಿನ ಪ್ರಮಾಣ ಸರಾಸರಿ ಶೇ.50 ರಿಂದ 52 ಹಾಗೂ ಸಾರ್ವಜನಿಕ ಕೊಳಾಯಿಗಳ ಮೂಲಕ ಸರಬರಾಜಾಗುತ್ತಿರುವ ನೀರಿನ ಪ್ರಮಾಣ ಸರಾಸರಿ ಶೇ.14ರಿಂದ 16. |
| ಈ | ಅದನ್ನು ತಡೆಗಟ್ಟಲು ಸರ್ಕಾರದ ಕ್ರಮಗಳೇನು? | ಅಕ್ರಮ ನೀರಿನ ಸಂಪರ್ಕ ಮತ್ತು ಸೋರುವಿಕೆಯಿಂದ ಉಂಟಾ ಗುತ್ತಿರುವ ನಷ್ಟವನ್ನು ನಿಯಂತ್ರಿಸಲು ಈ ಕೆಳಗೆ ಸೂಚಿಸಿರುವ ಕ್ರಮಗಳನ್ನು ಕೈಗೊಳ್ಳಲಾಗಿದೆ:–<br>1. ಹೆಚ್ಚುವರಿ ಗಾತ್ರದ ಕೊಳವೆಗಳನ್ನು ಮೃದು ಉಕ್ಕಿನ ಕೊಳವೆಗಳಿಂದ ಬೆಸುಗೆ ಹಾಕಿ ಜೋಡಿಸುವುದು ಮತ್ತು ಕೊಳವೆ ಜೋಡಣೆಯನ್ನು ರಬ್ಬರ್ ರಿಂಗ್ ಗಳಿಂದ ಮಾಡುವುದು.<br>2. ಸಾಲು ಮರದ ಬೇರುಗಳಿಂದ ಸೋರುವಿಕೆಯನ್ನು ತಪ್ಪಿಸಲು ಕೊಳವೆ ಮಾರ್ಗವನ್ನು ಸ್ಥಳಾಂತರಿಸುವುದು. |

| | | |
|---|---|---|
| | | 3. 30 ವರ್ಷಕ್ಕೂ ಮೇಲ್ಪಟ್ಟ ಹಳೆಯದಾದ ತುಕ್ಕು ಹಿಡಿದ ಕೊಳವೆಗಳು, ಗೃಹ ಸಂಪರ್ಕಗಳು, ಹೊಸ ಕೊಳವೆಗಳಿಂದ ಹಂತ ಹಂತವಾಗಿ ಬದಲಾಯಿಸಲು/ಪುನರೂಪಿಸಲು ಜಪಾನ್ ಬ್ಯಾಂಕ್ ಸಹಯೋಗದೊಂದಿಗೆ ಬೃಹತ್ ಯೋಜನೆ ಹಮ್ಮಿಕೊಳ್ಳಲಾಗಿದೆ.<br>4. ನೀರು ಸೋರುವಿಕೆ ತಡೆ ಗಟ್ಟಲು ದಿನದ 24 ತಾಸು ಗಳು ವಿಶೇಷ ಕಾರ್ಯಪಡೆ ನಿಯೋಜನೆ.<br>5. ರಸ್ತೆ ಮಧ್ಯದಲ್ಲಿ ಹಾದು ಹೋಗುತ್ತಿರುವ ಕೊಳವೆ ಗಳನ್ನು ರಸ್ತೆ ಬದಿಗೆ ಸ್ಥಳಾಂತರಿಸುವುದು.<br>6. ಗೃಹಗಳಿಗೆ ನೀರು ಸಂಪರ್ಕ ಕಲ್ಪಿಸುವ ಜಿ.ಐ.ಕೊಳವೆ ಉಪಯೋಗಿಸುವ ಬದಲಾಗಿ Food Grade Medium Density Poly Ethylene (MDPE) ಕೊಳವೆಗೆ GI ಹೊರಕವಚ ಕೊಳವೆಯೊಂದಿಗೆ ಅಳವಡಿಸಲು ಮಾರ್ಪಾಡು ಮಾಡಲಾಗುತ್ತಿದೆ.<br>7. ಜಲಾಶಯಗಳಿಂದ ಒಳಹರಿವು/ಹೊರ ಹರಿವು ಮತ್ತು 300 ಎಂ.ಎಂ. ವ್ಯಾಸದ ಮೇಲ್ಪಟ್ಟ ಕೊಳವೆ ಗಳಿಗೆ ನೀರಿನ ಪ್ರಮಾಣ ಲೆಕ್ಕಿಸಲು ಸಗಟು ಮಾಪನ ಅಳವಡಿಸುವುದು |
| ಉ | ಬೆಂಗಳೂರು ಜಲಮಂಡಳಿಗೆ ಪಾವತಿಯಾಗಬೇಕಾಗಿರುವ ಬಾಕಿ ಬಿಲ್ ಪಾವತಿಯ ಮೊತ್ತವೆಷ್ಟು? | ಜನವರಿ 2009ನೇ ಮಾಹೆಯ ಅಂತ್ಯಕ್ಕೆ ಬೆಂಗಳೂರು ಜಲಮಂಡಳಿಗೆ ಪಾವತಿಯಾಗಬೇಕಾಗಿರುವ ಬಾಕಿ ಬಿಲ್ ಪಾವತಿಯ ಮೊತ್ತ ರೂ.246.47 ಕೋಟಿಗಳು. |
| ಊ | ಬಾಕಿ ಬಿಲ್ ಪಾವತಿಯ ಕುರಿತಾಗಿರುವ ನೀತಿಯಿಂದ ಭಾರೀ ಮೊತ್ತದ ಬಾಕಿ ಹಣದ ಮೊತ್ತ ಉಳಿದುಕೊಂಡಿರುವುದು ನಿಜವಲ್ಲವೆ? | –ಇಲ್ಲ– |
| ಋ | ಬಾಕಿ ಬಿಲ್ ಹಣ ಪಾವತಿಗೆ ಸಮಗ್ರ ಸರಳ ನೀತಿಯನ್ನು ಅಳವಡಿಸಲು ಸರ್ಕಾರ ಮುಂದಾಗುವುದೇ? | ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ನಾಗರೀಕರಿಂದ ಬಾಕಿ ಹಣ ಪಾವತಿಸಲು ಅನುಕೂಲವಾಗುವಂತೆ ಅವರಿಂದ ಬರಬೇಕಾಗಿರುವ ನೀರಿನ ಬಾಕಿ ಹಣದ ಮೇಲೆ ವಿಧಿಸಿರುವ ಬಡ್ಡಿಯನ್ನು ಮನ್ನಾ ಮಾಡಲು ಹಾಗೂ ಅಸಲು ಮೊತ್ತವನ್ನು ಸುಲಭ ಕಂತುಗಳಲ್ಲಿ ಪಾವತಿಸಲು ಯೋಜನೆಯೊಂದನ್ನು ರೂಪಿಸಲಾಗುತ್ತಿದೆ. |

ಸಂಖ್ಯೆ. ನಅಇ 48 ಎಂಎನ್ ಐ 2009 ಮಾನ್ಯ ಅಬಕಾರಿ, ವಾರ್ತಾ, ಮಾಹಿತಿ ಮತ್ತು

ಜೈವಿಕ ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು

**ಐತಿಹಾಸಿಕ ಸ್ಮಾರಕಗಳನ್ನು ವಿಶ್ವ ಪರಂಪರೆಯ ಪಟ್ಟಿಗೆ ಸೇರಿಸಲು ಅರ್ಹತೆಯ ಬಗ್ಗೆ**

**ಶ್ರೀ ------------ (ಸದಸ್ಯರ ಹೆಸರು)**

**05**. (255) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಐತಿಹಾಸಿಕ ಸ್ಮಾರಕಗಳನ್ನು ವಿಶ್ವಪರಂಪರೆಯ ಪಟ್ಟಿಗೆ (UNESCO) ಸೇರಿಸಲು ಯಾವ ಅರ್ಹತೆಗಳನ್ನು ಹೊಂದಿರಬೇಕು?

(ಆ) ರಾಜ್ಯದ ಯಾವ ಯಾವ ಐತಿಹಾಸಿಕ ಸ್ಮಾರಕಗಳನ್ನು ವಿಶ್ವಪರಂಪರೆಯ ಪಟ್ಟಿಗೆ (UNESCO) ಸೇರಿಸಲು ಅರ್ಹತೆಯನ್ನು ಹೊಂದಿದೆ?

(ಇ) ಬಿಜಾಪುರದಲ್ಲಿರುವ ವಿಶ್ವವಿಖ್ಯಾತ ಗೋಲಗುಮ್ಮಟ ಸ್ಮಾರಕವನ್ನು ವಿಶ್ವಪರಂಪರೆಯ ಪಟ್ಟಿಗೆ (UNESCO) ಸೇರಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ?

(ಈ) ಹಾಗಾದೆ ಕೈಗೊಂಡ ಕ್ರಮಗಳೇನು?

(ಉ) ಗೋಲಗುಮ್ಮಟ ಸ್ಮಾರಕದ ಅಭಿವೃದ್ಧಿಗೆ ಹಾಗೂ ಪ್ರವಾಸಿಗರನ್ನು ಆಕರ್ಷಿಸಲು ಯಾವ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ?

**ಕರ್ನಾಟಕ ವಿಧಾನ ಸಭೆ**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 255

ಸದಸ್ಯರ ಹೆಸರು :

ಉತ್ತರಿಸಬೇಕಾದ ದಿನಾಂಕ :

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಗಳು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ಐತಿಹಾಸಿಕ ಸ್ಮಾರಕಗಳನ್ನು ವಿಶ್ವ ಪರಂಪರೆಯ ಪಟ್ಟಿಗೆ (UNESCO) ಸೇರಿಸಲು ಯಾವ ಅರ್ಹತೆಗಳನ್ನು ಹೊಂದಿರಬೇಕು? | ಒಂದು ಪ್ರದೇಶದ ಸಾಂಸ್ಕೃತಿಕ ಸಂಪತ್ತಿನ ಪುರಾತನ ಅವಶೇಷಗಳ ವಾಸ್ತುಶಿಲ್ಪ, ಶಿಲ್ಪ ವರ್ಣಚಿತ್ರಗಳ/ಭಿತ್ತಿ ಚಿತ್ರ ಗಳು., ಕೋಟೆ ಕಮದಕಗಳು,ನಗರ ಯೋಜನೆ ರಕ್ಷಣಾ ವ್ಯೂಹ, ಧಾರ್ಮಿಕ ಕಟ್ಟಡಗಳು ದಂಡು ಮತ್ತಿತರ ಅವಶೇಷ ಗಳು ಬಹು ವಿಸ್ತಾರವಾಗಿಯೂ, ಅಭೂತಪೂರ್ವವಾಗಿಯೂ ಇದ್ದು, ವಿಶ್ವ ಇತಿಹಾಸದಲ್ಲಿ ಇದಕ್ಕೆ ಒಂದು ಮಹತ್ವದ ಹಾಗೂ ಶಾಶ್ವತ ಸ್ಥಾನವಿರಬೇಕು. ಇಂತಹ ಸ್ಮಾರಕಗಳು/ಪ್ರದೇಶಗಳು ವಿಶ್ವಪರಂಪರೆ ಪಟ್ಟಿಯಲ್ಲಿ ಸ್ಥಾನ ಪಡೆಯಲು ಅರ್ಹತೆ ಪಡೆದಿರುತ್ತವೆ. |
| ಆ | ರಾಜ್ಯದ ಯಾವ ಯಾವ ಐತಿಹಾಸಿಕ ಸ್ಮಾರಕಗಳು (UNESCO) ಪಟ್ಟಿಯಲ್ಲಿ ಸೇರಿಸಲು ಅರ್ಹತೆಯನ್ನು ಹೊಂದಿವೆ. | ಕರ್ನಾಟಕ ರಾಜ್ಯದ ಈ ಕೆಳಕಂಡ ಪ್ರದೇಶಗಳಲ್ಲಿನ ಸ್ಮಾರಕ ಗಳು ವಿಶ್ವಪರಂಪರೆ ಪಟ್ಟಿಯಲ್ಲಿ ಸೇರ್ಪಡೆ ಹೊಂದಲು ಅರ್ಹತೆ ಪಡೆದಿವೆ.<br>1. ಬೇಲೂರು ಹಳೇಬೀಡು, ಸೋಮನಾಥಪುರ, ಶ್ರವಣ ಬೆಳಗೊಳ.<br>2. ಬೃಹತ್ ಶಿಲಾ ಸಮಾಧಿ ರಚನೆಗಳ ಸಂಕೀರ್ಣ (ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು ಹಿರೇಬೆಣಕಲ್ ನಲ್ಲಿರುವ ಒಂದು ಇತಿಹಾಸ ಪೂರ್ವ ನಿವೇಶನ)<br>3. ಲಕ್ಕುಂಡಿ ಮತ್ತು ಡಂಬಳದಲ್ಲಿರುವ (ಗದಗ್ ಜಿಲ್ಲೆ) ತರುವಾಯ ಚಾಲುಕ್ಯ ವಾಸ್ತು ಶಿಲ್ಪ.<br>4. ಗುಲ್ಬರ್ಗಾ ಇಂಡೋ–ಇಸ್ಲಾಮಿಕ್ ವಾಸ್ತು ಶಿಲ್ಪ.<br>5. ಬೀದರ್ ನಲ್ಲಿನ ಇಂಡೋ–ಇಸ್ಲಾಮಿಕ್ ಸ್ಪಷ್ಟ ವಾಸ್ತು ಶಿಲ್ಪ.<br>6. ಬಿಜಾಪುರದಲ್ಲಿನ ಇಂಡೋ–ಇಸ್ಲಾಮಿಕ್ ಸ್ಪಷ್ಟ ವಾಸ್ತು ಶಿಲ್ಪ |

| | | |
|---|---|---|
| ಇ | ಬಿಜಪುರದಲ್ಲಿರುವ ವಿಶ್ವವಿಖ್ಯಾತ ಗೋಲಗುಮ್ಮಟ ಸ್ಮಾರಕವನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸಲು ಸರ್ಕಾರ ಕ್ರಮ ಕೈಗೊಂಡಿದೆಯೇ? | ಹೌದು ಕ್ರಮ ಕೈಗೊಂಡಿದೆ. |
| ಈ | ಹಾಗಾದರೆ ಕೈಗೊಂಡ ಕ್ರಮಗಳೇನು? | ಗೋಲಗುಮ್ಮಟ ಸ್ಮಾರಕವನ್ನು ವಿಶ್ವಪರಂಪರೆಯ ಪಟ್ಟಿಗೆ ಸೇರಿಸಲು ಶಿಫಾರಸ್ಸು ಮಾಡಿ ಮಹಾ ನಿರ್ದೇಶಕರು, ಭಾರತೀಯ ಪುರಾತತ್ವ ಸರ್ವೇಕ್ಷಣ, ನವದೆಹಲಿ ಇವರಿಗೆ ದಿನಾಂಕ 16–02–2008ರಂದು ಪತ್ರ ಬರೆಯಲಾಗಿದೆ. |
| ಉ | ಗೋಲಗುಮ್ಮಟ ಸ್ಮಾರಕದ ಅಭಿವೃದ್ಧಿಗೆ ಹಾಗೂ ಪ್ರವಾಸಿಗರನ್ನು ಆಕರ್ಷಿಸಲು ಯಾವ ಯಾವ ಕ್ರಮ ಗಳನ್ನು ಕೈಗೊಂಡಿದೆ? | ಭಾರತೀಯ ಪುರಾತತ್ವ ಸರ್ವೇಕ್ಷಣ, ಧಾರವಾಡ ವಲಯವು ಬಿಜಾಪುರ ನಗರದಲ್ಲಿರುವ ಗೋಲಗುಂಬಜ್ ವನ್ನು ನೋಡಲು ಬರುವ ಸಂದರ್ಶಕರಿಗಾಗಿ ಕೆಲವು ಸಾರ್ವಜನಿಕ ಸೌಕರ್ಯ ಗಳನ್ನು ಒದಗಿಸಿದೆ. ಉದಾಹರಣೆಗೆ ಕುಡಿಯುವ ನೀರು, ಶೌಚಾಲಯ ವಿಭಾಗ, ಕ್ಯಾಂಟೀನ್, ವಾಹನಗಳ ಪಾರ್ಕಿಂಗ್, ಸ್ಮಾರಕಕ್ಕೆ ಸೇರಿದ ಸೌಂದರ್ಯಯುತವಾದ ಉದ್ಯಾನವನದಲ್ಲಿ ಸಂದರ್ಶಕರಿಗಾಗಿ ಮರಗಳು, ಅಂಗವಿಕಲರಿಗಾಗಿ ವೀಲ್ ಚೇರ್, ಪ್ರಕಟಣೆಗಳ ಮಾರಾಟ ಕೌಂಟರ್, ಗೈಡ್ ಸೌಕರ್ಯ, ನಿರ್ದೇಶನ ಮತ್ತು ಹೆಸರು ಫಲಕಗಳು, ಉತ್ತಮ ಮಟ್ಟದ ಆಕರ್ಷಣೀಯ ಹುಲ್ಲುಹಾಸು ಮುಂತಾದವುಗಳು. |

ಸಂಖ್ಯೆ. ನಅಇ 37 ಕೆಎಂಯು 2009 ಮಾನ್ಯ ಮುಖ್ಯಮಂತ್ರಿಗಳು

**ಮಾದರಿ – 1**

(ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)

ಕರ್ನಾಟಕ ವಿಧಾನ ಸಭೆ

(ಹದಿಮೂರನೆ ವಿಧಾನ ಸಭೆ)

(ಮೂರನೇ ಅಧಿವೇಶನ)

ದಿನಾಂಕ-------------

**ಬೆಂಗಳೂರಿನ ಸುತ್ತಮುತ್ತ ಅಕ್ರಮ ಗಣಿಗಾರಿಕೆ ಮತ್ತು ಅಕ್ರಮವಾಗಿ ಮರಳನ್ನು ಫಿಲ್ಟರ್ ಮಾಡುತ್ತಿರುವ ಬಗ್ಗೆ**

ಶ್ರೀ...........................(ಸದಸ್ಯರ ಹೆಸರು)

01. (259) ಮಾನ್ಯ ಮುಖ್ಯಮಂತ್ರಿಯವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬೆಂಗಳೂರು ಸುತ್ತಮುತ್ತ ಅಕ್ರಮ ಗಣಿಗಾರಿಕೆ ನಡೆಸುತ್ತಿರುವುದು ಹಾಗೂ ಅಕ್ರಮವಾಗಿ ಮರಳನ್ನು ಫಿಲ್ಟರ್ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಬಂದಿದಲ್ಲಿ ಅದರ ನಿಯಂತ್ರಣಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ?

**ಕರ್ನಾಟಕ ವಿಧಾನ ಸಭೆ**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 259

ಸದಸ್ಯರ ಹೆಸರು :

ಉತ್ತರಿಸಬೇಕಾದ ದಿನಾಂಕ :

ಉತ್ತರಿಸುವ ಸಚಿವರು : ಮುಖ್ಯ ಮಂತ್ರಿಯವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ಬೆಂಗಳೂರು ಸುತ್ತಮುತ್ತ ಅಕ್ರಮ ಗಣಿಗಾರಿಕೆ ನಡೆಸುತ್ತಿರುವುದು ಹಾಗೂ ಅಕ್ರಮವಾಗಿ ಮರಳನ್ನು ಫಿಲ್ಟರ್ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | ಹೌದು, ಸರ್ಕಾರದ ಗಮನಕ್ಕೆ ಬಂದಿರುತ್ತದೆ. |
| ಆ | ಬಂದಿದ್ದಲ್ಲಿ, ಅದರ ನಿಯಂತ್ರಣಕ್ಕೆ ಯಾವ ಕ್ರಮ ಕೈಗೊಳ್ಳಲಾಗಿದೆ? | ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ತೀವ್ರ ನಿಗವಹಿಸುವಂತೆ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಗಿದೆ ಅಲ್ಲದೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೂಪರಿಂಟೆಂಡೆಂಟ್ ಆಫ್ ಪೋಲೀಸ್, ಆಯಾ ಜಿಲ್ಲೆಯ ಉಪನಿರ್ದೇಶಕರು/ಹಿರಿಯ ಭೂ ವಿಜ್ಞಾನಿ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಜಿಲ್ಲಾ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿ ಹಾಗೂ ಪ್ರಾದೇಶಿಕ ಸಾರಿಗೆ ಅಧಿಕಾರಿಯನ್ನೊಳಗೊಂಡ ಜಿಲ್ಲಾ ಮಟ್ಟದ ಟಾಸ್ಕ್‌ಫೋರ್ಸ್ ಸಮಿತಿಯನ್ನು ಸರ್ಕಾರದ ಅದೇಶ ಸಂಖ್ಯೆ:ಸಿಐ 194 ಎಂಎಂಎಂ 2005, ದಿನಾಂಕ 16-11-2005ರಲ್ಲಿ ರಚಿಸಲಾಗಿದೆ<br><br>ಮರಳು ಪ್ರದೇಶದ ವಿಲೇವಾರಿ ಮಾಡಲು ಸಂಖ್ಯೆ:ಸಿಐ 05 ಎಂಎಂಆರ್ 005, ದಿನಾಂಕ 06-08-2005ರಲ್ಲಿ ಜಿಲ್ಲಾಧಿಕಾರಿ ಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಮಾನಿಟರಿಂಗ್ ಸಮಿತಿಯನ್ನು ರಚಿಸಿದ್ದು, ಈ ಸಮಿತಿಯು ಮರಳು ಪ್ರದೇಶಗಳನ್ನು ಗುರ್ತಿಸಿ, ಹರಾಜಿನ ಮೂಲಕ ವಿಲೇ ಮಾಡುತ್ತದೆ, ಹರಾಜು ಪ್ರಕ್ರಿಯೆಗೆ ಬಹುತೇಕ ಸ್ಥಳೀಯರಿಂದ ವಿರೋಧ ಹಾಗೂ ನ್ಯಾಯಾಲಯಗಳ ತಡೆಯಾಜ್ಞೆಗಳು ಬಂದಿದ್ದರಿಂದ ಅಂತಹ ಪ್ರದೇಶಗಳ ಹರಾಜು ಪ್ರಕ್ರಿಯೆ ಸಾಧ್ಯವಾಗಿರುವುದಿಲ್ಲ, ಬೃಹತ್ ಬೆಂಗಳೂರು ಅಭಿವೃದ್ಧಿಗೆ ಬೇಕಾಗುವ ಮರಳನ್ನು ಪೂರೈಸಲು ದಿನಾಂಕ 26-9-2008ರ |

| | | |
|---|---|---|
| | | ಸರ್ಕಾರದ ಆದೇಶ ಸಂಖ್ಯೆ.ಸಿಐ 142 ಎಂಎಂಎನ್ 2008ರಲ್ಲಿ ತಾತ್ಕಾಲಿಕ ಪರವಾನಗಿ ಪದ್ಧತಿಯನ್ನು ಜಾರಿ ಗೊಳಿಸಲಾಗಿದೆ.<br><br>ಫಿಲ್ಬರ್ ಮರಳಿನ ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ಸಕ್ರಿಯವಾಗಿ ತಡೆಗಟ್ಟಲು ಚಾಲಿತ ತನಿಖಾ ದಳವನ್ನು (mobile squad) ರಚಿಸಲಾಗಿದೆ. ವಿವಿಧ ನ್ಯಾಯಾಲಯ ಗಳಲ್ಲಿ ಒಟ್ಟು 76 ಮೊಕದ್ದಮೆಗಳನ್ನು ದಾಖಲಿಸಿದ್ದು, 66 ಆಯಿಲ್ ಇಂಜಿನ್ ಗಳನ್ನು ವಶಪಡಿಸಿಕೊಳ್ಳಲಾಗಿದೆ ಅಲ್ಲದೇ, 405 ಫಿಲ್ಬರ್ ಮರಳು ತಯಾರಿಸುವ ಘಟಕಗಳನ್ನು ನಾಶಪಡಿಸಲಾಗಿದೆ.ಒಟ್ಟು ರೂ.3.57 ಲಕ್ಷ ದಂಡ ವಸೂಲಿ ಮಾಡಲಾಗಿದೆ.ಫಿಲ್ಬರ್ ಮರಳಿನ ಗಣಿಗಾರಿಕೆ ಮತ್ತು ಸಾಗಾಣಿಕೆಯ ವಿರುದ್ಧ ತೀವ್ರ ನಿಗಾವಹಿಸಲಾಗುತ್ತಿದೆ. |

**ರಾಜ್ಯದಲ್ಲಿ ಜೈವಿಕ ಇಂಧನ ಆಧಾರಿತ ವಿದ್ಯುತ್ ಕೇಂದ್ರಗಳು ಮತ್ತು ಸಕ್ಕರೆ ಕಾರ್ಖಾನೆಗಳು ಸೇರಿದಂತೆ ಖಾಸಗಿ ವಿದ್ಯುತ್ ಕಂಪೆನಿಗಳು ಉತ್ಪಾದಿಸುತ್ತಿರುವ ವಿದ್ಯುತ್ ಪ್ರಮಾಣದ ವಿವರಗಳು**

ಶ್ರೀ........................(ಸದಸ್ಯರ ಹೆಸರು)

02. (298) ಮಾನ್ಯ ಇಂಧನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಜೈವಿಕ ಇಂಧನ ಆಧಾರಿತ ವಿದ್ಯುತ್ ಕೇಂದ್ರಗಳು ಮತ್ತು ಸಕ್ಕರೆ ಕಾರ್ಖಾನೆಗಳು ಸೇರಿದಂತೆ ಖಾಸಗಿ ವಿದ್ಯುತ್ ಕಂಪೆನಿಗಳು ಉತ್ಪಾದಿಸುತ್ತಿರುವ ವಿದ್ಯುತ್ ಪ್ರಮಾಣದ ವಿವರಗಳೇನು?

(ಆ) ಅವುಗಳಿಂದ ಹೊರ ರಾಜ್ಯಗಳಿಗೆ ಮಾರಾಟವಾಗುತ್ತಿರುವ ವಿದ್ಯುತ್ತಿನ ಪ್ರಮಾಣ ಎಷ್ಟು ಕರ್ನಾಟಕದಿಂದ ಪಡೆದ ವಿದ್ಯುತ್ ನ್ನು ಪುನ: ಕರ್ನಾಟಕದ ವಿತರಣಾ ಕಂಪೆನಿಗಳಿಗಳಿಗೆ ಹೆಚ್ಚಳ ದರದಲ್ಲಿ ಮಾರಾಟ ಮಾಡುತ್ತಿರುವ ಕುರಿತು ಸರ್ಕಾರದಲ್ಲಿ ಉಪಲಭ್ಯವಿರುವ ವಿವರಗಳೇನು?

(ಇ) ಈ ಖಾಸಗಿ ಕಂಪೆನಿಗಳು ಮುಕ್ತ ವಿದ್ಯುತ್ ಮಾರಾಟ ನೀತಿಯಿಂದಾಗಿ ಕೊರತೆ ಎದುರಿಸುತ್ತಿರುವ ಈ ರಾಜ್ಯಕ್ಕೆ ಅನ್ಯಾಯವಾಗದಂತೆ ಕ್ರಮ ಕೈಗೊಳ್ಳಲು ಮುಂದಾಗುವುದೇ?

**ಕರ್ನಾಟಕ ವಿಧಾನ ಸಭೆ**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 298
ಸದಸ್ಯರ ಹೆಸರು :
ಉತ್ತರಿಸಬೇಕಾದ ದಿನಾಂಕ :
ಉತ್ತರಿಸುವ ಸಚಿವರು : ಇಂಧನ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಜೈವಿಕ ಇಂಧನ ಆಧಾರಿತ ವಿದ್ಯುತ್ ಕೇಂದ್ರಗಳು ಮತ್ತು ಸಕ್ಕರೆ ಕಾರ್ಖಾನೆಗಳು ಸೇರಿದಂತೆ ಖಾಸಗಿ ವಿದ್ಯುತ್ ಕಂಪೆನಿ ಗಳು ಉತ್ಪಾದಿಸುತ್ತಿರುವ ವಿದ್ಯುತ್ ಪ್ರಮಾಣದ ವಿವರಗಳೇನು? | ರಾಜ್ಯದಲ್ಲಿ ಜನವರಿ 2009ರಲ್ಲಿ ಜೈವಿಕ ಇಂಧನ ಆಧಾರಿತ ವಿದ್ಯುತ್ ಕೇಂದ್ರಗಳಿಂದ ಉತ್ಪಾದಿಸಲಾದ ವಿದ್ಯುತ್ತಿನ ಪ್ರಮಾಣ 30.86 ದಶಲಕ್ಷ ಯೂನಿಟ್ ಗಳು ಮತ್ತುಸಕ್ಕರೆ ಕಾರ್ಖಾನೆಗಳ ಸಹ ವಿದ್ಯುತ್ ಉತ್ಪಾದನಾ ಘಟಕಗಳಿಂದ ಉತ್ಪಾದಿಸಲಾದ ವಿದ್ಯುತ್ತಿನ ಪ್ರಮಾಣ 165.17 ದಶಲಕ್ಷ ಯೂನಿಟ್‌ಗಳು ಸೇರಿದಂತೆ ಖಾಸಗಿ ವಿದ್ಯುತ್ ಕಂಪೆನಿಗಳು ಜನವರಿ 2009ರಲ್ಲಿ ಉತ್ಪಾದಿಸಿದ ವಿದ್ಯುತ್‌ನ ಒಟ್ಟು ಪ್ರಮಾಣ 594.83 ದಶಲಕ್ಷ ಯೂನಿಟ್‌ಗಳು. |
| (ಆ) | ಅವುಗಳಿಂದ ಹೊರ ರಾಜ್ಯಗಳಿಗೆ ಮಾರಾಟವಾಗುತ್ತಿರುವ ವಿದ್ಯುತ್ತಿನ ಪ್ರಮಾಣ ಎಷ್ಟು ಕರ್ನಾಟಕದಿಂದ ಪಡೆದ ವಿದ್ಯುತ್ ನ್ನು ಪುನ: ಕರ್ನಾಟಕದ ವಿತರಣಾ ಕಂಪೆನಿಗಳಿಗಳಿಗೆ ಹೆಚ್ಚಳ ದರದಲ್ಲಿ ಮಾರಾಟ ಮಾಡುತ್ತಿರುವ ಕುರಿತು ಸರ್ಕಾರದಲ್ಲಿ ಉಪಲಭ್ಯವಿರುವ ವಿವರಗಳೇನು?<br>______________________<br>ಈ ಖಾಸಗಿ ಕಂಪೆನಿಗಳು ಮುಕ್ತ ವಿದ್ಯುತ್ ಮಾರಾಟ ನೀತಿಯಿಂದಾಗಿ ಕೊರತೆ ಎದುರಿಸುತ್ತಿರುವ ಈ ರಾಜ್ಯಕ್ಕೆ ಅನ್ಯಾಯವಾಗದಂತೆ ಕ್ರಮ ಕೈಗೊಳ್ಳಲು ಮುಂದಾಗುವುದೇ? | ಸರ್ಕಾರದ ದಿನಾಂಕ 30-12-2008ರ ಆದೇಶದಂತೆ ಯಾವುದೇ ಖಾಸಗಿ ವಿದ್ಯುತ್ ಉತ್ಪಾದಕರು ಹೊರ ರಾಜ್ಯಗಳಿಗೆ ಮುಕ್ತ ಮಾರಾಟದನ್ವಯ ವಿದ್ಯುತ್ ಮಾರಾಟ ಮಾಡುವಂತಿಲ್ಲ. ತಮ್ಮಲ್ಲಿ ಉತ್ಪಾದನೆಯಾಗುತ್ತಿರುವ ವಿದ್ಯುತ್‌ನ್ನು ರಾಜ್ಯದ ವಿದ್ಯುತ್ ಜಾಲಕ್ಕೆ ಮಾತ್ರ ನೀಡಲು ಸೂಚಿಸಲಾಗಿದೆ.<br><br>ಕರ್ನಾಟಕ ಸರ್ಕಾರವು ದಿನಾಂಕ 17-12-2008ರಂದು ಆದೇಶ ಹೊರಡಿಸಿ ಎಲ್ಲಾ ಸಹ ಸಕ್ಕರೆ ವಿದ್ಯುತ್ ಉತ್ಪಾದಕರ ವಿದ್ಯುತ್ ಕಾಯ್ದೆ 2003ರ ಸೆಕ್ಷನ್ 11ರ ಅನ್ವಯ ತಾವು ಉತ್ಪಾದಿಸುವ ಗರಿಷ್ಠ ರಫ್ತು ಮಾಡುವ ವಿದ್ಯುತ್ ನ್ನು ಕರ್ನಾಟಕದ ವಿದ್ಯುತ್ ಜಾಲಕ್ಕೇ ನೀಡಬೇಕೆಂದು ಆದೇಶ ನೀಡಿದೆ. ಕರ್ನಾಟಕ ಸರ್ಕಾರವು ಅದೇ ದಿನದಂದು ಆದೇಶ ಹೊರಡಿಸಿ, ಎಲ್ಲಾ ಸಹ ಸಕ್ಕರೆ ವಿದ್ಯುತ್ ಉತ್ಪಾದಕರುಗಳಿಗೆ 1-12-2008ರಿಂದ |

| | | |
|---|---|---|
| | | ಅನ್ವಯವಾಗುವಂತೆತಾವು ಕರ್ನಾಟಕದ ವಿದ್ಯುತ್ ಜಾಲಕ್ಕೆ ನೀಡುವ ವಿದ್ಯುತ್‌ಗೆ ಯೂನಿಟ್ ಒಂದಕ್ಕೆ ರೂ 7.25 ಅನ್ನು ನಿಗದಿಪಡಿಸಿ ಮೇ, 2009ರವರೆಗೆ ಖರೀದಿಸಲು ಆದೇಶ ನೀಡಲಾಗಿದೆ.<br><br>ಮುಂದುವರೆದು, ಆಮದು ಕಲ್ಲಿದಲ್ಲಿನ ಬೆಲೆಯಲ್ಲಿನ ಇಳಿಕೆಯು ಸೇರಿದಂತೆ ಕಬ್ಬಿನ ಸಿಪ್ಪೆ ಮತ್ತು ವಿದ್ಯುತ್ ನ್ನು ಉತ್ಪಾದಿಸಲು ಬಳಸುವ ಇತರೆ ಸಾಮಗ್ರಿಗಳ ದರಗಳಲ್ಲಿ ಆಗಿರುವ ಪರಿಷ್ಕರಣೆಯ ಹಿನ್ನೆಲೆಯಲ್ಲಿ ಕರ್ನಾಟಕ ಸರ್ಕಾರವು ದಿನಾಂಕ 27–1–2009ರಂದು ಆದೇಶ ಹೊರಡಿಸಿ, ಎಲ್ಲಾ ಸಹ ಸಕ್ಕರೆ ವಿದ್ಯುತ್ ಕಾರ್ಖಾನೆಗಳಿಗೆ ನೀಡುವ ಪ್ರತಿ ಯೂನಿಟ್ ದರವನ್ನು ರೂ.6.50ಕ್ಕೆ ಕಡಿಮೆ ಮಾಡಿ ಅದನ್ನು ಖರೀದಿಸಲು ಅನುಮೋದನೆ ನೀಡಿದೆ. ಈ ದರವು 1–1–2009ರಿಂದ 31–5–2009ರವರೆಗೆ ಚಾಲ್ತಿಯಲ್ಲಿರುತ್ತದೆ.<br><br>ಕರ್ನಾಟಕ ಸರ್ಕಾರದ ಮೇಲ್ಕಂಡ ಆದೇಶದ ಪ್ರಕಾರ ಎಲ್ಲಾ ಸಹ ಸಕ್ಕರೆ ವಿದ್ಯುತ್ ಕಾರ್ಖಾನೆಗಳು ಕರ್ನಾಟಕದ ವಿದ್ಯುತ್ ಜಾಲಕ್ಕೆ ಈಗ ವಿದ್ಯುತ್‌ನ್ನು ಸರಬರಾಜು ಮಾಡುತ್ತಿವೆ. |

**ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಪಶು ಚಿಕಿತ್ಸಾಲಯಗಳ ಬಗ್ಗೆ**

ಶ್ರೀ.------------------(ಸದಸ್ಯರ ಹೆಸರು)

03 (321) ಮಾನ್ಯ ಪಶು ಸಂಗೋಪನಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಪಶು ಚಿಕಿತ್ಸಾಲಯಗಳೆಷ್ಟು?

(ಆ) ಒಟ್ಟು ಖಾಲಿಯಿರುವ ವೈದ್ಯರ ಹುದ್ದೆಗಳೆಷ್ಟು ಮತ್ತು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮಗಳೇನು?

(ಇ) ಜಮಖಂಡಿ ಕ್ಷೇತ್ರದ ಹುನ್ನೂರ ಹಿರೇಪಡಸಲಗಿ ಹಾಗೂ ಜಂಬಗಿ (ಬೆ.ಕೆ) ಗ್ರಾಮಗಳಿಗೆ ಅತೀ ಅವಶ್ಯವಿರುವ ಪಶುಚಿಕಿತ್ಸಾಲಯಗಳನ್ನು ಯಾವಾಗ ಮಂಜೂರು ಮಾಡಲಾಗುವುದು?

**ಕರ್ನಾಟಕ ವಿಧಾನ ಸಭೆ**

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 321 |
| ಸದಸ್ಯರ ಹೆಸರು | : | |
| ಉತ್ತರಿಸಬೇಕಾದ ದಿನಾಂಕ | : | |
| ಉತ್ತರಿಸುವ ಸಚಿವರು | : | ಮಾನ್ಯ ಪಶುಸಂಗೋಪನಾ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಒಟ್ಟು ಪಶು ಚಿಕಿತ್ಸಾಲಯಗಳೆಷ್ಟು? | 1940 |
| ಆ | ಒಟ್ಟು ಖಾಲಿಯಿರುವ ವೈದ್ಯರ ಹುದ್ದೆಗಳೆಷ್ಟು ಮತ್ತು ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮಗಳೇನು? | 1088<br>100 ಜನ ನಿವೃತ್ತ ಪಶುವೈದ್ಯರನ್ನು ಗುತ್ತಿಗೆ ಮೇಲೆ ಭರ್ತಿ ಮಾಡಿಕೊಳ್ಳಲು ಸರ್ಕಾರ ಅನುಮತಿ ನೀಡಿದೆ. ಈ ಪೈಕಿ 84 ನಿವೃತ್ತ ಪಶುವೈದ್ಯಾಧಿಕಾರಿಗಳು 2 ವರ್ಷಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡಿರುತ್ತಾರೆ.<br><br>ಕರ್ನಾಟಕ ಲೋಕಸೇವಾ ಆಯೋಗದ ಮುಖಾಂತರ 200 ಪಶುವೈದ್ಯಾಧಿಕಾರಿಗಳನ್ನು ನೇರ ನೇಮಕಾತಿ ಮಾಡಿಕೊಳ್ಳುವ ಪ್ರಕಿಯೆ ಚಾಲನೆಯಲ್ಲಿದೆ. ಅಂತಿಮ ಆಯ್ಕೆ ಪಟ್ಟಿ ಸ್ವೀಕೃತಗೊಂಡ ನಂತರ ಖಾಲಿ ಇರುವ ಪಶುವೈದ್ಯಾಧಿಕಾರಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು. |
| ಇ | ಜಮಖಂಡಿ ಕ್ಷೇತ್ರದ ಹುನ್ನೂರ ಹಿರೇಪಡಸಲಗಿ ಹಾಗೂ ಜಂಬಗಿ (ಬೆ.ಕೆ) ಗ್ರಾಮಗಳಿಗೆ ಅತೀ ಅವಶ್ಯವಿರುವ ಪಶುಚಿಕಿತ್ಸಾಲಯಗಳನ್ನು ಯಾವಾಗ ಮಂಜೂರು ಮಾಡಲಾಗುವುದು? | 2003ರ ಜಾನುವಾರು ಗಣತಿ ಪ್ರಕಾರ, ಜಮಖಂಡಿ ತಾಲ್ಲೂಕಿನಲ್ಲಿ 1,18,599 ಜಾನುವಾರು ಘಟಕಗಳಿವೆ. ರಾಷ್ಟ್ರೀಯ ಕೃಷಿ ಆಯೋಗದ ಶಿಫಾರಸ್ಸಿನಂತೆ ಪ್ರತಿ 5000 ಜಾನುವಾರು ಘಟಕಗಳಿಗೆ ಒಂದು ಪಶುಚಿಕಿತ್ಸಾಲಯ ಇರಬೇಕಾಗಿದೆ. ಅದರಂತೆ, ಜಮಖಂಡಿ ತಾಲ್ಲೂಕಿನಲ್ಲಿ 24 ಪಶುಚಿಕಿತ್ಸಾಲಯಗಳ ಅವಶ್ಯಕತೆಯಿದ್ದು, ಅಲ್ಲಿ 27 ಪಶುವೈದ್ಯ ಸಂಸ್ಥೆಗಳು ಮಂಜೂರಾಗಿ ಕಾರ್ಯ ನಿರ್ವಹಿಸುತ್ತಿವೆ. ಆದ್ದರಿಂದ, ಹುನ್ನೂರ, ಹಿರೇಪಡಸಲಗಿ ಹಾಗೂ ಜಂಬಗಿ (ಬೆ.ಕೆ) ಗ್ರಾಮಗಳಲ್ಲಿ ಹೊಸ ಪಶುಚಿಕಿತ್ಸಾಲಯ ತೆರೆಯುವ ಯಾವುದೇ ಕಾರ್ಯಕ್ರಮ ಇರುವುದಿಲ್ಲ. |

ಪಸಂಮೀ.130.ಪಸಸೇ 09 ಪಶುಸಂಗೋಪನಾ ಸಚಿವರು

**ಶಾಲಾ ಮಕ್ಕಳಿಗೆ ಸೈಕಲ್ ವಿತರಣೆಗಾಗಿ 2008–09ರ ಸಾಲಿಗೆ ನಿಗದಿಪಡಿಸಲಾದ ಮೊತ್ತದ ಬಗ್ಗೆ**

ಶ್ರೀ.------------------(ಸದಸ್ಯರ ಹೆಸರು)

04. (170) ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಶಾಲಾ ಮಕ್ಕಳಿಗೆ ಸೈಕಲ್ ವಿತರಣೆಗಾಗಿ 2008–09ರ ಸಾಲಿಗೆ ನಿಗದಿಪಡಿಸಲಾದ ಮೊತ್ತ ಎಷ್ಟು?

(ಆ) ಸೈಕಲ್ ಪೂರೈಸಲು ಯಾವ ಯಾವ ಕಂಪೆನಿಗಳಿಗೆ ಗುತ್ತಿಗೆ ನೀಡಲಾಗಿದೆ?

(ಇ) ಶಾಲಾ ಮಕ್ಕಳಿಗೆ ನೀಡಲಾಗುತ್ತಿರುವ ಸೈಕಲ್‌ಗಳ ಗುಣಮಟ್ಟ ಮಾರುಕಟ್ಟೆಯಲ್ಲಿ ಸಿಗುವ ಸೈಕಲ್‌ಗಳ ಗುಣಮಟ್ಟಕ್ಕೆ ಸರಿಸಮಾನವಾದವುಗಳಾಗೆವೆಯೇ?

(ಈ) ಹಾಗೆ ಪೂರೈಸಲಾಗುತ್ತಿರುವ ಪ್ರತಿ ಸೈಕಲ್ ನ ಬೆಲೆ ಎಷ್ಟು?

(ಉ) 2008–09ನೇ ಸಾಲಿನಲ್ಲಿ ಎಂಟನೇ ತರಗತಿಯಲ್ಲಿ ಓದುತ್ತಿರುವ ಏಳು ಲಕ್ಷ ವಿದ್ಯಾರ್ಥಿಗಳಲ್ಲಿ ಎಷ್ಟು ವಿದ್ಯಾರ್ಥಿಗಳಿಗೆ ಸೈಕಲ್ ನೀಡಲಾಗಿದೆ?

**ಕರ್ನಾಟಕ ವಿಧಾನ ಸಭೆ**

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 170

ಸದಸ್ಯರ ಹೆಸರು :

ಉತ್ತರಿಸಬೇಕಾದ ದಿನಾಂಕ :

ಉತ್ತರಿಸುವ ಸಚಿವರು : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ | ಶಾಲಾ ಮಕ್ಕಳಿಗೆ ಸೈಕಲ್ ವಿತರಣೆಗಾಗಿ 2008–09ರ ಸಾಲಿಗೆ ನಿಗದಿಪಡಿಸಲಾದ ಮೊತ್ತ ಎಷ್ಟು? | ಶಾಲಾ ಮಕ್ಕಳಿಗಿ ಸೈಕಲ್ ವಿತರಣೆಗಾಗಿ 2008–09 ರ ಸಾಲಿಗೆ 14000 ಕೋಟಿ ರೂಗಳಷ್ಟು ಒದಗಿಸಲಾಗಿದೆ. |
| ಆ | ಸೈಕಲ್ ಪೂರೈಸಲು ಯಾವ ಯಾವ ಕಂಪೆನಿಗಳಿಗೆ ಗುತ್ತಿಗೆ ನೀಡಲಾಗಿದೆ? | ಸೈಕಲ್ ಪೂರೈಸಲು ಮೆ.ಅಟ್ಲಾಸ್ ಸೈಕಲ್ (ಹ) ಲಿ, ಮಧ್ಯಪ್ರದೇಶ, ಟಿ.ಐ.ಸೈಕಲ್ಸ್ ಆಫ್ ಇಂಡಿಯಾ, ಚೆನ್ನೈ, ಹೀರೋ ಸೈಕಲ್ಸ್ ಲಿ, ಲೂಧಿಯಾನ ಮತ್ತು ಏವನ್ ಸೈಕಲ್ಸ್ ಲಿ, ಲೂಧಿಯಾನ ಕಂಪೆನಿಗಳಿಗೆ ಗುತ್ತಿಗೆ ನೀಡಲಾಗಿದೆ. |
| ಇ | ಶಾಲಾ ಮಕ್ಕಳಿಗೆ ನೀಡಲಾಗುತ್ತಿರುವ ಸೈಕಲ್ ಗಳ ಗುಣಮಟ್ಟ ಮಾರುಕಟ್ಟೆಯಲ್ಲಿ ಸಿಗುವ ಸೈಕಲ್‌ಗಳ ಗುಣಮಟ್ಟಕ್ಕೆ ಸರಿಸಮಾನವಾದವುಗಳಾಗೆವೆಯೇ? | ಬೈಸಿಕಲ್ ಗಳ ಗುಣಮಟ್ಟವನ್ನು ಭಾರತೀಯ ಗುಣಮಟ್ಟ ಮಾಪನದಲ್ಲಿ ನಿಗದಿಗೊಳಿಸಿರುವಂತೆ ಕಾಯ್ದುಕೊಳ್ಳಲಾಗಿದೆ. |
| ಈ | ಹಾಗೆ ಪೂರೈಸಲಾಗುತ್ತಿರುವ ಪ್ರತಿ ಸೈಕಲ್‌ನ ಬೆಲೆ ಎಷ್ಟು? | ಪ್ರತಿ ಬೈಸಿಕಲ್ ಗಳ ದರ ರೂ. 2397/– ಕ್ಕೆ ನಿಗದಿಗೊಳಿಸಿದೆ. |
| ಉ | 2008–09ನೇ ಸಾಲಿನಲ್ಲಿ ಎಂಟನೇ ತರಗತಿಯಲ್ಲಿ ಓದುತ್ತಿರುವ ಏಳು ಲಕ್ಷ ವಿದ್ಯಾರ್ಥಿಗಳಲ್ಲಿ ಎಷ್ಟು ವಿದ್ಯಾಥಿಗಳಿಗೆ ಸೈಕಲ್ ನೀಡಲಾಗಿದೆ? | 2008–09ನೇ ಸಾಲಿನಲ್ಲಿ ಎಂಟನೇ ತರಗತಿಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳಲ್ಲಿ ಈವರೆಗೆ 1,82,102 ವಿದ್ಯಾರ್ಥಿಗಳಿಗೆ ಬೈಸಿಕಲ್‌ಗಳನ್ನು ವಿತರಿಸಲಾಗಿದೆ. |

ಇಡಿ.49.ಯೋಯೋಕ 09 ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

**ಆಶ್ರಯ ನಿವೇಶನಗಳನ್ನು (ಉಚಿತ ನಿವೇಶನ) ಕಳೆದ ನಾಲ್ಕು ವರ್ಷಗಳಿಂದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಯಾವ ವರ್ಷದಲ್ಲಿ ವಿತರಿಸಲಾಗಿದೆ ಎಂಬ ಬಗ್ಗೆ**

ಶ್ರೀ.-----------------(ಸದಸ್ಯರ ಹೆಸರು)

05 (286) ಮಾನ್ಯ  ವಸತಿ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಆಶ್ರಯ ನಿವೇಶನಗಳನ್ನು (ಉಚಿತ ನಿವೇಶನ) ಕಳೆದ ನಾಲ್ಕು ವರ್ಷಗಳಿಂದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಯಾವ ವರ್ಷದಲ್ಲಿ ವಿತರಿಸಲಾಗಿದೆ?

(ಆ) ನಿವೇಶನ ವಿತರಣೆ ಯಾವಾಗಿನಿಂದ ಪ್ರಾರಂಭಿಸಲಾಗುವುದು?

(ಇ) ಸರ್ಕಾರಿ ಜಮೀನಿನಲ್ಲಿ ಭೂ ರಹಿತರು ನಿವೇಶನ  ರಹಿತ ಬ ಡವರು ಕೆಲವು ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸ್ತವ್ಯವಿರುವವರಿಗೆ ಆ ಸ್ಥಳ ಮಂಜೂರಾತಿಗೆ ಅವಕಾಶ ಮಾಡಿಕೊಡಲಾಗುವುದು.

(ಈ) ಯಾವ ರೀತಿಯಲ್ಲಿ ಯಾವ ನಮೂನೆಯಲ್ಲಿ ಫಲಾನುಭವಿಗಳು ಅರ್ಜಿ ಸಲ್ಲಿಸಬೇಕು?

## ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 286

ಸದಸ್ಯರ ಹೆಸರು :

ಉತ್ತರಿಸಬೇಕಾದ ದಿನಾಂಕ :

ಉತ್ತರಿಸುವ ಸಚಿವರು : ಮಾನ್ಯ ವಸತಿ ಮತ್ತು ಮುಜರಾಯಿ ಸಚಿವರು

<table>
<tr><th>ಕ್ರಮ ಸಂಖ್ಯೆ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಆ</td><td>ಆಶ್ರಯ ನಿವೇಶನಗಳನ್ನು (ಉಚಿತ ನಿವೇಶನ) ಕಳೆದ ನಾಲ್ಕು ವರ್ಷಗಳಿಂದ ಯಾವ ಯಾವ ತಾಲ್ಲೂಕಿನಲ್ಲಿ ಎಷ್ಟೆಷ್ಟು ಯಾವ ವರ್ಷದಲ್ಲಿ ವಿತರಿಸಲಾಗಿದೆ?</td><td>ಕಳೆದ ನಾಲ್ಕು ವರ್ಷಗಳಿಂದ ಅಂದರೆ 2004-05, 2005-06, 2006-07, 2007-08 ಮತ್ತು 2008-09ರಲ್ಲಿ ಈ ಕೆಳಗಿನಂತೆ ನಿವೇಶನಗಳನ್ನು ವಿತರಿಸಲಾಗಿದೆ.
<table>
<tr><th>ವರ್ಷ</th><th>ಗ್ರಾಮೀಣ ನಿವೇಶನ ಯೋಜನೆ</th><th>ನಗರ ನಿವೇಶನ ಯೋಜನೆ</th></tr>
<tr><td>2004-05</td><td>4762</td><td>2379</td></tr>
<tr><td>2005-06</td><td>6814</td><td>3160</td></tr>
<tr><td>2006-07</td><td>2240</td><td>3566</td></tr>
<tr><td>2007-08</td><td>1191</td><td>2066</td></tr>
<tr><td>2008-09</td><td>139</td><td>134</td></tr>
<tr><td>ಒಟ್ಟು</td><td>15186</td><td>11305</td></tr>
</table></td></tr>
<tr><td>ಆ</td><td>ನಿವೇಶನ ವಿತರಣೆ ಯಾವಾಗಿನಿಂದ ಪ್ರಾರಂಭಿಸಲಾಗುವುದು?</td><td>ನಗರ ಪ್ರದೇಶದಲ್ಲಿ ನಿವೇಶನ ಯೋಜನೆ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಗ್ರಾಮೀಣ ನಿವೇಶನ ಯೋಜನೆ ಜಾರಿಯಲ್ಲಿದ್ದು, 2000-01ಯಿಂದ ಪ್ರತಿ ವರ್ಷ ಗುರಿಯನ್ನು ನಿಗದಿಪಡಿಸಿ ನಿವೇಶನ ಹಂಚಿಕೆ ಮಾಡಲಾಗುತ್ತಿದೆ.</td></tr>
<tr><td>ಇ</td><td>ಸರ್ಕಾರಿ ಜಮೀನಿನಲ್ಲಿ ಭೂ ರಹಿತರು ನಿವೇಶನ ರಹಿತ ಬಡವರು ಕೆಲವು ವರ್ಷಗಳಿಂದ ಮನೆ ಕಟ್ಟಿಕೊಂಡು ವಾಸ್ತವ್ಯವಿರುವವರಿಗೆ ಆ ಸ್ಥಳ ಮಂಜೂರಾತಿಗೆ ಅವಕಾಶ ಮಾಡಿಕೊಡಲಾಗುವುದು.</td><td>ದಕಶಫ ಜಮೀನಿನಲ್ಲಿ ಭೂರಹಿತರು ನಿವೇಶನ ರಹಿತ ಬಡವರು ಮನೆ ಕಟ್ಟಿಕೊಂಡು ವಾಸ್ತವ್ಯವಿರುವವರೆಗೆ ಸ್ಥಳ ಮಂಜೂರಾತಿಗೆ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಪರಿಶೀಲಿಸಿ ಕ್ರಮಕೈಗೊಳ್ಳುವರು.</td></tr>
<tr><td>ಈ</td><td>ಯಾವ ರೀತಿಯಲ್ಲಿ ಯಾವ ನಮೂನೆಯಲ್ಲಿ ಫಲಾನುಭವಿಗಳು ಅರ್ಜಿ ಸಲ್ಲಿಸಬೇಕು?</td><td>ಆಶ್ರಯ ನಿವೇಶನ ಯೋಜನೆಯಡಿ ನಿವೇಶನ ಪಡೆಯಲು ಅರ್ಜಿ ನಮೂನೆ 1-ನ್ನು ಆಯಾ ಸ್ಥಳೀಯ ಸಂಸ್ಥೆಯಿಂದ ಪಡೆದು ತುಂಬಿ ಸಹಿ ಮಾಡಿ ಸ್ಥಳೀಯ ಸಂಸ್ಥೆಗೆ ಸಲ್ಲಿಸಬೇಕು.</td></tr>
</table>

ವ ಇ 21 ಹೆಚ್‌ಎಂ 09 ವಸತಿ ಮತ್ತು ಮುಜರಾಯಿ ಸಚಿವರು

**(ಗಮನ ಸೆಳೆಯುವ ಸೂಚನೆಗಳು)**

**ಮಾದರಿ – 1**

**ಕರ್ನಾಟಕ ವಿಧಾನ ಸಭೆ**

ಹದಿಮೂರನೇ ವಿಧಾನ ಸಭೆ
(ಮೂರನೇ ಅಧಿವೇಶನ)

(1) ಶ್ರೀ --------- (ವಿಧಾನ ಸಭಾ ಸದಸ್ಯರು) ಅವರು ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ನದಿ ನೀರಾವರಿ ವ್ಯವಸ್ಥೆ ಇಲ್ಲದಿರುವ ಕಾರಣ ಕುಡಿಯುವ ನೀರು ಹಾಗೂ ವ್ಯವಸಾಯಕ್ಕೆ ಶಾಶ್ವತವಾದ ನೀರಾವರಿ ವ್ಯವಸ್ಥೆಯನ್ನು ಕಲ್ಪಿಸುವುದಕ್ಕೆ ಮಾನ್ಯ ನೀರಾವರಿ ಸಚಿವರ ಗಮನ ಸೆಳೆಯುವುದು.

**ಹೇಳಿಕೆ:**

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 6 ತಾಲ್ಲೂಕುಗಳಿವೆ. 1,918 ಜನವಸತಿಗಳಿವೆ. ಕೋಲಾರ ಜಿಲ್ಲೆಯಲ್ಲಿ 5 ತಾಲ್ಲೂಕುಗಳಿದ್ದು, 1,957 ಜನವಸತಿಗಳಿವೆ. ಈ ಎರಡು ಜಿಲ್ಲೆಗಳಲ್ಲಿ ನಿರಂತರವಾಗಿ ಹರಿಯುವ ಯಾವುದೇ ಜೀವನದಿಗಳು ಇರುವುದಿಲ್ಲ. ಕೃಷಿ ಹಾಗೂ ತೋಟಗಾರಿಕೆ ಹಾಗೂ ಮತ್ತಿತರ ವಾಣಿಜ್ಯ ಚಟುವಟಿಕೆಗಳ ನಿಮಿತ್ತ ಅತಿಯಾಗಿ ಅಂತರ್ಜಲ ಶೋಷಣೆಯಾಗಿರುವುದರಿಂದ, ಈ ಎರಡು ಜಿಲ್ಲೆಗಳಲ್ಲಿ ಅಂತರ್ಜಲ ಆಧಾರಿತ ಸಾರ್ವಜನಿಕ ಕುಡಿಯುವ ನೀರಿನ ಜಲಮೂಲಗಳಿಗೆ ಧಕ್ಕೆಯಾಗಿದೆ. ಇದಲ್ಲದೇ, ಈ ಎರಡು ಜಿಲ್ಲೆಗಳಲ್ಲಿ 1,683 ಜನವಸತಿಗಳ ಜಲಮೂಲಗಳಲ್ಲಿ ಅಧಿಕ ಫ್ಲೋರೈಡ್ ಸೇರಿದಂತೆ ವಿವಿಧ ರೀತಿಯ ಕುಡಿಯುವ ನೀರಿನ ಗುಣಮಟ್ಟದ ಸಮಸ್ಯೆಯಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ 1,589 ಜನವಸತಿಗಳಿಗೆ 40–55LPCD ನೀರು ಪೂರೈಕೆಯಿದೆ ಹಾಗೂ 329 ಜನವಸತಿಗಳಿಗೆ 40LPCD ಗಿಂತ ಕಡಿಮೆ ನೀರು ಪೂರೈಕೆಯಿದೆ. ಕೋಲಾರ ಜಿಲ್ಲೆಯಲ್ಲಿ 1,756 ಜನವಸತಿಗಳಿಗೆ 40–55LPCD ನೀರು ಪೂರೈಕೆಯಿದೆ ಹಾಗೂ 201 ಜನವಸತಿಗಳಿಗೆ 40LPCDಗಿಂತ ಕಡಿಮೆ ನೀರು ಪೂರೈಕೆಯಿದೆ.

ಮೇಲ್ಕಂಡ ಜಿಲ್ಲೆಗಳಲ್ಲಿ ಮಳೆ ನೀರನ್ನು ಸಂಗ್ರಹಿಸಿ ಅಂತರ್ಜಲ ಮರುಪ್ರವಹಿಸುವ ಮೂಲಕ ಅಂತರ್ಜಲ ಆಧಾರಿತ ಯೋಜನೆಗಳನ್ನು ಕುಡಿಯುವ ನೀರಿನ ನಿರಂತರತೆ ಕಾಪಾಡಬೇಕಾಗಿದೆ. ಜೊತೆಗೆ, ಸದರಿ ಜಿಲ್ಲೆಗಳಲ್ಲಿ ಕೆರೆಗಳ ಹೂಳೆತ್ತುವುದು, ಕೆರೆಗಳ ಅಭಿವೃದ್ಧಿ ಮಾಡುವುದು ಹಾಗೂ ಚೆಕ್ ಡ್ಯಾಮ್‌ಗಳ ನಿರ್ಮಾಣ ಮತ್ತು ಇಂಗು ಗುಂಡಿಗಳ (Percolation Tank) ನಿರ್ಮಾಣ ಮಾಡುವ ಮುಖೇನ ವ್ಯವಸಾಯ ಹಾಗೂ ಕುಡಿಯುವ ನೀರಿಗೆ ಅನುಕೂಲವಾಗುವಂತೆ ವಿವಿಧ ಯೋಜನೆಗಳಡಿ ಮಳೆ ನೀರು ಕೊಯ್ಲು ಅಂದೋಲನಕ್ಕೆ ವಿಶೇಷ ಗಮನ ಹರಿಸಲಾಗುತ್ತಿದೆ.

ಚಿಕ್ಕಬಳ್ಳಾಪುರ ಜಿಲ್ಲೆಯ ಕೆರೆಗಳ ಅಭಿವೃದ್ಧಿ ಜೊತೆಗೆ ಪೋಷಕ ಕಾಲುವೆಗಳನ್ನು ಸಹ ಸ್ವಚ್ಛ ಮಾಡಲಾಗುತ್ತಿದೆ. ಈ ಕುರಿತಂತೆ ಪಾಲಾರ್ ಮತ್ತು ಪೆನ್ನಾರ್ ಕಣಿವೆಗಳ ಅಭಿವೃದ್ಧಿ ಸೇರಿದಂತೆ, ಕೆರೆಗಳ

ಅಭಿವೃದ್ಧಿಗಾಗಿ ಪೂರ್ವಭಾವೀ ಸಮೀಕ್ಷೆ ಹಾಗೂ ವಿನ್ಯಾಸದ ವರದಿ ತಯಾರಿಕೆ ಪ್ರಕ್ರಿಯೆ ನಡೆದಿದೆ. ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ 119 ಕೆರೆಗಳ ಅಭಿವೃದ್ಧಿಗಾಗಿ ರೂ.8.00 ಕೋಟಿ ಅಂದಾಜಿನ ಕಾಮಗಾರಿಗಳನ್ನು ರೂಪಿಸಲಾಗಿದೆ.

ಬಾಗೇಪಲ್ಲಿ ಮತ್ತು ಗುಡಿಬಂಡೆ ತಾಲ್ಲೂಕಿನ 128 ಗ್ರಾಮಗಳಿಗೆ ಪರಗೋಡು ಜಲಾಶಯದಿಂದ ಸಾಕಷ್ಟು ಪ್ರಮಾಣದಲ್ಲಿ ಶುದ್ಧ ಕುಡಿಯುವ ನೀರು ವ್ಯವಸ್ಥೆ ಕಲ್ಪಿಸಲು ರೂ.22.91 ಕೋಟಿ ಅಂದಾಜಿನ ಯೋಜನೆಗೆ ಅನುಮೋದನೆ ನೀಡಲಾಗಿದೆ. ಈ ಯೋಜನೆಯನ್ನು KUWSDB ಮುಖೇನ ಅನುಷ್ಠಗೊಳಿಸುತ್ತಿದ್ದು, ಆಗಸ್ಟ್ 2010ಕ್ಕೆ ಯೋಜನೆ ಪೂರ್ಣಗೊಳಿಸಲು ಉದೇಶಿಸಿದೆ. ಅದೇ ರೀತಿ, ವಂಡಮಾನ್ ಕೆರೆಯಿಂದ ಬಾಗೇಪಲ್ಲಿ ತಾಲ್ಲೂಕಿನ 62 ಗ್ರಾಮಗಳಿಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಗಾಗಿ ರೂ.9.92ಕೋಟಿ ಅಂದಾಜಿನ ಯೋಜನೆಗೆ ಅನುಮೋದನೆ ನೀಡಲಾಗಿದೆ. ಯೋಜನೆಯ ಕಾಮಗಾರಿ ಪ್ರಗತಿಯಲ್ಲಿದೆ.

ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ಮುಳಬಾಗಿಲು ಹಾಗೂ ಬಂಗಾರಪೇಟೆ ತಾಲ್ಲೂಕಿನ ಕೆರೆಗಳ ಜೀರ್ಣೋದ್ಧಾರ ಸಲುವಾಗಿ ಶಾಶ್ವತ ವ್ಯವಸ್ಥೆಗೆ ತಾಂತ್ರಿಕ ಕಾರ್ಯಸಿಂಧುತ್ವವಿರುವ ಯೋಜನೆಗಳನ್ನು ರೂಪಿಸಲಾಗುತ್ತಿದೆ. ಅಂತೆಯೇ, ಕೋಲಾರ ಜಿಲ್ಲೆ ಮಾಲೂರು ತಾಲ್ಲೂಕಿನ 184 ಸಮಸ್ಯಾತ್ಮಕ ಗ್ರಾಮಗಳಿಗೆ ಅನುಕೂಲವಾಗುವಂತೆ ಮಾರ್ಕಂಡೇಯ ಜಲಾಶಯ ಆಧಾರಿತ ರೂ.36.19 ಕೋಟಿ ಅಂದಾಜಿನ ಯೋಜನೆಗೆ ಈಗಾಗಲೇ ಅನುಮೋದನೆ ನೀಡಿದ್ದು, 2010ರ ಸಾಲಿನಲ್ಲಿ ಯೋಜನೆ ಪೂರ್ಣಗೊಳಿಸುವ ಉದ್ದೇಶವಿದೆ.

ಮೇಲ್ಕಂಡ ಪರಿಕ್ರಮಗಳಿಂದ ಕೋಲಾರ ಮತ್ತು ಬಾಗೇಪಲ್ಲಿ ಜಿಲ್ಲೆಯ ಸಮಸ್ಯಾತ್ಮಕ ಗ್ರಾಮಗಳಿಗೆ ಸಮರ್ಪಕ ಕುಡಿಯುವ ನೀರಿನ ವ್ಯವಸ್ಥೆಯಾಗುತ್ತದೆ. ಇದಲ್ಲದೇ, ಇದರಿಂದ ಸಣ್ಣ ಪ್ರಮಾಣದ ಕೃಷಿ ಚಟುವಟಿಕೆಗಳಿಗೂ ಅನುಕೂಲವಾಗುತ್ತದೆಂದು ಆಶಿಸಲಾಗಿದೆ.

**ನೀರಾವರಿ ಸಚಿವರು**

**ಮಾದರಿ – 2**

(2) ಶ್ರೀ ---------- (ವಿಧಾನ ಸಭಾ ಸದಸ್ಯರು) ಅವರು ಜಿಲ್ಲಾ ಮಟ್ಟದ ಆಸ್ಪತ್ರೆಗಳಿಗೆ ಎಂ.ಆರ್.ಐ. ಸಿಟಿ ಸ್ಕ್ಯಾನಿಂಗ್, ಸ್ಕ್ಯಾನಿಂಗ್, ವೆಂಟಿಲೇಟರ್, ಕಾರ್ಡಿಯಾಕ್ ಮಾನಿಟರ್ ಇತ್ಯಾದು ಉಪಕರಣಗಳನ್ನು ಒದಗಿಸುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯುವುದು.

**ಹೇಳಿಕೆ:**

ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಸುಧಾರಣಾ ಯೋಜನೆಯಡಿ ರಾಜ್ಯದಲ್ಲಿ 7 ಜಿಲ್ಲಾ ಆಸ್ಪತ್ರೆಗಳಿಗೆ ರೀಜನಲ್ ಡಯಾಗ್ನಾಸ್ಟಿಕ್ ಪ್ರಯೋಗಾಲಯಗಳನ್ನು ಸ್ಥಾಪಿಸಲು 11ನೇ ಆರ್ಥಿಕ ಹಣಕಾಸು ಆಯೋಗದ ಅನುದಾನದಲ್ಲಿ ಸಿ.ಟಿ.ಸ್ಕ್ಯಾನರ್‌ಗಳನ್ನು ಖರೀದಿಸಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿತ್ತು. ಸದರಿ ಟೆಂಡರ್ ಗಳನ್ನು ಪರಿಶೀಲಿಸಿ, ಖರೀದಿ ಆದೇಶವನ್ನು ನೀಡುವ ಹಂತದಲ್ಲಿ ಮೆ|| ಟೆವಿಕ್ಟ್ರಾನ್ ಮೆಡಿಕಲ್ ಸಿಸ್ಟಮ್ ಮತ್ತು ಮೆ|| ಎರ್‌ಬಿಸ್ ಇಂಜಿನಿಯರ್ ಕಂಪನಿ, ಚೆನ್ನೈ ರವರು ಉಚ್ಚ ನ್ಯಾಯಾಲಯದಲ್ಲಿ ದಾವೆ ಹೂಡಿದ ಕಾರಣ ಸಕಾಲದಲ್ಲಿ ಸಿ.ಟಿ. ಸ್ಕ್ಯಾನರ್‌ಗಳನ್ನು ಖರೀದಿ ಮಾಡಲಾಗಲಿಲ್ಲ.

ಸರ್ಕಾರವು ಡಿಸೆಂಬರ್–2004ರಲ್ಲಿ ರಾಜ್ಯದ 17 ಜಿಲ್ಲಾ ಆಸ್ಪತ್ರೆಗಳಲ್ಲಿ ಸಿ.ಟಿ.ಸ್ಕ್ಯಾನರ್‌ಗಳನ್ನು ಅಳವಡಿಸಲು ನಿರ್ಣಯಿಸಿದಂತೆ, 2005–06ನೇ ಸಾಲಿನಲ್ಲಿ ಟೆಂಡರ್ ಪ್ರಕ್ರಿಯೆ ಜರುಗಿಸಿ, ಮೇ, 2005ರಲ್ಲಿ Award of Notification ಅನ್ನು 2 ಸಂಸ್ಥೆಗಳಿಗೆ ನೀಡಲಾಯಿತು. ಇದರ ವಿರುದ್ಧ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ 2 ಪ್ರಕರಣಗಳು (ಪಿ.ಎ.ಎಲ್ ಸಂಖ್ಯೆ: 3062/2006 ಹಾಗೂ ರಿಟ್ ಅರ್ಜಿ ಸಂಖ್ಯೆ:1751/2007) ರಲ್ಲಿ ದಾಖಲಾಗಿದೆ ಹಾಗೂ ಕರ್ನಾಟಕ ಲೋಕಾಯುಕ್ತರಿಗೂ ಸಹ ವಿಪ್ರೋ ಜಿ.ಇ.ಸಂಸ್ಥೆಯವರು ದೂರನ್ನು ಸಲ್ಲಿಸಿರುವ ಹಿನ್ನೆಲೆಯಲ್ಲಿ ಈ ಪ್ರಕ್ರಿಯೆ ಸಹ ಸ್ಥಗಿತಗೊಂಡಿದೆ.

ಜಿಲ್ಲಾ ಆಸ್ಪತ್ರೆಗಳಾದ ಚಿಕ್ಕಮಗಳೂರು, ಹಾವೇರಿ, ಚಿತ್ರದುರ್ಗ ಮತ್ತು ಚಾಮರಾಜನಗರ ಆಸ್ಪತ್ರೆಗಳಿಗೆ ಅನೆಸ್ತೀಶಿಯಾ ವೆಂಟಿಲೇಟರ್, ಕಾರ್ಡಿಯಾಕ್ ಮಾನಿಟರ್ ಗಳನ್ನು ಕರ್ನಾಟಕ ಆರೋಗ್ಯ ಪದ್ದತಿ ಅಭಿವೃದ್ಧಿ ಸುಧಾರಣಾ ಯೋಜನೆ ಮತ್ತು ಟೆಲಿಮೆಡಿಷನ್ ಯೋಜನೆಗಳಡಿ ಸರಬರಾಜು ಮಾಡಲಾಗಿದೆ. ಮುಂದುವರೆದು, ಈ 4 ಆಸ್ಪತ್ರೆಗಳಿಗೆ ಸುಸಜ್ಜಿತವಾದ ಅಂಬುಲೆನ್ಸ್ ವೆಂಟಿಲೇಟರ್ ಮತ್ತು ಕಾರ್ಡಿಯಾಕ್ ಮಾನಿಟರ್‌ಗಳನ್ನು 2006–07ನೇ ಸಾಲಿನಲ್ಲಿ ಒದಗಿಸಲಾಗಿದೆ.

ಆರೋಗ್ಯ ಸಚಿವರು

3. ಶ್ರೀ --------- (ವಿಧಾನ ಸಭಾ ಸದಸ್ಯರು) ಅವರು ಹುಬ್ಬಳ್ಳಿ, ಧಾರವಾಡ ಕಮೀಶ್ನರೇಟ್ ವ್ಯಾಪ್ತಿಯಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಮಾನ್ಯ ಗೃಹ ಸಚಿವರ ಗಮನ ಸೆಳೆಯುವುದು.

ಹುಬ್ಬಳ್ಳಿ-ಧಾರವಾಡ ಕಮಿಶ್ನರೇಟ್ ವ್ಯಾಪ್ತಿಯಲ್ಲಿ ಅಪರಾಧ ಪ್ರಕರಣಗಳು ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ ಅವಳಿ ನಗರಗಳ ಶಾಂತಿ ಸುರಕ್ಷತೆಯ ದೃಷ್ಟಿಯಿಂದ ಹೊಯ್ಸಳ ವಾಹನ ಹಾಗೂ ಅದಕ್ಕೆ ಬೇಕಾದ ಸಿಬ್ಬಂದಿ ಒದಗಿಸುವುದು ಅತೀ ಅವಶ್ಯಕವಿದೆ.

ಅಲ್ಲದೇ ಹುಬ್ಬಳ್ಳಿ ವಿಮಾನ ನಿಲ್ದಾಣ ಆಧುನೀಕರಣಗೊಳ್ಳುತ್ತಿದ್ದು, ವಿಮಾನ ನಿಲ್ದಾಣ ಸುರಕ್ಷತೆಗಾಗಿ ಅವಶ್ಯವಾಗಿರುವ ಪೊಲೀಸ್ ಸಿಬ್ಬಂದಿಯನ್ನು ಒದಗಿಸುವ ಬಗ್ಗೆ ಹುಬ್ಬಳ್ಳಿ-ಧಾರವಾಡ ಪೊಲೀಸ್ ಕಮೀಶ್ನರೇಟ್‌ದಿಂದ ಪ್ರಸ್ತಾವನೆ ತರಿಸಿ ಮಂಜೂರು ಮಾಡುವ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು ಇವರು ಪೊಲೀಸ್ ಆಯುಕ್ತರು, ಹುಬ್ಬಳ್ಳಿ-ಧಾರವಾಡ ನಗರ, ಇವರಿಂದ ಪ್ರಸ್ತಾವನೆಗಳನ್ನು ಪಡೆದಿದ್ದು, ಈಗ ಅದು ಅವರ ಕಛೇರಿಯಲ್ಲಿ ಪರಿಶೀಲನೆಯಲ್ಲಿರುತ್ತದೆ. ಪ್ರಸ್ತಾವನೆಯನ್ನು ಅವರಿಂದ ತರಿಸಿ ಹಣಕಾಸಿನ ಲಭ್ಯತೆಯ ಆಧಾರದ ಮೇಲೆ ಪರಿಶೀಲಿಸಿ ಅಗತ್ಯ ಕ್ರಮ ತೆಗೆದುಕೊಳ್ಳಲಾಗುವುದು.

ಗೃಹ ಸಚಿವರು

## ನಿಯಮ ೩೩೦ರ ಮೇರೆಗೆ ಚರ್ಚೆ

(ಅ) ಶ್ರೀ --------- (ವಿಧಾನ ಸಭಾ ಸದಸ್ಯರು) ಅವರು ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದಲ್ಲಿ ಭಾರತ ಸಂವಿಧಾನದ 16 (4) ಮತ್ತು 16(4ಎ)ಪರಿಚ್ಛೇದದಂತೆ ನೇಮಕಾತಿ ಮತ್ತು ಪದೋನ್ನತಿಗಳಲ್ಲಿ ಮೀಸಲಾತಿಸೌಲಭ್ಯಅಳವಡಿಸಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಟ ವರ್ಗಮವರಿಗೆ ಪ್ರಾತಿನಿಧ್ಯತೆಯನ್ನುಕಲ್ಪಿಸುವ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯ ತನಿಖಾ ತಂಡವು ದಿ.25–08–2007ರಂದು ಪ್ರವಾಸೋದ್ಯಮ ಇಲಾಖೆಗೆ ನೀಡಿರುವ ತನಿಖಾ ವರದಿಯ ಬಗ್ಗೆ ಇಲಾಖೆ ಏನು ಕ್ರಮಕೈಗೊಳ್ಳದಿರುವ ಬಗ್ಗೆ ಪ್ರಸ್ತಾಪಿಸುವುದು.

**ಉತ್ತರ:–**

ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ದಿ ನಿಗಮದಲ್ಲಿನ ನೇರ ನೇಮಕಾತಿ ಮತ್ತು ಪದೋನ್ನತಿಗಳಲ್ಲಿ ಮೀಸಲಾತಿ ಸೌಲಭ್ಯವನ್ನು ಅಳವಡಿಕೊಂಡು ಪ್ರಾತಿನಿದ್ಯತೆ ನೀಡುವ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯ ತನಿಖಾ ತಂಡವು ವರದಿ ಸಲ್ಲಿಸಿದ ನಂತರ ನಿಗಮದಲ್ಲಿ ನೇರ ನೇಮಕಾತಿ ಬ್ಯಾಕ್‌ಲಾಗ್ ಹುದ್ದೆಗಳಲ್ಲಿ ಈಗಾಗಲೇ 6 ಪರಿಶಿಷ್ಟ ಜಾತಿ ಹಾಗೂ 2 ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ನೇಮಿಸಿಕೊಳ್ಳಲಾಗಿದೆ. ಉಳಿದ ನೇರ ನೇಮಕಾತಿ ಬ್ಯಾಕ್ ಲಾಗ್ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡುವ ಸಲುವಾಗಿ ಪತ್ರಿಕೆಯಲ್ಲಿ ಪ್ರಕಟಿಸಲಾಗಿದೆ. ಬಾಕಿ ಇರುವ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡುವ ಸಲುವಾಗಿ ನಿಗಮದ ನೌಕರರ ಸೇವ ಹಿರಿತನ ಪಟ್ಟಿ ಲಭ್ಯವಿಲ್ಲದ ಕಾರಣ, ಮುಂಬಡ್ತಿಯಲ್ಲಿನ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿ ಮಾಡಲು ತಡವಾಗಿದೆ.

ಪದೋನ್ನತಿಗಳಲ್ಲಿ ಪರಿಶಿಷ್ಟ ಜಾತಿ ಹಆಗೂ ಪರಿಶಿಷ್ಟ ವರ್ಗದ ನೌಕರರ ಪಟ್ಟಿಯನ್ನು ತಯಾರಿಸಿ ಸಮಾಜ ಕಲ್ಯಾಣ ಇಲಾಖೆಯು ಸೂಚಿಸಿರುವಂತೆ ಖಾಲಿ ಹುದ್ದೆಗಳಿಗೆ ಲಭ್ಯವಿರುವ ಅರ್ಹ 6 ಪರಿಶಿಷ್ಟ ಜಾತಿ ನೌಕರರಿಗೆ ಪದೋನ್ನತಿ ನೀಡಲಾಗಿದೆ. ಇನ್ನೂ ಬಾಕಿ ಇರುವ ಹುದ್ದೆಗಳಿಗೆ ಪದೋನ್ನತಿ ನೀಡಲು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ನೌಕರರಿರುವುದಿಲ್ಲ.

**(ಆ) ಮೊರರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಹಂಗಾಮಿಯಾಗಿ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರು ಹಾಗೂ ಶಿಕ್ಷಕರ ಸೇವೆಯನ್ನು ಸಕ್ರಮಗೊಳಿಸುವ ಕುರಿತಂತೆ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಇವರು ನಿಯಮ 330 ರ ಅಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸಮಾಜ ಕಲ್ಯಾಣ ಸಚಿವರ ಹೇಳಿಕೆ:-**

ರಾಜ್ಯದ ಮೊರಾರ್ಜಿ ದೇಸಾಯಿ ವಸತಿಗಳಲ್ಲಿ ಪ್ರಾಂಶುಪಾಲರು ಹಾಗೂ ಶಿಕ್ಷಕರುಗಳನ್ನು ಗುತ್ತಿಗೆ ಆಧಾರದ ಮೇಲೆ ಆಯಾ ಶೈಕ್ಷಣಿಕ ಸಾಲಿಗೆ ನೇಮಕ ಮಾಡಿಕೊಳ್ಳುತ್ತಾ ಬರಲಾಗಿದೆ. ಅದಲ್ಲದೆ ಅಂತಹ ವಸತಿ ಶಾಲೆಗಳನ್ನು ಮಂಜೂರು ಮಾಡುವಾಗ ಪ್ರಾಂಶುಪಾಲರು ಹಾಗೂ ಶಿಕ್ಷಕರ ಹುದ್ದಗಳಿಗೆ ಶಿಕ್ಷಣ ಇಲಾಖೆಯಿಂದ ನಿಯೋಜನೆ ಮೇಲೆ ಸೇವೆ ಪಡೆದುಕೊಳ್ಳಲು ಅವಕಾಶ ಮಾಡಿಕೊಳ್ಳಲಾಗಿತ್ತು.

2004-05ನೇ ಸಾಲಿನ ಅಂತ್ಯಕ್ಕೆ ಒಟ್ಟು 755 ಶಿಕ್ಷಕರನ್ನು ತಾತ್ಕಾಲಿಕವಾಗಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದ್ದು ಪ್ರಸ್ತುತ 59 ಪ್ರಾಂಶುಪಾಲರು ಮತ್ತು 409 ಶಿಕ್ಷಕರುಗಳು ಕಾರ್ಯ ನಿರ್ವಹಹಿಸುತ್ತಿದ್ದಾರೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿರ್ವಹಣೆಯನ್ನು ದಿನಾಂಕ:1-4-2005 ರಿಂದ ಅನ್ವಯಿಸುವಂತೆ ಜಿಲ್ಲಾ ಪಂಚಾಯತ್‌ಗಳ ವ್ಯಾಪ್ತಿಗೆ ತರಲಾಗಿದೆ. ಈ ಗುತ್ತಿಗೆ ಆಧಾರಿತ ಶಿಕ್ಷಕರ ಸೇವೆಯನ್ನೂ ತಾತ್ಕಾಲಿಕವಾಗಿ ಮುಂದುವರೆಸಲು ಸುತ್ತೋಲೆಗಳನ್ನು ಹೊರಡಿಸಲಾಗಿದ್ದು ಜಿಲ್ಲಾ ಪಂಚಾಯತ್‌ಗಳು ಆಯಾ ಶೈಕ್ಷಣಿಕ ವರ್ಷಕ್ಕೆ ಸೀಮಿತಗೊಳಿಸಿ ಇವರ ಸೇವೆಯನ್ನು ಮುಂದುವರೆಸಿಕೊಂಡು ಬಂದಿರುತ್ತವೆ.

ಅದಲ್ಲದೆ ರಾಜ್ಯದ ಉಚ್ಚ ನ್ಯಾಯಾಲಯದಲ್ಲಿ ಒಟ್ಟು 9 ರಿಟ್ ಅರ್ಜಿಗಳನ್ನು ಹೂಡಿದ್ದರು, ಈ ಪ್ರಕರಣಗಳಲ್ಲಿ ಉಚ್ಚ ನ್ಯಾಯಾಲಯವು ವಿಚಾರಣೆ ನಡೆಸಿದ ನಂತರ ವಿವಿಧ ದಿನಾಂಕಗಳಲ್ಲಿ ತೀರ್ಪು ನೀಡುತ್ತಾ ಅಂತಹ ಬೋಧಕ ವರ್ಗದವರಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸುವಲ್ಲಿ ಸೇವಾಂಕ ಮತ್ತು ವಯೋಮಿತಿ ಸಡಿಲಿಕೆಗೆ ಸೌಲಭ್ಯ ನೀಡುವಂತೆ ಸೂಚಿಸಿತ್ತು. ಆ ಮೇರೆಗೆ ದಿನಾಂಕ: 10-10-2008 ರ ಅಧಿಸೂಚನೆ ಮುಖಾಂತರ ವಸತಿ ಶಾಲೆಗಳ ವಿವಿಧ ವೃಂದಗಳಿಗೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಲಾಗಿದ್ದು ಗುತ್ತಿಗೆ ಶಿಕ್ಷಕರ ಪ್ರತಿ ವರ್ಷದ ಗುತ್ತಿಗೆ ಸೇವೆಗೆ 5 ರಂತೆ ಗರಿಷ್ಟ 25 ಕೃಪಾಂಕಗಳನ್ನು ಹಾಗೂ ಪ್ರತಿ ವರ್ಷದ ಗುತ್ತಿಗೆ ಆಧಾರಿತ ಸೇವೆಗೆ 01 ವರ್ಷ ಹೆಚ್ಚುವರಿ ವಯೋಮಿತಿ ನೀಡಲು ಅವಕಾಶವಿದ್ದು ಅಂತಹ ವಯೋಮಿತಿಯ ಅವಧಿಯನ್ನು ಗರಿಷ್ಟ 05 ವರ್ಷಗಳಿಗೆ ಸೀಮಿತಗೊಳಿಸಲಾಗಿದೆ.

ಈ ಮಧ್ಯೆ ಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಪ್ರಾಂಶುಪಾಲರು ಮತ್ತು ಶಿಕ್ಷಕರುಗಳು ಅವರ ಸೇವೆಯನ್ನು ಖಾಯಂಗೊಳಿಸುವಂತೆ ಒತ್ತಾಯಿಸುತ್ತಾ ಅನೇಕ ಮನವಿಗಳನ್ನು ಸಲ್ಲಿಸಿರುತ್ತಾರೆ.

ಈ ಗುತ್ತಿಗೆ ಶಿಕ್ಷಕರ ಸೇವೆಯನ್ನು ಖಾಯಂಗೊಳಿಸುವ ಕುರಿತಂತೆ ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ, ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನಾ ಇಲಾಖೆ ಹಾಗೂ ಆರ್ಥಿಕ ಇಲಾಖೆ ಇವುಗಳ ಅಭಿಪ್ರಾಯ ಪಡೆಯಲಾಗಿದೆ. ಶ್ರೀಮತಿ ಉಮಾದೇವಿ ಇವರ ಪ್ರಕರಣದಲ್ಲಿ ಭಾರತದ ಸರ್ವೋಚ್ಚ ನ್ಯಾಯಾಲಯವು ದಿನಾಂಕ:10-4-2006 ರಂದು ನೀಡಿರುವ ತೀರ್ಪಿನ ಹಿನ್ನಲೆಯಲ್ಲಿ ಯಾವುದೇ ಗುತ್ತಿಗೆ ಆಧಾರಿತ ನೌಕರರ ಸೇವೆಯನ್ನು ಸಕ್ರಮಾತಿಗೊಳಿಸಲು ಬರುವುದಿಲ್ಲ ಎಂಬುದಾಗಿ ಆ ಇಲಾಖೆಗಳು ತಿಳಿಸಿರುತ್ತವೆ.

ಇತ್ತೀಚೆಗೆ ವಿಧಾನ ಪರಿಷತ್ತಿನಲ್ಲಿ ಗುತ್ತಿಗೆ ಆಧಾರಿತ ಶಿಕ್ಷಕರುಗಳ ಸೇವೆಯನ್ನು ಖಾಯಂಗೊಳಿಸುವುದಾಗಿ ಆಶ್ವಾಸನೆ ನೀಡಲಾಗಿದ್ದು ಆ ಮೇರೆಗೆ ಪರಿಶೀಲಿಸಲಾಗುತ್ತಿದೆ.

ಶಿಕ್ಷಣ ಸಚಿವರು

## ಅನುಬಂಧ – VIII

## ಸಾರ್ವಜನಿಕ ಮಹತ್ವದ ಜರೂರು ವಿಷಯದ ಅಲ್ಪಕಾಲಾವಧಿ ಚರ್ಚೆಯ

## ಸೂಚನೆ ಹಾಗೂ ಉತ್ತರದ ಮಾದರಿ

**ಶ್ರೀಯುತರುಗಳಾದ:---------------------**(ವಿಧಾನ ಸಭೆಯ ಸದಸ್ಯರುಗಳು) ಬೆಂಗಳೂರು ಮಹಾ ನಗರದಲ್ಲಿ ಪಾದಚಾರಿಗಳು ಅನುಭವಿಸುತ್ತಿರುವ ಕಷ್ಟಗಳ ಬಗ್ಗೆ ನಡೆದ ಚರ್ಚೆಗೆ ಸರ್ಕಾರದ ಉತ್ತರ.

1. ಬೆಂಗಳೂರು ನಗರದಲ್ಲಿ ಮಾರ್ಗಗಳು ಕಿರಿದಾಗಿದ್ದು ಹಾಲಿ ನಗರಾಭಿವೃದ್ಧಿ, ಮಹಾನಗರಪಾಲಿಕೆ ಮತ್ತಿತರ ಇಲಾಖೆಯವರ ಸಹಯೋಗದೊಂದಿಗೆ ರಸ್ತೆ ಅಗಲೀಕರಣ ಕಾರ್ಯ ಕೈಗೊಳ್ಳಲಾಗುತ್ತಿದೆ.

2. ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ವೈಜ್ಞಾನಿಕವಾಗಿ ಶೋಧನೆ ನಡೆಸಿ ಶಾಲಾ ಕಾಲೇಜು, ಆಸ್ಪತ್ರೆಗಳ ಮತ್ತು ಸಾರ್ವಜನಿಕರಿಗೆ ಅವಶ್ಯಕತೆಯಿರುವ ಕಡೆಗಳಲ್ಲಿ ಉಬ್ಬರವಿರುವಂತಹ ಪಾದಚಾರಿಗಳ ಮಾರ್ಗ High Raised Pedestrian Crossings ಗಳನ್ನು ನಿರ್ಮಿಸುವ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ.

3. ಇನ್ನಿತರ ಕಡೆಗಳಲ್ಲಿ ಸುರಂಗ ಮಾರ್ಗಗಳನ್ನು ಹಾಗೂ ಮೇಲು ಸೇತುವೆಗಳ ನಿರ್ಮಾಣ ಕೆಲಸ ಕೈಗೊಳ್ಳಲಾಗಿರುತ್ತದೆ.

4. ಪಾದಚಾರಿಗಳಿಗೆ ಸುರಕ್ಷಿತವಾಗಿ ರಸ್ತೆ ದಾಟಿಸಲು ಗೃಹ ರಕ್ಷಕದಳದವರನ್ನು ನಿಯೋಜಿಸಲಾಗಿದೆ.

5. ಪಾದಚಾರಿಗಳು ಸುರಕ್ಷಿತವಾಗಿ ರಸ್ತೆ ದಾಟಲು ಅನುಕೂಲವಾಗುವಂತೆ ಜೀಬ್ರಾ ಕ್ರಾಸಿಂಗ್ ಬಣ್ಣ ಬಳಿಯಲಾಗುತ್ತಿದೆ.

6. ಸಾರ್ವಜನಿಕರ ಬೇಡಿಕೆಗೆ ಅನುಸಾರವಾಗಿ ಸ್ಕೈ ವಾಕಿಂಗ್ ಮತ್ತು ಸುರಂಗ ಮಾರ್ಗಗಳನ್ನು ನಿರ್ಮಿಸುವ ಯೋಜನೆ ಕಾರ್ಯರೂಪದಲ್ಲಿರುತ್ತದೆ.

7. ನಗರದಾದ್ಯಂತ 500 ಬ್ಲಿಂಕರ್ಸ್‌ಗಳನ್ನು ಅಳವಡಿಸಿ ಪಾದಚಾರಿಗಳ ಸುರಕ್ಷತೆಯನ್ನು ಕಾಪಾಡಲಾಗುತ್ತಿದೆ.

8. ಪ್ರತಿಯೊಂದು ಸಿಗ್ನಲ್, ಲೈಟ್‌ಗಳಲ್ಲಿ ಪಾದಚಾರಿಗಳಿಗೆ ರಸ್ತೆ ದಾಟಲು ಅನುಕೂಲವಾಗುವಂಗೆ ನಿಖರವಾದ ವೇಳೆ (Committed time) ನಿಗಧಿಪಡಿಸಿದೆ.

9. ಪಾದಚಾರಿಗಳು ರಸ್ತೆ ದಾಟಲು ಅನುಕೂಲವಾಗಲು ನಗರಾದ್ಯಂತ ಅತ್ಯವಶ್ಯಕ ಸ್ಥಳಗಳಲ್ಲಿ 18 ಪೆಲಿಕಾನ್ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗಿದೆ

10. ಮೇಲೆ ನಮೂದಿಸಲಾದ ಪಾದಚಾರಿಗಳ ಸುರಕ್ಷತಾ ಕ್ರಮದ ಫಲವಾಗಿ ಮೃತಪಟ್ಟ ಪಾದಚಾರಿಗಳ ಸಂಖ್ಯೆ ಶೇ.29 ರಷ್ಟು ಕಡಿಮೆಯಾಗಿದೆ.

ಅ) 2007 ರಲ್ಲಿ ಮೃತಪಟ್ಟವರು–518

ಆ) 2008 ರಲ್ಲಿ ಮೃತಪಟ್ಟವರು–455

ಇ) 2009 ರ ಜೂನ್ ಅಂತ್ಯಕ್ಕೆ ಮೃತಪಟ್ಟವರು–161

ಈ ಮೇಲೆ ನಮೂದಿಸಿರುವ ಕ್ರಮಗಳಿಂದಾಗಿ ಬೆಂಗಳೂರು ಮಹಾನಗರದಲ್ಲಿ ಪಾದಚಾರಿಗಳು ಎದುರಿಸುತ್ತಿರುವ ಕಷ್ಟಗಳಿಗೆ ಪರಿಹಾರ ನೀಡುವ ನಿಟ್ಟಿನಲ್ಲಿ ಸಾಕಷ್ಟು ಪರಿಹಾರ ಒದಗಿಸಿದಂತಾಗಿದೆ.

ಸಾರಿಗೆ ಸಚಿವರು

**ಅನುಬಂಧ – IX**

**ಶಾಸನ ರಚನೆ**

(ಮಾದರಿ ವಿಧೇಯಕ)

**ಕರ್ನಾಟಕ ವಿಧಾನ ಸಭೆ**

ಹದಿಮೂರನೇ ವಿಧಾನ ಸಭೆ

(ಮೂರನೇ ಅಧಿವೇಶನ)

## ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ವಿಧೇಯಕ, 2009

ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸಿ ನಿಗಮಿತಗೊಳಿಸುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ವಿಧೇಯಕ.

ಸಂಗೀತ ಮತ್ತು ಪ್ರದರ್ಶಕ ಕಲೆಗಳ ಎಲ್ಲಾ ಶಾಖೆಗಳಲ್ಲಿ ಕಲಿಕೆಯ ಮುನ್ನಡೆಯನ್ನು ಸಾಧಿಸುವುದು ಸಂಶೋಧನೆ ನಡೆಸುವುದು ದಾಖಲೀಕರಣ, ಧ್ವನಿ ಮತ್ತು ದೃಶ್ಯ ರೆಕಾರ್ಡಿಂಗ್‌ಗಳನ್ನು ಪ್ರಕಟಿಸುವ ಮತ್ತು ಜನಪ್ರಿಯಗೊಳಿಸುವ ಉದ್ದೇಶಕ್ಕಾಗಿ ಹಾಗೂ ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಅದಕ್ಕೆಂದೇ ಅನನ್ಯವಾಗಿ ನಿರತವಾದ ಒಂದು ಏಕ ಘಟಕೀಯ ಮತ್ತು ನಿವಾಸಿ ಸ್ವರೂಪದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಯುಕ್ತವಾದುದರಿಂದ;

ಇದು ಭಾರತ ಗಣರಾಜ್ಯದ ಐವತ್ತೊಂಭತ್ತನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ.–

**ಅಧ್ಯಾಯ – I**

**ಪ್ರಾರಂಭಿಕ**

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ ಅಧಿನಿಯಮ, 2009 ಎಂದು ಕರೆಯತಕ್ಕದ್ದು.

**(2) ಇದು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.**

**2. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಪಕ್ಕ ವಾದ್ಯಗಾರರು" ಎಂದರೆ ಹಾರ್ಮೋನಿಯಂ, ತಬಲ, ಪಿಟೀಲು, ಮೃದಂಗ, ಘಟಂ, ಕಂಜೀರ ಇತ್ಯಾದಿ ವಾದ್ಯಗಳನ್ನು ನುಡಿಸುವ ವಾದ್ಯಗಾರರು;

(ಬಿ) "ಗೊತ್ತುಪಡಿಸಿದ ದಿನಾಂಕ" ಎಂದರೆ, ಈ ಅಧಿನಿಯಮವು ಪ್ರಾರಂಭಗೊಳ್ಳಲು ಗೊತ್ತುಪಡಿಸಿದ ದಿನಾಂಕ.

(ಸಿ) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ

(ಡಿ) "ವಿದ್ಯಾರ್ಥಿನಿಲಯ" ಎಂದರೆ, ಈ ಅಧಿನಿಯಮದ ಉಪಬಂಧಗಳಿಗನುಸಾರವಾಗಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಅಥವಾ ಅದರಿಂದ ಮನ್ನಣೆ ಪಡೆದ ಒಂದು ನಿವಾಸ ಘಟಕ

(ಇ) "ಪ್ರದರ್ಶಕ ಕಲೆಗಳು" ಎಂದರೆ ನೃತ್ಯ, ನಾಟಕ, ಯಕ್ಷಗಾನ, ಹರಿಕಥೆ ಮತ್ತಿತರ ವಿಶ್ವವಿದ್ಯಾಲಯವು ಪ್ರದರ್ಶಕ ಕಲೆ ಎಂದು ನಿರ್ಧರಿಸಬಹುದಾದ ಕಲೆಗಳು ಎಂದರ್ಥ ಹಾಗೂ ಅದು ಅವುಗಳನ್ನು ಒಳಗೊಳ್ಳುತ್ತದೆ.

(ಎಫ್) "ನಿಯಮಿಸಲಾದುದು" ಎಂದರೆ, ಶಾಸನಗಳಿಂದ ನಿಯಮಿಸಲಾದುದು.

(ಜಿ) "ಶಾಸನಗಳು" ಎಂದರೆ, ಈ ಅಧಿನಿಯಮದಡಿಯಲ್ಲಿ ವಿಶ್ವವಿದ್ಯಾಲಯವು ರಚಿಸಿದ ಶಾಸನಗಳು.

(ಎಚ್) "ಅಧ್ಯಾಪಕರು" ಎಂದರೆ, ಪ್ರಾಧ್ಯಾಪಕರು, ವಿಶ್ರಾಂತ ಪ್ರಾಧ್ಯಾಪಕರು, ರೀಡರುಗಳು, ಉಪನ್ಯಾಸಕರು ಮತ್ತು ಶಾಸನಗಳಿಂದ ಅಧ್ಯಾಪಕರೆಂದು ಘೋಷಿತರಾಗಬಹುದಾದಂತಹ ಇತರ ವ್ಯಕ್ತಿಗಳು.

(ಐ) "ವಿಶ್ವವಿದ್ಯಾಲಯ" ಎಂದರೆ, 3ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ.

(ಜೆ) "ವಿಶ್ವವಿದ್ಯಾಲಯ ಅನುದಾನ ಆಯೋಗ" ಎಂದರೆ, ವಿಶ್ವವಿದ್ಯಾಲಯ ಅನುದಾನ ಆಯೋಗ ಅಧಿನಿಯಮ, 1956 ರ (1956ರ ಕೇಂದ್ರ ಅಧಿನಿಯಮ 3) 4ನೇ ಪ್ರಕರಣದ ಅಡಿಯಲ್ಲಿ ಸ್ಥಾಪಿತವಾದ ಆಯೋಗ.

(ಕೆ) "ವಿಶ್ವವಿದ್ಯಾಲಯ ಗ್ರಂಥಾಲಯ" ಎಂದರೆ, ವಿಶ್ವವಿದ್ಯಾಲಯವು ಪ್ರಾರಂಭಿಸಿರಲಿ ಅಥವಾ ಇಲ್ಲದಿರಲಿ, ಅದರಿಂದ ನಿರ್ವಹಿಸಲಾದ ಗ್ರಂಥಾಲಯ.

## ಅಧ್ಯಾಯ – II
## ವಿಶ್ವವಿದ್ಯಾಲಯ

**3. ವಿಶ್ವವಿದ್ಯಾಲಯದ ಸ್ಥಾಪನೆ.-** (1) ಸಂಗೀತ ಮತ್ತು ಪ್ರದರ್ಶಕ ಕಲೆಗಳಲ್ಲಿ ಕಲಿಕೆಯ ಮುನ್ನಡೆಯನ್ನು ಮತ್ತು ಸಂಶೋಧನೆಯ ಪುರೋಭಿವೃದ್ಧಿಯನ್ನು ಸಾಧಿಸುವುದಕ್ಕಾಗಿ "ಕರ್ನಾಟಕ ರಾಜ್ಯ ಡಾ॥ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯ" ಎಂಬ ಹೆಸರಿನ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸತಕ್ಕದ್ದು.

(2) ವಿಶ್ವವಿದ್ಯಾಲಯವು ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಶಾಶ್ವತ ಉತ್ತರಾಧಿಕಾರವನ್ನು ಹೊಂದಿದ್ದು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಹಾಗೂ ಸದರಿ ಹೆಸರಿನಿಂದ ದಾವೆ ಹೂಡತಕ್ಕದ್ದು ಮತ್ತು ದಾವೆಗೊಳಗಾಗತಕ್ಕದ್ದು.

(3) ವಿಶ್ವವಿದ್ಯಾಲಯವು ಏಕಘಟಕೀಯ ಮತ್ತು ನಿವಾಸಿ ಸ್ವರೂಪದ್ದಾಗಿರತಕ್ಕದ್ದು.

(4) ಸರ್ಕಾರದ ಮತ್ತು ಸಂಬಂಧಪಟ್ಟ ವಿಶ್ವವಿದ್ಯಾಲಯದ ಪೂರ್ವಾನುಮತಿಯೊಂದಿಗೆ ಹೊರತು, ರಾಜ್ಯದಲ್ಲಿರುವ ಇತರ ಯಾವುದೇ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಅಥವಾ ಸಹವರ್ತಿತವಾದ ಅಥವಾ ಅದರಿಂದ ನಿರ್ವಹಿಸಲಾದ ಯಾವ ಸಂಸ್ಥೆಗೂ ಯಾವುದೇ ಉದ್ದೇಶಕ್ಕೆ ಮಾನ್ಯತೆ ನೀಡತಕ್ಕದ್ದಲ್ಲ.

(5) ವಿಶ್ವವಿದ್ಯಾಲಯದ ಕೇಂದ್ರ ಕಾರ್ಯಸ್ಥಾನವು ಮೈಸೂರು ಜಿಲ್ಲೆಯ ಪರಿಮಿತಿಯೊಳಗೆ ಅಥವಾ ಈ ಪರಿಮಿತಿಯ ಇಪ್ಪತ್ತು ಕಿಲೋಮೀಟರುಗಳ ಫಾಸಲೆಯೊಳಗಿರುವ ಯಾವುದೇ ಸ್ಥಳದಲ್ಲಿ ಇರತಕ್ಕದ್ದು.

(6) ವಿಶ್ವವಿದ್ಯಾಲಯವು, ಚರ ಮತ್ತು ಸ್ಥಿರ ಸ್ವತ್ತುಗಳೆರಡನ್ನೂ ಆರ್ಜಿಸಲು ಮತ್ತು ಧಾರಣ ಮಾಡಲು, ವಿಶ್ವವಿದ್ಯಾಲಯದ ಉದ್ದೇಶಗಳಿಗಾಗಿ ಅದರಲ್ಲಿ ನಿಹಿತವಾಗಿರಬಹುದಾದ ಅಥವಾ ಅದರಿಂದ

ಆರ್ಜಿತವಾಗಿರಬಹುದಾದ ಯಾವುದೇ ಚರ ಮತ್ತು ಸ್ಥಿರ ಸ್ವತ್ತನ್ನು ರಾಜ್ಯ ಸರ್ಕಾರದ ಪೂರ್ವಾನುಮೋದನೆಯೊಡನೆ ಗುತ್ತಿಗೆಗೆ ನೀಡಲು, ಮಾರಾಟ ಮಾಡಲು ಅಥವಾ ಅನ್ಯಥಾ ವರ್ಗಾವಣೆ ಮಾಡಲು ಮತ್ತು ಕರಾರುಗಳನ್ನು ಮಾಡಿಕೊಳ್ಳಲು ಹಾಗೂ ಈ ಅಧಿನಿಯಮದ ಉದ್ದೇಶಕ್ಕಾಗಿ ಅವಶ್ಯವಾದ ಇತರ ಎಲ್ಲಾ ಕಾರ್ಯಗಳನ್ನು ನಿರ್ವಹಿಸಲು ಸಕ್ಷಮವಾಗಿರತಕ್ಕದ್ದು.

(7) ವಿಶ್ವವಿದ್ಯಾಲಯವು, ತನ್ನಲ್ಲಿ ನಿಹಿತವಾಗಿದ್ದಿರಬಹುದಾದ ಅಥವಾ ತಾನು ಆರ್ಜಿಸಬಹುದಾದ ಯಾವುದೇ ಸ್ಥಿರ ಸ್ವತ್ತನ್ನು ಸರ್ಕಾರದ ಪೂರ್ವಾನುಮೋದನೆಯನ್ನು ಪಡೆಯದೇ ಗುತ್ತಿಗೆ ನೀಡತಕ್ಕದ್ದಲ್ಲ, ಮಾರಾಟ ಮಾಡತಕ್ಕದ್ದಲ್ಲ ಅಥವಾ ಅನ್ಯಥಾ ವರ್ಗ ಮಾಡತಕ್ಕದ್ದಲ್ಲ.

(8) ವಿಶ್ವವಿದ್ಯಾಲಯವು ಹೂಡಿದ ಅಥವಾ ಅದರ ವಿರುದ್ಧ ಹೂಡಲಾದ ಎಲ್ಲಾ ದಾವೆಗಳಲ್ಲಿ ಮತ್ತು ಇತರ ಕಾನೂನು ವ್ಯವಹರಣೆಗಳಲ್ಲಿ ವಾದ ಪ್ರತಿವಾದ ಪತ್ರಗಳಿಗೆ ಕುಲಸಚಿವರು ಸಹಿ ಮಾಡಿ ಸತ್ಯಾಪನೆ ಮಾಡತಕ್ಕದ್ದು ಮತ್ತು ಅಂಥ ದಾವೆಗಳಲ್ಲಿನ ಹಾಗೂ ವ್ಯವಹರಣೆಗಳಲ್ಲಿನ ಎಲ್ಲಾ ಆದೇಶಿಕೆಗಳನ್ನು ಕುಲಸಚಿವರಿಗೆ ನೀಡತಕ್ಕದ್ದು ಮತ್ತು ಅವರಿಗೆ ಜಾರಿ ಮಾಡತಕ್ಕದ್ದು.

**4. ವಿಶ್ವವಿದ್ಯಾಲಯದ ಧ್ಯೇಯೋದ್ದೇಶಗಳು.–** ವಿಶ್ವವಿದ್ಯಾಲಯವು ಈ ಮುಂದಿನ ಧ್ಯೇಯೋದ್ದೇಶಗಳನ್ನು ಹೊಂದಿರತಕ್ಕದ್ದು, ಎಂದರೆ.–

(1) ಸಂಗೀತ ಮತ್ತು ಪ್ರದರ್ಶಕ ಕಲೆಗಳ ಎಲ್ಲಾ ಶಾಖೆಗಳಲ್ಲಿ ಶಿಕ್ಷಣವನ್ನು ಒದಗಿಸುವುದು ಮತ್ತು ಸಂಗೀತ ಮತ್ತು ಪ್ರದರ್ಶಕ ಕಲೆಗಳಲ್ಲಿ ಸಂಶೋಧನೆ ಹಾಗೂ ಕಲಿಕೆಯ ಮುನ್ನಡೆಗೆ ಅನುಕೂಲಗಳನ್ನು ಕಲ್ಪಿಸುವುದು ಹಾಗೂ ಅವುಗಳ ಜ್ಞಾನವನ್ನು ಪ್ರಸಾರ ಮಾಡುವುದು;

(2) ಸಂಗೀತ ಮತ್ತು ಪ್ರದರ್ಶಕ ಕಲೆಗಳ ಎಲ್ಲ ಪ್ರಕಾರಗಳು ಮತ್ತು ಶೈಲಿಗಳಲ್ಲಿ ಹಾಗೂ ಅವುಗಳ ಅಧ್ಯಯನದಲ್ಲಿ ಬೋಧನೆ, ತರಬೇತಿ ಹಾಗೂ ಸಂಶೋಧನೆ ನಡೆಸುವ ಅತ್ಯುನ್ನತ ಸಂಸ್ಥೆಯಾಗಿ ಕೆಲಸ ಮಾಡುವುದು;

(3) ಕರ್ನಾಟಕದಲ್ಲಿ ಪ್ರಚಲಿತವಿರುವ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಎಲ್ಲ ಪ್ರಕಾರಗಳಿಗೆ ವಿಶೇಷವಾದ ಒತ್ತನ್ನು ನೀಡಿ ಭಾರತೀಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಸಾಂಪ್ರದಾಯಿಕ ಪದ್ಧತಿಯನ್ನು ಸಂರಕ್ಷಿಸುವುದು, ಪೋಷಿಸುವುದು, ಜನಪ್ರಿಯಗೊಳಿಸುವುದು ಮತ್ತು ಉತ್ತೇಜಿಸುವುದು;

(4) ಸಂಗೀತ, ಪ್ರದರ್ಶಕ ಕಲೆಗಳ ಹಾಗೂ ಮೇಲೆ ಹೇಳಿದ ಅಧ್ಯಯನ ವಿಷಯಗಳಲ್ಲಿ ಅಡಗಿರುವ ಜ್ಞಾನ ಭಂಡಾರವನ್ನು ಹಾಗೂ ಆಧುನಿಕ ಜಗತ್ತಿಗೆ ಅವು ಎಷ್ಟು ಪ್ರಸ್ತುತ ಎಂಬ ಮಹತ್ವವನ್ನು ಸರ್ವರಿಗೂ ತಿಳಿಯಪಡಿಸುವುದು;

(5) ಸಮಾಜದ ಎಲ್ಲ ಜನವರ್ಗಗಳಲ್ಲಿ ಸಂಗೀತ ಮತ್ತು ಪ್ರದರ್ಶಕ ಕಲೆಗಳನ್ನು ಜನಪ್ರಿಯಗೊಳಿಸುವುದು.

(6) ಸಂಗೀತ ಮತ್ತು ಪ್ರದರ್ಶಕ ಕಲೆಗಳ ಎಲ್ಲ ಪ್ರಕಾರಗಳು ಹಾಗೂ ವೈವಿಧ್ಯಗಳನ್ನು ಕುರಿತ ಸಾಹಿತ್ಯವನ್ನು ಮತ್ತು ಕನ್ನಡ ಮತ್ತು ಇತರ ಭಾಷೆಗಳಲ್ಲಿರುವ ಹಸ್ತಪ್ರತಿಗಳನ್ನು ತಯಾರಿಸುವುದು, ಕ್ರೋಢೀಕರಿಸುವುದು, ಪುನರುಜ್ಜೀವನಗೊಳಿಸುವುದು, ಉತ್ತೇಜಿಸುವುದು, ಭಾಷಾಂತರಿಸುವುದು ಹಾಗೂ ಪ್ರಕಟಿಸುವುದು;

(7) ಸಂಗೀತ ಪ್ರದರ್ಶಕ ಕಲೆಗಳ ಎಲ್ಲ ಪ್ರಕಾರಗಳ ಅಧ್ಯಯನವನ್ನು ಕ್ರಮಬದ್ಧವಾಗಿಸುವುದು;

(8) ಸಂಗೀತ ಮತ್ತು ಪ್ರದರ್ಶಕ ಕಲೆಗಳನ್ನು ಪೋಷಿಸುವುದು ಮತ್ತು ಕಾರ್ಯಕ್ರಮಗಳನ್ನು ರೂಪಿಸುವುದು ಹಾಗೂ ಆಧುನಿಕ ವೈಜ್ಞಾನಿಕ ತಂತ್ರಜ್ಞಾನದ ಈ ದಿನಗಳಲ್ಲಿ ಅವುಗಳು ಎಷ್ಟು ಪ್ರಸ್ತುತ ಎಂಬುದನ್ನು ಮತ್ತು ಅವುಗಳ ಮಹತ್ವವನ್ನು ಪ್ರಚುರಪಡಿಸುವುದು ಮತ್ತು ಸಂಗೀತ ಮತ್ತು ಪ್ರದರ್ಶಕ ಕಲೆಗಳ ಶ್ರೀಮಂತ ಸಂಪ್ರದಾಯ ಮತ್ತು ಪರಂಪರೆಯನ್ನು ಬಲಪಡಿಸುವುದು;

(9) ಸಂಗೀತ ಮತ್ತು ಪ್ರದರ್ಶಕ ಕಲೆಗಳ ಹಾಗೂ ಅವುಗಳ ಸಂಪ್ರದಾಯವನ್ನು ಕುರಿತ ವಸ್ತು ಸಂಗ್ರಹಾಲಯ, ಪತ್ರಾಗಾರ ಹಾಗೂ ಗ್ರಂಥಾಲಯಗಳನ್ನು ಸ್ಥಾಪಿಸುವುದು;

(10) ಸಂಗೀತ ಮತ್ತು ಪ್ರದರ್ಶಕ ಕಲೆಗಳನ್ನು ಕುರಿತು ದೊರಕುವ ಇಡೀ ಹಸ್ತಪ್ರತಿ ಭಂಡಾರ ಹಾಗೂ ಸಂಗೀತ ಗ್ರಂಥಗಳನ್ನು ಕಂಪ್ಯೂಟರ್‌ಗೆ ಅಳವಡಿಸಿ ಡಿಜಿಟಲ್ ರೂಪದಲ್ಲಿ ಸಂಗ್ರಹಿಸುವುದು ಮತ್ತು ಉನ್ನತ ಗುಣಮಟ್ಟದ ಸಂಶೋಧನಾ ಜರ್ನಲ್‌ಗಳನ್ನು ವಿಶ್ವವಿದ್ಯಾಲಯ ಮತ್ತು ಅದರ ವಿವಿಧ ಇಲಾಖೆಗಳ ಮೂಲಕ ಹೊರತರುವುದು;

(11) ಸಂಗೀತ ಮತ್ತು ಪ್ರದರ್ಶಕ ಕಲೆಗಳ ಕಚೇರಿಗಳನ್ನು ಹಾಗೂ ಪ್ರದರ್ಶನವನ್ನು ಚಿತ್ರೀಕರಿಸಿ ರೆಕಾರ್ಡ್ ಮಾಡುವುದಕ್ಕಾಗಿ ಹಾಗೂ ಫೋಟೋಗಳನ್ನು ತೆಗೆಯುವುದಕ್ಕಾಗಿ ಧ್ವನಿ ದೃಶ್ಯ ಮುದ್ರಣ ಹಾಗೂ ಛಾಯಾಚಿತ್ರ ತೆಗೆಯುವ ಅನುಕೂಲಗಳನ್ನುಳ್ಳ ಅತ್ಯಾಧುನಿಕ ತಂತ್ರಜ್ಞಾನದ ಸ್ಟುಡಿಯೋ ಒಂದನ್ನು ಸ್ಥಾಪಿಸುವುದು;

(12) ಪ್ರಾಚೀನ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಪರಂಪರೆಗಳಲ್ಲಿ ಇರುವ ಸಂದೇಶವನ್ನು ಕುರಿತು ಜಾಗೃತಿ ಹಾಗೂ ಜ್ಞಾನ ಪ್ರಸಾರವನ್ನು ಉತ್ತೇಜಿಸುವ ದೃಷ್ಟಿಯಿಂದ ಸಂಗೀತ ಕಚೇರಿಗಳು, ಪ್ರದರ್ಶಕ ಕಲೆಗಳ ಕಾರ್ಯಕ್ರಮಗಳು, ವಿಚಾರಗೋಷ್ಠಿಗಳು, ಕಾರ್ಯಾಗಾರಗಳು, ಸಮ್ಮೇಳನಗಳು ಹಾಗೂ ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸುವುದು.

(13) (ಎ) ಎಲ್ಲಾ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಪ್ರಕಾರಗಳಿಗೆ ದಾರಿಮಾಡಿಕೊಂಡುವಂಥ ಪೂರಕ ಶಿಕ್ಷಣವನ್ನು ನೀಡುವ ನಿರ್ದೇಶನಾಲಯಗಳನ್ನು ಸ್ಥಾಪಿಸುವುದು.

(ಬಿ) ದೂರ ಶಿಕ್ಷಣ ಮತ್ತು ಆನ್‌ಲೈನ್ ಶಿಕ್ಷಣ ವ್ಯವಸ್ಥೆಯನ್ನು ಸ್ಥಾಪಿಸುವುದು

(ಸಿ) ಸಂಗೀತ ಮತ್ತು ಪ್ರದರ್ಶಕ ಕಲೆಗಳಿಗೆ ಸಂಬಂಧಪಟ್ಟ ಪುಸ್ತಕಗಳನ್ನು ಮತ್ತು ಕೃತಿಗಳನ್ನು ಪ್ರಕಟಿಸಲು ಒಂದು ಪ್ರಸಾರಾಂಗವನ್ನು ಸ್ಥಾಪಿಸುವುದು.

(14) ಪ್ರೌಢ ಸಂಶೋಧನೆಗಳನ್ನು ನಡೆಸುವುದಕ್ಕಾಗಿ ಮತ್ತು ಸಮಾಜದ ಎಲ್ಲಾ ವರ್ಗಗಳಿಗಾಗಿ ಹವ್ಯಾಸ ತರಗತಿಗಳನ್ನು ನಡೆಸಲು ವಿವಿಧ ವಿದ್ಯಾ ವಿಷಯಗಳಲ್ಲಿ "ಅಧ್ಯಯನ ಪೀಠ"ಗಳನ್ನು ಸ್ಥಾಪಿಸುವುದು;

(15) ಸಂಗೀತ ಮತ್ತು ಪ್ರದರ್ಶಕ ಕಲೆಗಳ ಬಗ್ಗೆ ಜಾಗೃತಿ ಮೂಡಿಸಲು, ಆಸಕ್ತಿ ಬೆಳೆಸಲು ಮತ್ತು ಅದನ್ನು ಜನಪ್ರಿಯಗೊಳಿಸಲು ಸಂಗೀತ ಮತ್ತು ಪ್ರದರ್ಶಕ ಕಲೆಗಳ ಯಾತ್ರೆ ನಡೆಸುವುದು;

(16) ಆರೋಗ್ಯ ಹಾಗೂ ವೈದ್ಯಕೀಯ ಸಂಬಂಧಿ ಖಾಯಿಲೆಗಳಿಗೆ ಚಿಕಿತ್ಸೆಯಾಗಿ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಸಾಧ್ಯತೆಯನ್ನು ಕುರಿತು ಪ್ರಯೋಗಗಳನ್ನು ನಡೆಸುವುದು;

(17) ವಿಶ್ವವಿದ್ಯಾಲಯದ ಮೇಲ್ಕಂಡ ಧ್ಯೇಯೋದ್ದೇಶಗಳಿಗೆ ಅಗತ್ಯವಾಗಬಹುದಾದ ಮೇಲ್ಕಂಡ ಅಧಿಕಾರಗಳಿಗೆ ಅವು ಪ್ರಾಸಂಗಿಕವಾಗಿರಲಿ ಇಲ್ಲದಿರಲಿ ಯಾವುದೇ ಕಾರ್ಯಗಳನ್ನು ಮತ್ತಿತರ ಚಟುವಟಿಕೆಗಳನ್ನು ಕೈಗೊಳ್ಳುವುದು;

(18) ಒಂದೇ ಬಗೆಯ ಧ್ಯೇಯೋದ್ದೇಶವುಳ್ಳ ಎಲ್ಲಾ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳು ಮಾಡಿದ ಪ್ರಯತ್ನಗಳ ಕೂಡುಬಲವನ್ನು ಅಭಿವೃದ್ಧಿಪಡಿಸುವ ದೃಷ್ಟಿಯಿಂದ ಪರಸ್ಪರ ವ್ಯವಸ್ಥೆಗಳು ಮತ್ತು ಸಂವಾದ ಸಂಪರ್ಕ ಸೌಕರ್ಯಗಳೊಂದಿಗೆ ಅಂಥ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿದ್ಯಾಸಂಸ್ಥೆಗಳ ಮತ್ತು ಶೈಕ್ಷಣಿಕ ಹಾಗೂ ಸಂಶೋಧನಾ ಅಭಿಮುಖ ಸಂಸ್ಥೆಗಳ ಒಂದು ಜಾಲವನ್ನು ರಚಿಸುವುದು;

(19) ಶಾಸನಗಳ ಮೂಲಕ ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಘೋಷಿಸಲಾದಂಥ ನಿಕಾಯಗಳನ್ನು ನಿರ್ವಹಿಸಿಕೊಂಡು ಬರುವುದು.

(20) ವಿಶ್ವವಿದ್ಯಾಲಯದಲ್ಲಿ ಅಂತರ ವ್ಯಾಸಂಗ ವಿಷಯಗಳ ಅಧ್ಯಯನ ಮತ್ತು ಸಂಶೋಧನೆಯನ್ನು ಉತ್ತೇಜಿಸಲು ಮತ್ತು ಅಂಥವೇ ಇತರ ಸಂಬಂಧಪಟ್ಟ ಚಟುವಟಿಕೆಗಳನ್ನು ವಿಶ್ವವಿದ್ಯಾಲಯದ ಮಟ್ಟದಲ್ಲಿ ಸೌಹಾರ್ದರೀತಿಯಲ್ಲಿ ನಡೆಸುಕೊಂಡು ಬರಲು ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವುದು;

(21) ಗುರುಕುಲ ಪದ್ಧತಿಯಲ್ಲಿ ಮತ್ತು ಆಧುನಿಕ (ಸಮಕಾಲೀನ ಶೈಕ್ಷಣಿಕ) ಪದ್ಧತಿಯಲ್ಲಿ ಸಂಗೀತ ಮತ್ತು ಪ್ರದರ್ಶಕ ಕಲೆಗಳನ್ನು ಬೋಧಿಸುವುದು. ಗುರುಕುಲ ಪದ್ಧತಿಯಲ್ಲಿ ಖ್ಯಾತ ಸಂಗೀತ ಪಂಡಿತರು ಹಾಗೂ ಮಹಾನ್ ವಿದ್ವಾಂಸರು ಬೋಧಕ ವೃಂದದಲ್ಲಿರುತ್ತಾರೆ.

5. **ವಿಶ್ವವಿದ್ಯಾಲಯದ ಅಧಿಕಾರಗಳು.–** ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:–

(1) ಪದವಿಗಳು, ಡಿಪ್ಲೊಮಾ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರಾರಂಭಿಸುವುದು.

(2) ವಿಶ್ವವಿದ್ಯಾಲಯದಲ್ಲಿ ಅಥವಾ ನಿಯಮಿಸಲಾದ ಷರತ್ತುಗಳ ಮೇರೆಗೆ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಇತರ ಯಾವುದೇ ಸಂಸ್ಥೆ ಅಥವಾ ಕೇಂದ್ರದಲ್ಲಿ ಸಂಶೋಧನೆಯನ್ನು ಪೂರೈಸಿದ ವ್ಯಕ್ತಿಗಳಿಗೆ ಧರ್ಮ, ಪಂಥ, ಜಾತಿ, ಲಿಂಗ, ವರ್ಗ ಅಥವಾ ಇವುಗಳಲ್ಲಿ ಯಾವುದನ್ನೂ ಗಣಿಸದೆ ಪದವಿಗಳು, ಡಿಪ್ಲೋಮಾ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಯನ್ನು ಪ್ರದಾನ ಮಾಡುವುದು;

**ವಿವರಣೆ:–** ಈ ಖಂಡ ಮತ್ತು ಈ ಅಧಿನಿಯಮದ ಇತರ ಉಪಬಂಧಗಳ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ಸಂಸ್ಥೆ ಅಥವಾ ಕೇಂದ್ರ ಎಂದರೆ, ಸಂಬಂಧಪಟ್ಟ ಪ್ರಾಧಿಕಾರಗಳಿಂದ ಪೂರ್ವಾನುಮೋದನೆ ಪಡೆದ ತರುವಾಯ ವಿಶ್ವವಿದ್ಯಾಲಯದ ಉದ್ದೇಶಗಳನ್ನು ಈಡೇರಿಸುವ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ, ಭಾರತದಲ್ಲಿರುವ ಅಥವಾ ಇತರ ದೇಶಗಳಲ್ಲಿರುವ ಒಂದು ಸಂಸ್ಥೆ ಅಥವಾ ಒಂದು ಕೇಂದ್ರ;

(3) ನಿಯಮಿಸಲಾದ ರೀತಿಯಲ್ಲಿ ಮತ್ತು ನಿಯಮಿಸಲಾದ ಷರತ್ತುಗಳ ಮೇರೆಗೆ ಗೌರವ ಪದವಿಗಳು ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(4) ವಿದ್ಯಾರ್ಥಿ ನಿಲಯಗಳ ಮೇಲ್ವಿಚಾರಣೆ ನಡೆಸುವುದು ಮತ್ತು ನಿಯಂತ್ರಿಸುವುದು ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಲ್ಲಿ ಶಿಸ್ತು ಮೂಡುವಂತೆ ಮಾಡುವುದು ಮತ್ತು ಅವರ ಆರೋಗ್ಯ ಮತ್ತು ಸಾಮಾನ್ಯ ಕ್ಷೇಮಾಭಿವೃದ್ಧಿಗೆ ಉತ್ತೇಜನ ನೀಡಲು ವ್ಯವಸ್ಥೆಗಳನ್ನು ಮಾಡುವುದು;

(5) ವ್ಯಕ್ತಿಗಳಿಗೆ ನೀಡುವ ಯಾವುದೇ ಪದವಿ, ಡಿಪ್ಲೊಮಾ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ತಡೆಹಿಡಿಯಬಹುದಾದ ಷರತ್ತುಗಳನ್ನು ನಿಯಮಿಸುವುದು.

(6) ಕಾಲಕಾಲಕ್ಕೆ ನಿಯಮಿಸಬಹುದಾದಂಥ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ, ವಿಶ್ವವಿದ್ಯಾಲಯವು ಹೊಂದಿರುವಂಥವೇ ಉದ್ದೇಶಗಳು ಮತ್ತು ಗುರಿಗಳ ಉತ್ತೇಜನೆಯನ್ನು ದೃಷ್ಟಿಯಲ್ಲಿರಿಸಿಕೊಂಡಿರುವ ಇತರ ಯಾವುದೇ ವಿಶ್ವವಿದ್ಯಾಲಯ, ಪ್ರಾಧಿಕಾರ ಅಥವಾ ಸಂಘ ಅಥವಾ ಸಾರ್ವಜನಿಕ ಅಥವಾ ಖಾಸಗಿ ನಿಕಾಯದೊಂದಿಗೆ ಸಹಕರಿಸುವುದು;

(7) ಸಂಶೋಧನೆ ಮತ್ತು ಪ್ರಸಾರಾಂಗದ ಸಲುವಾಗಿ ವಿಶ್ವವಿದ್ಯಾಲಯದ ಗ್ರಂಥಾಲಯಗಳು, ಸಂಶೋಧನಾ ಕೇಂದ್ರಗಳು, ಸಂಗ್ರಹಾಲಯಗಳನ್ನು ಸ್ಥಾಪಿಸುವುದು ಮತ್ತು ನಿರ್ವಹಿಸುವುದು;

(8) ಸಂಶೋಧನಾ ಹುದ್ದೆಗಳನ್ನು ಸೃಜಿಸುವುದು ಮತ್ತು ಅಂಥ ಹುದ್ದೆಗಳಿಗೆ ವ್ಯಕ್ತಿಗಳನ್ನು ನೇಮಿಸುವುದು;

(9) ನಿಯಮಿಸಲಾದ ರೀತಿಯಲ್ಲಿ ಪ್ರವಾಸೀ ಸಂಶೋಧನಾ ವೇತನಗಳು, ವಿದ್ಯಾರ್ಥಿ ವೇತನಗಳು, ಪದಕಗಳು ಮತ್ತು ಬಹುಮಾನಗಳೂ ಸೇರಿದಂತೆ ಸಂಶೋಧನಾ ವೇತನಗಳನ್ನು ಪ್ರಾರಂಭಿಸುವುದು ಮತ್ತು ಅವುಗಳನ್ನು ನೀಡುವುದು;

(10) ಅನುದಾನ, ಮರಣಶಾಸನ, ದಾನ ಅಥವಾ ಅನ್ಯಥಾ ಮೂಲತ: ವಿಶ್ವವಿದ್ಯಾಲಯದಲ್ಲಿ ನಿಹಿತವಾಗಿರಬಹುದಾದ ಯಾವುದೇ ದತ್ತಿಗಳು, ದೇಣಿಗೆಗಳು ಅಥವಾ ನಿಧಿಗಳನ್ನು ಒಪ್ಪಿಕೊಳ್ಳುವುದು, ಪಡೆಯುವುದು ಮತ್ತು ನಿರ್ವಹಿಸುವುದು ಮತ್ತು ಅದು ಸೂಕ್ತವೆಂದು ಭಾವಿಸಬಹುದಾದಂಥ ರೀತಿಯಲ್ಲಿ ಅಂಥ ದತ್ತಿಗಳು, ದೇಣಿಗೆಗಳು ಅಥವಾ ನಿಧಿಗಳನ್ನು ತೊಡಗಿಸಬಹುದು:

ಪರಂತು, ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದ ಹೊರತು, ವಿಶ್ವವಿದ್ಯಾಲಯವು ವಿದೇಶದಿಂದ, ವಿದೇಶಿ ಪ್ರತಿಷ್ಠಾನಗಳು ಮತ್ತು ಅಂಥ ದೇಶದ ಯಾವುದೇ ವ್ಯಕ್ತಿಯಿಂದ ವಂತಿಗೆಗಳನ್ನು ಸ್ವೀಕರಿಸತಕ್ಕದ್ದಲ್ಲ.

(11) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗಾಗಿ ವಿದ್ಯಾರ್ಥಿನಿಲಯಗಳನ್ನು ಮತ್ತು ವಿಶ್ವವಿದ್ಯಾಲಯದ ಸಿಬ್ಬಂದಿಗಾಗಿ ವಸತಿಗಳನ್ನು ಸ್ಥಾಪಿಸುವುದು, ನಿರ್ವಹಿಸುವುದು ಅಥವಾ ಮಾನ್ಯತೆ ನೀಡುವುದು ಮತ್ತು ಅಂಥ ಯಾವುವೇ ಮಾನ್ಯತೆಗಳನ್ನು ಹಿಂತೆಗೆದುಕೊಳ್ಳುವುದು;

(12) ನಿಯಮಿಸಬಹುದಾದಂತೆ ಶುಲ್ಕವನ್ನು ನಿಗದಿಪಡಿಸುವುದು ಮತ್ತು ಅಂಥ ಶುಲ್ಕವನ್ನು ಕೇಳುವುದು ಹಾಗೂ ಸ್ವೀಕರಿಸುವುದು;

(13) ವಿಶ್ವವಿದ್ಯಾಲಯದ ದತ್ತಿಗಳು ಮತ್ತು ಇತರ ಸ್ವತ್ತುಗಳು ಹಾಗೂ ನಿಧಿಗಳನ್ನು ಧಾರಣ ಮಾಡುವುದು ಮತ್ತು ನಿರ್ವಹಿಸುವುದು;

(14) ಸರ್ಕಾರದ ಅನುಮೋದನೆಯೊಂದಿಗೆ ವಿಶ್ವವಿದ್ಯಾಲಯದ ಉದ್ದೇಶಗಳಿಗಾಗಿ ವಿಶ್ವವಿದ್ಯಾಲಯದ ಸ್ವತ್ತಿನ ಭದ್ರತೆಯ ಮೇಲೆ ಹಣವನ್ನು ಸಾಲ ಪಡೆಯುವುದು; ಮತ್ತು

(15) ವಿಶ್ವವಿದ್ಯಾಲಯದ ಗುರಿಗಳನ್ನು ಉತ್ತೇಜಿಸುವ ಉದ್ದೇಶಕ್ಕಾಗಿ, ವಿಶ್ವವಿದ್ಯಾಲಯದ ಅಡಿಯಲ್ಲಿ ಬರುವ ಯಾವುದೇ ಸಂಸ್ಥೆಯ ವ್ಯವಸ್ಥಾಪನೆಯನ್ನು ವಹಿಸಿಕೊಳ್ಳುವುದು ಮತ್ತು ಅದರ ಎಲ್ಲ ಹಕ್ಕುಗಳು ಮತ್ತು ದಾಯಿತ್ವಗಳನ್ನು ವಶಕ್ಕೆ ತೆಗೆದುಕೊಳ್ಳುವುದೂ ಸೇರಿದಂತೆ ಇತರ ನಿಕಾಯಗಳು ಅಥವಾ ವ್ಯಕ್ತಿಗಳೊಂದಿಗೆ ಕರಾರು ಮಾಡಿಕೊಳ್ಳುವುದು.

**6. ವಿಶ್ವವಿದ್ಯಾಲಯಕ್ಕೆ ಪ್ರವೇಶ.**- (1) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳಿಗೆ ಒಳಪಟ್ಟು ವಿಶ್ವವಿದ್ಯಾಲಯಕ್ಕೆ ಎಲ್ಲ ವ್ಯಕ್ತಿಗಳಿಗೂ ಮುಕ್ತ ಪ್ರವೇಶವಿರತಕ್ಕದ್ದು.

(2) (1)ನೇ ಉಪ-ಪ್ರಕರಣದಲ್ಲಿರುವುದಾವುದೂ,-

(ಎ) ನಿಯಮಿಸಲಾದ ಶೈಕ್ಷಣಿಕ ವಿದ್ಯಾರ್ಹತೆಯನ್ನು ಅಥವಾ ಗುಣಮಟ್ಟವನ್ನು ಹೊಂದಿರದ ಯಾವೊಬ್ಬ ವ್ಯಕ್ತಿಗೆ ಯಾವುದೇ ಅಧ್ಯಯನ ಕ್ರಮಕ್ಕೆ ಪ್ರವೇಶ ನೀಡಲು;

(ಬಿ) ಪದವಿ, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಯನ್ನು ನೀಡಲು ಅಗತ್ಯವಿರುವ ಕನಿಷ್ಠ ಮಟ್ಟಕ್ಕಿಂತ ಕಡಿಮೆಯಾದ ಶೈಕ್ಷಣಿಕ ಪ್ರಗತಿಯನ್ನು ತೋರಿಸುವ ಯಾವೊಬ್ಬ ವಿದ್ಯಾರ್ಥಿಯನ್ನು ವಿಶ್ವವಿದ್ಯಾಲಯದ ಹಾಜರಿಪಟ್ಟಿಯಲ್ಲಿ ಉಳಿಸಿಕೊಳ್ಳಲು; ಅಥವಾ

(ಸಿ) ವಿಶ್ವವಿದ್ಯಾಲಯದ ಹಿತಾಸಕ್ತಿಗೆ ಅಥವಾ ಇತರ ವಿದ್ಯಾರ್ಥಿಗಳು ಮತ್ತು ಬೋಧಕರ ಹಕ್ಕುಗಳು ಮತ್ತು ವಿಶೇಷಾಧಿಕಾರಗಳಿಗೆ ಪ್ರತಿಕೂಲವಾದ ನಡತೆಯುಳ್ಳ ಯಾವೊಬ್ಬ ವ್ಯಕ್ತಿಗೆ ಪ್ರವೇಶ ನೀಡಲು ಅಥವಾ ಯಾವೊಬ್ಬ ವಿದ್ಯಾರ್ಥಿಯನ್ನು ಉಳಿಸಿಕೊಳ್ಳಲು;

-ವಿಶ್ವವಿದ್ಯಾಲಯವನ್ನು ಅಗತ್ಯಪಡಿಸತಕ್ಕದ್ದಲ್ಲ.

**7. ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿ.-** ವಿಶ್ವವಿದ್ಯಾಲಯದ ಅಧಿಕಾರ ವ್ಯಾಪ್ತಿಯು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪಿಸತಕ್ಕದ್ದು.

**8. ಪರಿಶೀಲನೆ.-** (1) ಕುಲಾಧಿಪತಿಯವರು, ತಾವು ನಿರ್ದೇಶಿಸಬಹುದಾದಂಥ ವ್ಯಕ್ತಿ ಅಥವಾ ವ್ಯಕ್ತಿಗಳಿಂದ, ವಿಶ್ವವಿದ್ಯಾಲಯ, ಅದರ ಕಟ್ಟಡಗಳು, ವಿಶ್ವವಿದ್ಯಾಲಯದ ಗ್ರಂಥಾಲಯಗಳು, ಸಂಗ್ರಹಾಲಯಗಳು ಮತ್ತು ಉಪಕರಣಗಳು ಮತ್ತು ವಿಶ್ವವಿದ್ಯಾಲಯದಿಂದ ನಿರ್ವಹಿಸಲಾದ ಅಥವಾ ಮಾನ್ಯತೆ ಪಡೆದ ಯಾವುವೇ ಸಂಸ್ಥೆಗಳು ಮತ್ತು ವಿಶ್ವವಿದ್ಯಾಲಯದಿಂದ ನಡೆಸಲಾದ ಅಥವಾ ಮಾಡಲಾದ ಸಂಶೋಧನೆ, ಬೋಧನೆ ಮತ್ತು ಇತರ ಕೆಲಸದ ಪರಿಶೀಲನೆ ನಡೆಸುವಂತೆ ಮಾಡಲು ಅಥವಾ ವಿಚಾರಣೆ ಮಾಡುವಂತೆ ಮಾಡಲು ಹಕ್ಕು ಹೊಂದಿರತಕ್ಕದ್ದು ಹಾಗೂ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಯಾವುದೇ ವಿಷಯದ ಬಗ್ಗೆ ವಿಚಾರಣೆ ನಡೆಸುವಂತೆ ಮಾಡತಕ್ಕದ್ದು. ಕುಲಾಧಿಪತಿಯವರು, ಪ್ರತಿಯೊಂದು ಸಂದರ್ಭದಲ್ಲೂ ಅಂಥ ಪರಿಶೀಲನೆ ಅಥವಾ ವಿಚಾರಣೆ ನಡೆಸುವ ತಮ್ಮ ಆಶಯದ ಬಗ್ಗೆ ವಿಶ್ವವಿದ್ಯಾಲಯಕ್ಕೆ ನೋಟೀಸು ನೀಡತಕ್ಕದ್ದು ಮತ್ತು ವಿಶ್ವವಿದ್ಯಾಲಯವು ಅಲ್ಲಿ ಪ್ರಾತಿನಿಧ್ಯ ಪಡೆಯಲು ಹಕ್ಕುಳ್ಳದ್ದಾಗಿರತಕ್ಕದ್ದು.

(2) ಕುಲಾಧಿಪತಿಯವರು, ಅಂಥ ಪರಿಶೀಲನೆ ಅಥವಾ ವಿಚಾರಣೆಯ ಪರಿಣಾಮಗಳ ಸಂಬಂಧದಲ್ಲಿ ತಮ್ಮ ಅಭಿಪ್ರಾಯಗಳನ್ನು ಪ್ರಶಾಸನ ಸಭೆಗೆ ತಿಳಿಸತಕ್ಕದ್ದು ಮತ್ತು ಅದರ ಮೇಲಣ ಪ್ರಶಾಸನ ಸಭೆಯ ಅಭಿಪ್ರಾಯವನ್ನು ಖಚಿತಪಡಿಸಿಕೊಂಡ ತರುವಾಯ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ವಿಶ್ವವಿದ್ಯಾಲಯಕ್ಕೆ ಸಲಹೆ ನೀಡತಕ್ಕದ್ದು ಮತ್ತು ಅಂಥ ಕ್ರಮವನ್ನು ಕೈಗೊಳ್ಳುವುದಕ್ಕೆ ಕಾಲಮಿತಿಯನ್ನು ನಿಗದಿಪಡಿಸಬಹುದು.

(3) ಪ್ರಶಾಸನ ಸಭೆಯು ಅಂಥ ಪರಿಶೀಲನೆ ಅಥವಾ ವಿಚಾರಣೆಯ ಫಲಿತಾಂಶಗಳ ಬಗ್ಗೆ ತಾನು ತೆಗೆದುಕೊಳ್ಳಬೇಕೆಂದು ಉದ್ದೇಶಿಸಲಾದ ಅಥವಾ ತೆಗೆದುಕೊಳ್ಳಲಾದ ಕ್ರಮ, ಯಾವುದಾದರೂ ಇದ್ದಲ್ಲಿ, ಆ ಬಗ್ಗೆ ಕುಲಾಧಿಪತಿಯವರಿಗೆ ವರದಿ ಸಲ್ಲಿಸತಕ್ಕದ್ದು. ಅಂಥ ವರದಿಯನ್ನು ಕುಲಾಧಿಪತಿಯವರು ನಿರ್ದೇಶಿಸಬಹುದಾದಂಥ ಕಾಲದೊಳಗೆ ಸಲ್ಲಿಸತಕ್ಕದ್ದು.

(4) ಪ್ರಶಾಸನ ಸಭೆಯು, (2)ನೇ ಉಪ-ಪ್ರಕರಣದ ಅಡಿಯಲ್ಲಿ ನಿಗದಿಪಡಿಸಬಹುದಾದ ಕಾಲಮಿತಿಯೊಳಗೆ ಕುಲಾಧಿಪತಿಯವರಿಗೆ ಸಮಾಧಾನವಾಗುವಂತೆ ಕ್ರಮಕೈಗೊಳ್ಳದಿರುವಲ್ಲಿ, ಕುಲಾಧಿಪತಿಯವರು, ಪ್ರಶಾಸನ ಸಭೆಯು ಸಲ್ಲಿಸಿದ ವಿವರಣೆ ಅಥವಾ ಮಾಡಿಕೊಂಡ ಮನವಿಯನ್ನು ಪರಿಗಣಿಸಿದ ತರುವಾಯ, ತಾವು ಉಚಿತವೆಂದು ಭಾವಿಸಬಹುದಾದಂಥ ನಿರ್ದೇಶನಗಳನ್ನು ಹೊರಡಿಸಬಹುದು ಮತ್ತು ಪ್ರಶಾಸನ ಸಭೆಯು ಅಂಥ ನಿರ್ದೇಶನಗಳನ್ನು ಪಾಲಿಸತಕ್ಕದ್ದು. ಪ್ರಶಾಸನ ಸಭೆಯು, ಕುಲಾಧಿಪತಿಯವರು ಆ ಬಗ್ಗೆ ನಿಗದಿಪಡಿಸಿದ ಅಂಥ ಕಾಲದೊಳಗಾಗಿ ಅಂಥ ನಿರ್ದೇಶನಗಳನ್ನು ಪಾಲಿಸದಿದ್ದ ಪಕ್ಷದಲ್ಲಿ, ಕುಲಾಧಿಪತಿಯವರು, ಅಂಥ

ನಿರ್ದೇಶನಗಳನ್ನು ಪಾಲಿಸುವುದಕ್ಕಾಗಿ ಯಾವೊಬ್ಬ ವ್ಯಕ್ತಿ ಅಥವಾ ನಿಕಾಯವನ್ನು ನೇಮಿಸಲು ಅಧಿಕಾರವನ್ನು ಹೊಂದಿರತಕ್ಕದ್ದು ಮತ್ತು ಆ ಬಗೆಗಿನ ವೆಚ್ಚಗಳಿಗಾಗಿ ಅವಶ್ಯಕವಾಗಬಹುದಾದ ಅಂಥ ಆದೇಶಗಳನ್ನು ಹೊರಡಿಸಬಹುದು.

(5) ರಾಜ್ಯ ಸರ್ಕಾರವು, ರಾಜ್ಯಪತ್ರದಲ್ಲಿ ಆದೇಶವನ್ನು ಪ್ರಕಟಿಸುವ ಮೂಲಕ ವಿಶ್ವವಿದ್ಯಾಲಯದ ಯಾವುದೇ ಆದೇಶ, ಅಧಿಸೂಚನೆ, ನಿರ್ಣಯ ಅಥವಾ ಯಾವುದೇ ವ್ಯವಹರಣೆಗಳು ಈ ಅಧಿನಿಯಮದ ಅಥವಾ ಶಾಸನಗಳು, ವಿನಿಯಮಗಳು ಅಥವಾ ಅಧ್ಯಾದೇಶಗಳ ಉಪಬಂಧಗಳಿಗೆ ಅನುಸಾರವಾಗಿ ಇಲ್ಲವೆಂದು ಅಥವಾ ಅನ್ಯಥಾ ರಾಜ್ಯ ಸರ್ಕಾರದ ನೀತಿಗಳಿಗೆ ಅಸಂಗತವಾಗಿವೆ ಎಂದು ಅಭಿಪ್ರಾಯ ಪಟ್ಟಲ್ಲಿ ಅವುಗಳನ್ನು ರದ್ದುಗೊಳಿಸಬಹುದು:

ಪರಂತು, ಅಂಥ ಯಾವುದೇ ಆದೇಶವನ್ನು ಮಾಡುವುದಕ್ಕೆ ಮೊದಲು ರಾಜ್ಯ ಸರ್ಕಾರವು ವಿಶ್ವವಿದ್ಯಾಲಯಕ್ಕೆ ತನ್ನ ಅಹವಾಲು ಹೇಳಿಕೊಳ್ಳಲು ಒಂದು ಅವಕಾಶವನ್ನು ನೀಡತಕ್ಕದ್ದು.

(6) (1)ನೇ ಉಪಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶವನ್ನು ಅದನ್ನು ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಮಂಡಿಸತಕ್ಕದು.

## ಅಧ್ಯಾಯ – III
## ವಿಶ್ವವಿದ್ಯಾಲಯದ ಅಧಿಕಾರಿಗಳು

**9. ವಿಶ್ವವಿದ್ಯಾಲಯದ ಅಧಿಕಾರಿಗಳು.–** ವಿಶ್ವವಿದ್ಯಾಲಯವು ಈ ಮುಂದಿನ ಅಧಿಕಾರಿಗಳನ್ನು ಒಳಗೊಂಡಿರತಕ್ಕದ್ದು, ಎಂದರೆ:–

(1) ಕುಲಾಧಿಪತಿಯವರು,

(2) ಸಹಕುಲಾಧಿಪತಿಯವರು,

(3) ಕುಲಪತಿಯವರು,

(4) ಫ್ಯಾಕಲ್ಟಿಗಳ ಡೀನ್‌ರವರು,

(5) ಕುಲಸಚಿವರು,

(6) ಹಣಕಾಸು ಅಧಿಕಾರಿ ಮತ್ತು

(7) ವಿಶ್ವವಿದ್ಯಾಲಯದ ಅಧಿಕಾರಿಗಳೆಂದು ಶಾಸನಗಳಿಂದ ಘೋಷಿತರಾಗಬಹುದಾದಂಥ ಇತರ ವ್ಯಕ್ತಿಗಳು.

**10. ಕುಲಾಧಿಪತಿಯವರು.–** (1) ಕರ್ನಾಟಕದ ರಾಜ್ಯಪಾಲರು ಈ ವಿಶ್ವವಿದ್ಯಾಲಯದ ಕುಲಾಧಿಪತಿಯಾಗಿರತಕ್ಕದ್ದು, ಅವರು ತಮ್ಮ ಪದದ ಆಧಾರದಿಂದ ವಿಶ್ವವಿದ್ಯಾಲಯದ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಅವರು ಹಾಜರಿದ್ದಾಗ, ವಿಶ್ವವಿದ್ಯಾಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷರಾಗಿರತಕ್ಕದ್ದು ಮತ್ತು ಪದವಿಗಳು, ಡಿಪ್ಲೋಮ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಅವುಗಳನ್ನು ಸ್ವೀಕರಿಸಲು ಹಕ್ಕುಳ್ಳ ವ್ಯಕ್ತಿಗಳಿಗೆ ಪ್ರದಾನ ಮಾಡತಕ್ಕದ್ದು.

(2) ಪ್ರಾಧಿಕಾರಗಳಿಗೆ ವ್ಯಕ್ತಿಗಳನ್ನು ನಾಮನಿರ್ದೇಶನ ಮಾಡಲು ಕುಲಾಧಿಪತಿಯವರಿಗೆ ಅಧಿಕಾರವನ್ನು ಪ್ರದತ್ತಗೊಳಿಸಿರುವಲ್ಲಿ, ಕುಲಾಧಿಪತಿಯವರು ಸಾಕಷ್ಟು ಪ್ರಾತಿನಿಧ್ಯ ಪಡೆಯದ ಹಿತಾಸಕ್ತಿಗಳನ್ನು ಪ್ರತಿನಿಧಿಸಲು ಅವಶ್ಯಕವಿರುವಷ್ಟರಮಟ್ಟಿಗೆ ವ್ಯಕ್ತಿಗಳನ್ನು ನಾಮನಿರ್ದೇಶಿಸತಕ್ಕದ್ದು.

(3) ಕುಲಾಧಿಪತಿಯವರು ಸ್ವತಃ ತಾವೇ ಆಗಲಿ ಅಥವಾ ಅರ್ಜಿಯ ಮೇಲೆ ಆಗಲಿ ಯಾವುವೇ ವ್ಯವಹರಣೆಗಳ ಸಂಬಂಧದಲ್ಲಿ ಅಂಥ ವ್ಯವಹರಣೆಗಳ ಸಕ್ರಮತೆ ಅಥವಾ ಯಥಾರ್ಥತೆ, ಕೈಗೊಳ್ಳಲಾದ ಯಾವುದೇ ತೀರ್ಮಾನ ಅಥವಾ ಅದರಲ್ಲಿ ಜಾರಿ ಮಾಡಲಾದ ಆದೇಶದ ಕಾನೂನು ಸಮ್ಮತತೆ ಅಥವಾ ಔಚಿತ್ಯದ ಬಗ್ಗೆ ತಾವೇ ಮನದಟ್ಟು ಮಾಡಿಕೊಳ್ಳಲು ವಿಶ್ವವಿದ್ಯಾನಿಲಯದ ಯಾವೊಬ್ಬ ಅಧಿಕಾರಿ ಅಥವಾ ಯಾವುದೇ ಪ್ರಾಧಿಕಾರದ ದಾಖಲೆಗಳನ್ನು ತರಿಸಿಕೊಂಡು ಪರೀಕ್ಷಿಸಬಹುದು ಮತ್ತು ಯಾವುದೇ ಸಂದರ್ಭದಲ್ಲಿ, ಕುಲಾಧಿಪತಿಯವರಿಗೆ, ಅಂಥ ಯಾವುದೇ ತೀರ್ಮಾನ ಅಥವಾ ಆದೇಶವನ್ನು ಮಾರ್ಪಾಟುಗೊಳಿಸಬೇಕು, ರದ್ದುಗೊಳಿಸಬೇಕು, ವಿಪರ್ಯಾಯಗೊಳಿಸಬೇಕು ಅಥವಾ ಪುನರ್ ಪರಿಶೀಲನೆಗಾಗಿ ಹಿಂದಕ್ಕೆ ಕಳುಹಿಸಬೇಕೆಂದು ತೋರಿದರೆ, ಅವರು ತದನುಸಾರವಾಗಿ ಆದೇಶಗಳನ್ನು ಜಾರಿ ಮಾಡಬಹುದು:

ಪರಂತು, ಈ ಪ್ರಕರಣದ ಅಡಿಯಲ್ಲಿ ಅಧಿಕಾರಗಳನ್ನು ಚಲಾಯಿಸುವುದಕ್ಕಾಗಿ, ಪ್ರತಿಯೊಂದು ಅರ್ಜಿಯನ್ನು, ಅರ್ಜಿಯ ಸಂಬಂಧದಲ್ಲಿನ ವ್ಯವಹರಣೆ, ತೀರ್ಮಾನ ಅಥವಾ ಆದೇಶವನ್ನು ಅರ್ಜಿದಾರನಿಗೆ ತಿಳಿಸಿದ ದಿನಾಂಕದಿಂದ ಮೂರು ತಿಂಗಳೊಳಗೆ ಕುಲಾಧಿಪತಿಯವರಿಗೆ ಸಲ್ಲಿಸತಕ್ಕದ್ದು:

ಮತ್ತು ಪರಂತು, ಯಾವೊಬ್ಬ ವ್ಯಕ್ತಿಗೆ ಪ್ರತಿಕೂಲವಾದ ಯಾವುದೇ ಆದೇಶವನ್ನು ಅಂಥ ವ್ಯಕ್ತಿಗೆ ತನ್ನ ಮನವಿಯನ್ನು ಸಲ್ಲಿಸಲು ಅವಕಾಶವನ್ನು ನೀಡಿದ್ದ ಹೊರತು, ಜಾರಿ ಮಾಡತಕ್ಕದ್ದಲ್ಲ.

(4) ಕುಲಾಧಿಪತಿಯವರು, ಈ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ತಮಗೆ ಪ್ರದತ್ತಗೊಳಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**11. ಸಹಕುಲಾಧಿಪತಿಯವರು.-** (1) ಕರ್ನಾಟಕ ರಾಜ್ಯದಲ್ಲಿ, ಉನ್ನತ ಶಿಕ್ಷಣ ಖಾತೆಯ ಪ್ರಭಾರ ಹೊಂದಿರುವ ಸಚಿವರು, ವಿಶ್ವವಿದ್ಯಾಲಯದ ಸಹಕುಲಾಧಿಪತಿಗಳಾಗಿರತಕ್ಕದ್ದು.

(2) ಸಹಕುಲಾಧಿಪತಿಯವರು, ಈ ಅಧಿನಿಯಮದಿಂದ ಅಥವಾ ಅದರ ಅಡಿಯಲ್ಲಿ ತಮಗೆ ಪ್ರದತ್ತವಾಗಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

**12. ಕುಲಪತಿ.-** (1) ಕುಲಪತಿಯು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು.

(2) ಸರ್ಕಾರವು ಮೂವರು ವ್ಯಕ್ತಿಗಳನ್ನೊಳಗೊಂಡ ಒಂದು ಶೋಧನಾ ಸಮಿತಿಯನ್ನು ರಚಿಸತಕ್ಕದ್ದು; ಅವರುಗಳ ಪೈಕಿ ಒಬ್ಬರು ಕುಲಾಧಿಪತಿಯವರಿಂದ ನಾಮ ನಿರ್ದೇಶಿತರಾಗಿರತಕ್ಕದ್ದು. ಒಬ್ಬರು ವಿಶ್ವವಿದ್ಯಾಲಯ ಧನ ಸಹಾಯ ಆಯೋಗದಿಂದ ನಾಮನಿರ್ದೇಶಿತರಾಗಿರತಕ್ಕದ್ದು ಹಾಗೂ ಒಬ್ಬರು ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾಗಿರತಕ್ಕದ್ದು. ರಾಜ್ಯ ಸರ್ಕಾರದಿಂದ ನಾಮನಿರ್ದೇಶಿತರಾದವರು ಸಮಿತಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸತಕ್ಕದ್ದು. ಉನ್ನತ ಶಿಕ್ಷಣ ಇಲಾಖೆಯ ಪ್ರಭಾರವನ್ನು ಹೊಂದಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ ಅವರ ನಾಮನಿರ್ದೇಶಿತರು ಶೋಧನಾ ಸಮಿತಿಯ ಸಂಚಾಲಕರಾಗಿರತಕ್ಕದ್ದು.

(3) ರಾಜ್ಯ ಸರ್ಕಾರದ, ವಿಶ್ವವಿದ್ಯಾಲಯದ ಅಥವಾ ವಿಶ್ವವಿದ್ಯಾಲಯಕ್ಕೆ ಸಂಯೋಜಿತವಾದ ಯಾವುದೇ ಕಾಲೇಜಿನ ಅಥವಾ ಸಂಸ್ಥೆಯ ವ್ಯವಹಾರಗಳೊಂದಿಗೆ ಸಂಬಂಧವಿರುವ ಯಾವ ವ್ಯಕ್ತಿಯನ್ನೂ ಶೋಧನಾ ಸಮಿತಿಯ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡತಕ್ಕದ್ದಲ್ಲ.

(4) ಶೋಧನಾ ಸಮಿತಿಯು, ಸಂಗೀತ ಅಥವಾ ಪ್ರದರ್ಶಕ ಕಲೆಗಳ ಕ್ಷೇತ್ರದಲ್ಲಿ ಖ್ಯಾತ ಶಿಕ್ಷಣ ತಜ್ಞರಾದ ಮೂರು ವ್ಯಕ್ತಿಗಳ ಹೆಸರನ್ನುಳ್ಳ ಒಂದು ಪಟ್ಟಿಯನ್ನು ಅಕಾರಾದಿ ಕ್ರಮದಲ್ಲಿ ರಾಜ್ಯಸರ್ಕಾರಕ್ಕೆ ಸಲ್ಲಿಸತಕ್ಕದ್ದು ಮತ್ತು ರಾಜ್ಯ ಸರ್ಕಾರವು ಆ ಪಟ್ಟಿಯನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು, ಅವರು ಅರ್ಹತೆ, ಸಮದರ್ಶಿತ್ವ ಮತ್ತು ಸಾಮಾಜಿಕ ನ್ಯಾಯ ಇವುಗಳನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಜ್ಯ ಸರ್ಕಾರದ ಸಹಮತಿಯೊಡನೆ ಆ ಪಟ್ಟಿಯಿಂದ ಒಬ್ಬ ವ್ಯಕ್ತಿಯನ್ನು ಕುಲಪತಿಯಾಗಿ ನೇಮಕ ಮಾಡತಕ್ಕದ್ದು:

ಪರಂತು, ಕುಲಾಧಿಪತಿಯವರು ಅವಶ್ಯವೆಂದು ಪರಿಗಣಿಸಿದರೆ, ರಾಜ್ಯ ಸರ್ಕಾರದ ಸಹಮತಿಯೊಡನೆ ಎರಡನೆಯ ಪಟ್ಟಿಯನ್ನು ತರಿಸಿಕೊಳ್ಳಬಹುದು ಮತ್ತು ಶೋಧನಾ ಸಮಿತಿಯು ಎರಡನೆಯ ಪಟ್ಟಿಯನ್ನು ಸಲ್ಲಿಸತಕ್ಕದ್ದು ಹಾಗೂ ಅದು ಅಂತಿಮವಾಗಿರತಕ್ಕದ್ದು.

(5) ಅರವತ್ತೈದು ವರ್ಷ ವಯಸ್ಸು ಆಗಿರುವ ಯಾವ ವ್ಯಕ್ತಿಯೂ ಕುಲಪತಿಯಾಗಿ ನೇಮಕವಾಗತಕ್ಕದ್ದಲ್ಲ ಅಥವಾ ಅವರು ಆ ಹುದ್ದೆಯಲ್ಲಿ ಇರತಕ್ಕದ್ದಲ್ಲ.

(6) ಕುಲಪತಿಯವರು, ಕುಲಾಧಿಪತಿಯವರ ಇಷ್ಟಪರ್ಯಂತ ಮತ್ತು (5)ನೇ ಉಪಪ್ರಕರಣದ ಉಪಬಂಧಗಳಿಗೊಳಪಟ್ಟು ನಾಲ್ಕು ವರ್ಷಗಳ ಅವಧಿಯವರೆಗೆ ಅಧಿಕಾರ ಸ್ಥಾನವನ್ನು ಹೊಂದಿರತಕ್ಕದ್ದು. ಅವರು ಎರಡನೇ ಅವಧಿಗೆ ಪುನರ್‌ನೇಮಕಕ್ಕೆ ಅರ್ಹರಾಗಿರತಕ್ಕದ್ದಲ್ಲ.

(7) ಕುಲಪತಿಯನ್ನು, ಈ ಅಧಿನಿಯಮದ ಉಪಬಂಧಗಳನ್ನು ಉದ್ದೇಶಪೂರ್ವಕವಾಗಿ ಕೈಬಿಟ್ಟಿದ್ದಾರೆ ಅಥವಾ ನೆರವೇರಿಸಲು ನಿರಾಕರಿಸಿದ್ದಾರೆ ಅಥವಾ ತನ್ನಲ್ಲಿ ನಿಹಿತವಾದ ಅಧಿಕಾರಗಳನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಎಂಬ ಕಾರಣದ ಮೇಲೆ ಮತ್ತು ರಾಜ್ಯ ಸರ್ಕಾರವು, (8)ನೇ ಉಪ ಪ್ರಕರಣದ ಮೇರೆಗೆ ತಾನು ಆದೇಶಿಸಿದ್ದ ವಿಚಾರಣೆಯ ವರದಿಯನ್ನು ಪರಿಗಣಿಸಿದ ನಂತರ ನೀಡಿದ ಸಲಹೆಯ ಮೇಲೆ ಕುಲಾಧಿಪತಿಯವರು ಹೊರಡಿಸಿದ ಆದೇಶದ ಮೂಲಕವಾಗಿ ಹೊರತು, ಅವರ ಅಧಿಕಾರ ಸ್ಥಾನದಿಂದ ತೆಗೆದುಹಾಕತಕ್ಕದ್ದಲ್ಲ.

(8) ಈ ಪ್ರಕರಣದ ಅಡಿಯಲ್ಲಿ ಒಂದು ವಿಚಾರಣೆಯನ್ನು ನಡೆಸುವ ಉದ್ದೇಶಕ್ಕಾಗಿ, ರಾಜ್ಯಸರ್ಕಾರವು, ಉಚ್ಚ ನ್ಯಾಯಾಲಯದ ಅಥವಾ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ಆಗಿದ್ದ ವ್ಯಕ್ತಿಯನ್ನು ನೇಮಕ ಮಾಡತಕ್ಕದ್ದು. ವಿಚಾರಣಾ ಪ್ರಾಧಿಕಾರವು, ಕುಲಪತಿಯವರಿಗೆ ತಮ್ಮ ಮನವಿಯನ್ನು ಸಲ್ಲಿಸಲು ಅವಕಾಶ ನೀಡಿದ ನಂತರ ವಿಚಾರಣೆ ನಡೆಸತಕ್ಕದ್ದು ಮತ್ತು ವಿಧಿಸಬೇಕಾದ ಯಾವುದೇ ದಂಡನೆ ಇದ್ದರೆ, ಅದೂ ಒಳಗೊಂಡಂತೆ ಒಂದು ವರದಿಯನ್ನು ರಾಜ್ಯಸರ್ಕಾರಕ್ಕೆ ಸಲ್ಲಿಸತಕ್ಕದ್ದು. ರಾಜ್ಯಸರ್ಕಾರವು, ವರದಿಯನ್ನು ಪರಿಶೀಲಿಸಿದ ನಂತರ, ಕುಲಾಧಿಪತಿಯವರಿಗೆ ಸಲಹೆ ನೀಡತಕ್ಕದ್ದು. ಕುಲಾಧಿಪತಿಯವರು ಸಾಧ್ಯವಾದಷ್ಟುಮಟ್ಟಿಗೆ ಆರು ತಿಂಗಳೊಳಗಾಗಿ ಅಂಥ ಸಲಹೆಗೆ ಅನುಸಾರವಾಗಿ ಕ್ರಮ ಕೈಗೊಳ್ಳತಕ್ಕದ್ದು.

(9) ಕುಲಪತಿಯವರ ಉಪಲಬ್ಧಿಗಳು ಮತ್ತು ಇತರ ಸೇವಾ ಷರತ್ತುಗಳು ಕುಲಾಧಿಪತಿಯವರು ನಿರ್ಧರಿಸಬಹುದಾದಂತೆ ಇರತಕ್ಕದ್ದು ಮತ್ತು ಅವುಗಳನ್ನು ಅವರು ಕುಲಪತಿಯಾಗಿ ನೇಮಕವಾದ ತರುವಾಯ ಅವರಿಗೆ ಅನಾನುಕೂಲವಾಗುವಂತೆ ಬದಲಾಯಿಸತಕ್ಕದ್ದಲ್ಲ. ಕುಲಪತಿಯಾಗಿ ತಮ್ಮ ಅಧಿಕಾರಾವಧಿಯಲ್ಲಿರುವಾಗ ಕುಲಪತಿಯವರು ವಯೋನಿವೃತ್ತಿಯ ಮೇಲೆ ನಿವೃತ್ತರಾಗುವ ಸಂದರ್ಭದಲ್ಲಿ, ಈಗಾಗಲೇ ನಿರ್ಧರಿಸಲಾದ ಅವರ ಸೇವಾ ಷರತ್ತುಗಳು ಮುಂದುವರಿಯತಕ್ಕದ್ದು. ಅವರ ಎಲ್ಲ ನಿವೃತ್ತಿ ಸೌಲಭ್ಯಗಳನ್ನು ತಡೆಹಿಡಿಯತಕ್ಕದ್ದು, ಅವುಗಳನ್ನು ಅವರು ಕುಲಪತಿಯಾಗಿ ಪದವನ್ನು ತ್ಯಜಿಸಿದ ನಂತರ ಬಿಡುಗಡೆ ಮಾಡತಕ್ಕದ್ದು.

(10) ನಿವೃತ್ತಿಹೊಂದಿದ ಒಬ್ಬ ವ್ಯಕ್ತಿಯು ಕುಲಪತಿಯಾಗಿ ನೇಮಕಗೊಂಡರೆ, ಅವರು ಕುಲಪತಿಯಾಗಿ ನೇಮಕಗೊಂಡ ಮೇಲೆ ಅವರ ಉಪಲಬ್ಧಿಗಳೂ ಸೇರಿದಂತೆ ಸೇವಾ ನಿಬಂಧನೆ ಮತ್ತು ಷರತ್ತುಗಳನ್ನು ಕುಲಾಧಿಪತಿಯವರು ನಿರ್ಣಯಿಸತಕ್ಕದ್ದು. ಅವರು ಪಡೆಯುವ ನಿವೃತ್ತಿ ವೇತನದ ಮೊತ್ತವನ್ನು ಮತ್ತು ಭತ್ಯಗಳನ್ನು ಉಪಲಬ್ಧಿಗಳಿಂದ ಕಳೆಯತಕ್ಕದ್ದು.

(11) ರಾಜ್ಯದಲ್ಲಿನ ಒಂದು ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಒಬ್ಬ ಪ್ರಾಧ್ಯಾಪಕರು ಕುಲಪತಿಯಾಗಿ ನೇಮಕಗೊಂಡರೆ, ಅವರು ಕುಲಪತಿಯಾಗಿರುವ ಅಧಿಕಾರಾವಧಿಯಲ್ಲಿ ಪ್ರಾಧ್ಯಾಪಕರಾಗಿ ಅವರ ಸೇವಾ ನಿಬಂಧನೆ ಮತ್ತು ಷರತ್ತುಗಳನ್ನು ಅವರಿಗೆ ಅನಾನುಕೂಲವಾಗುವಂತೆ ಪರಿಷ್ಕರಿಸತಕ್ಕದಲ್ಲ ಮತ್ತು ಅವರು ತನ್ನ ಹುದ್ದೆಯ ಧಾರಣಾಧಿಕಾರವನ್ನು ಉಳಿಸಿಕೊಳ್ಳತಕ್ಕದ್ದು."

**13. ಕುಲಪತಿಯವರ ಅಧಿಕಾರಗಳು ಮತ್ತು ಕರ್ತವ್ಯಗಳು.-** (1) ಕುಲಪತಿಯವರು ಶೈಕ್ಷಣಿಕ ಮುಖ್ಯಸ್ಥರು ಮತ್ತು ವಿಶ್ವವಿದ್ಯಾಲಯದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು ಮತ್ತು ಕುಲಾಧಿಪತಿಯವರು ಮತ್ತು ಸಹಕುಲಾಧಿಪತಿಯವರ ಗೈರುಹಾಜರಿಯಲ್ಲಿ, ವಿಶ್ವವಿದ್ಯಾಲಯದ ಯಾವುದೇ ಘಟಿಕೋತ್ಸವದ ಅಧ್ಯಕ್ಷತೆ ವಹಿಸತಕ್ಕದ್ದು ಮತ್ತು ಪದವಿಗಳು, ಡಿಪ್ಲೊಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು, ಅವುಗಳನ್ನು ಸ್ವೀಕರಿಸಲು ಹಕ್ಕುಳ್ಳವರಾಗಿರುವ ವ್ಯಕ್ತಿಗಳಿಗೆ ಪ್ರದಾನ ಮಾಡತಕ್ಕದ್ದು. ಅವರು ಪ್ರಶಾಸನ ಸಭೆಯ, ಪ್ರಶಿಕ್ಷಣ ಪರಿಷತ್ತಿನ ಹಾಗೂ ಹಣಕಾಸು ಸಮಿತಿಯ ಪದನಿಮಿತ್ತ ಸದಸ್ಯರಾಗಿದ್ದು ಅವುಗಳ ಅಧ್ಯಕ್ಷರಾಗಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಯಾವುದೇ ಸಭೆಯಲ್ಲಿ ಹಾಜರಿದ್ದು ಅಲ್ಲಿ ಭಾಷಣ ಮಾಡಲು ಹಕ್ಕುಳ್ಳವರಾಗಿರತಕ್ಕದ್ದು. ಆದರೆ ಅವರು, ಸಂಬಂಧಪಟ್ಟ ಪ್ರಾಧಿಕಾರದ ಒಬ್ಬ ಸದಸ್ಯರಾಗಿದ್ದ ಹೊರತು ಅಲ್ಲಿ ಮತ ನೀಡಲು ಹಕ್ಕುಳ್ಳವರಾಗಿರತಕ್ಕದ್ದಲ್ಲ.

(2) ಈ ಅಧಿನಿಯಮದ ಮತ್ತು ಶಾಸನಗಳ ಉಪಬಂಧಗಳನ್ನು ಪಾಲಿಸಲಾಗಿದೆ ಮತ್ತು ಅವುಗಳನ್ನು ನೆರವೇರಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಕುಲಪತಿಯವರ ಕರ್ತವ್ಯವಾಗಿರತಕ್ಕದ್ದು ಮತ್ತು ಈ ಉದ್ದೇಶಕ್ಕಾಗಿ ಅವರು ಅವಶ್ಯಕವಾದ ಎಲ್ಲ ಅಧಿಕಾರಗಳನ್ನು ಚಲಾಯಿಸಬಹುದು.

(3) ಕುಲಪತಿಯವರು ಪ್ರಶಾಸನ ಸಭೆ, ಪ್ರಶಿಕ್ಷಣ ಪರಿಷತ್ತು ಮತ್ತು ಹಣಕಾಸು ಸಮಿತಿಯ ಸಭೆಗಳನ್ನು ಸಮಾವೇಶಗೊಳಿಸಲು ಅಧಿಕಾರವನ್ನು ಹೊಂದಿರತಕ್ಕದ್ದು.

(4) (ಎ) ಕುಲಪತಿಯವರು ಯಾವುದೇ ವಿಷಯದ ಬಗ್ಗೆ ಕ್ರಮಕೈಗೊಳ್ಳಲು ಅಧಿಕಾರ ಹೊಂದಿರತಕ್ಕದ್ದು ಮತ್ತು ತಾವು ಅವಶ್ಯವೆಂದು ಭಾವಿಸುವಂಥ ಕ್ರಮವನ್ನು ಆದೇಶದ ಮೂಲಕ ಕೈಗೊಳ್ಳತಕ್ಕದ್ದು. ಆದರೆ, ತದನಂತರ ಸಾಧ್ಯವಾದಷ್ಟು ಬೇಗನೆ, ಕೈಗೊಳ್ಳಲಾದ ಕ್ರಮವನ್ನು, ವಿಷಯವನ್ನು ಸಾಮಾನ್ಯವಾಗಿ ವ್ಯವಹರಿಸುತ್ತಿದ್ದ ಅಧಿಕಾರಿ ಅಥವಾ ಪ್ರಾಧಿಕಾರ ಅಥವಾ ನಿಕಾಯಕ್ಕೆ ವರದಿ ಮಾಡತಕ್ಕದ್ದು:

ಪರಂತು, ಬಾಧಿತನಾಗುವ ಸಂಭವವಿರುವ ವ್ಯಕ್ತಿಗೆ ತನ್ನ ಅಹವಾಲನ್ನು ಹೇಳಿಕೊಳ್ಳಲು ಯುಕ್ತ ಅವಕಾಶವನ್ನು ನೀಡಿದ ಹೊರತು ಅಂಥ ಯಾವುದೇ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(ಬಿ) ಈ ಉಪ-ಪ್ರಕರಣದ ಅಡಿಯಲ್ಲಿ ಕುಲಪತಿಯವರು ಕೈಗೊಂಡ ಕ್ರಮವು ವಿಶ್ವವಿದ್ಯಾಲಯದ ಸೇವೆಯಲ್ಲಿರುವ ಯಾವೊಬ್ಬ ವ್ಯಕ್ತಿಯನ್ನು ಬಾಧಿಸಿದಾಗ, ಅಂಥ ವ್ಯಕ್ತಿಯು, ಅಂಥ ಕ್ರಮದ ಬಗ್ಗೆ ನೋಟೀಸನ್ನು ತಾನು ಪಡೆದ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಪ್ರಶಾಸನ ಸಭೆಗೆ ಒಂದು ಅಪೀಲನ್ನು ಸಲ್ಲಿಸಲು ಹಕ್ಕುಳ್ಳವನಾಗಿರತಕ್ಕದ್ದು. ಕುಲಪತಿಯವರು ಅಂಥ ಅಪೀಲಿನ ಮೇಲೆ ಪ್ರಶಾಸನ ಸಭೆಯು ಹೊರಡಿಸಿದ ಆದೇಶವನ್ನು ಜಾರಿತರತಕ್ಕದ್ದು.

(5) ಕುಲಪತಿಯವರು, ವಿಶ್ವವಿದ್ಯಾಲಯದ ಬೋಧಕರು ಮತ್ತು ಇತರ ಉದ್ಯೋಗಿಗಳ ನೇಮಕಾತಿ, ಅಮಾನತ್ತುಗೊಳಿಸುವಿಕೆ ಮತ್ತು ವಜಾ ಇವುಗಳಿಗೆ ಸಂಬಂಧಿಸಿದಂತೆ ಪ್ರಶಾಸನ ಸಭೆಯ ಆದೇಶಗಳನ್ನು ಜಾರಿಗೊಳಿಸತಕ್ಕದ್ದು.

(6) ಕುಲಪತಿಯವರು, ವಿಶ್ವವಿದ್ಯಾಲಯದ ವ್ಯವಹಾರಗಳ ಮೇಲೆ ನಿಯಂತ್ರಣವನ್ನು ಹೊಂದಿರತಕ್ಕದ್ದು ಮತ್ತು ವಿಶ್ವವಿದ್ಯಾಲಯದಲ್ಲಿ ಶಿಸ್ತನ್ನು ಯಥೋಚಿತವಾಗಿ ಪಾಲಿಸುವಂತೆ ನೋಡಿಕೊಳ್ಳಲು ಜವಾಬ್ದಾರರಾಗಿರತಕ್ಕದ್ದು.

(7) ಕುಲಪತಿಯವರು, ನಿಯಮಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**14. ಫ್ಯಾಕಲ್ಟಿಗಳ ಡೀನರು.-** (1) ಕುಲಪತಿಯವರು, ಪ್ರತಿಯೊಬ್ಬ ಡೀನ್‌ರನ್ನು, ಫ್ಯಾಕಲ್ಟಿಯಲ್ಲಿರುವ ಪ್ರಾಧ್ಯಾಪಕರ ಪೈಕಿಯಿಂದ, ಮೂರು ವರ್ಷಗಳ ಅವಧಿಗಾಗಿ ನೇಮಕ ಮಾಡತಕ್ಕದ್ದು ಮತ್ತು ಅವರು ಪುನರ್ ನೇಮಕಕ್ಕೆ ಅರ್ಹರಾಗಿರತಕ್ಕದ್ದು:

ಪರಂತು, ಫ್ಯಾಕಲ್ಟಿಯಲ್ಲಿ ಯಾವುದೇ ಕಾಲದಲ್ಲಿ ಪ್ರಾಧ್ಯಾಪಕರು ಇರದಿದ್ದರೆ, ಕುಲಪತಿಯವರು ಫ್ಯಾಕಲ್ಟಿಯ ಡೀನರ ಅಧಿಕಾರಗಳನ್ನು ಚಲಾಯಿಸತಕ್ಕದ್ದು.

(2) ಡೀನರ ಪದವು, ಖಾಲಿಯಾಗಿದ್ದಾಗ, ಅಥವಾ ಅನಾರೋಗ್ಯದ, ಗೈರುಹಾಜರಿಯ ಅಥವಾ ಇತರ ಯಾವುದೇ ಕಾರಣದಿಂದ ತಮ್ಮ ಪದದ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥರಾದಾಗ, ಅವರ ಪದದ ಕರ್ತವ್ಯಗಳನ್ನು ಈ ಉದ್ದೇಶಕ್ಕಾಗಿ ಕುಲಪತಿಯವರು ನೇಮಕ ಮಾಡಬಹುದಾದಂಥ ವ್ಯಕ್ತಿಯು ನೆರವೇರಿಸತಕ್ಕದ್ದು.

(3) ಡೀನರು ಫ್ಯಾಕಲ್ಟಿಯ ಮುಖ್ಯಸ್ಥರಾಗಿರತಕ್ಕದ್ದು ಮತ್ತು ಫ್ಯಾಕಲ್ಟಿಯಲ್ಲಿ ಸಂಶೋಧನೆಯನ್ನು ನಡೆಸುವುದಕ್ಕೆ ಮತ್ತು ಗುಣಮಟ್ಟಗಳನ್ನು ಕಾಪಾಡಿಕೊಂಡುಬರುವುದಕ್ಕೆ ಹೊಣೆಗಾರರಾಗಿರತಕ್ಕದ್ದು. ಡೀನ್‌ರು ನಿಯಮಿಸಬಹುದಾದಂಥ ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು.

(4) ಡೀನರು ಸಂದರ್ಭಾನುಸಾರ ಅಧ್ಯಯನ ಮಂಡಳಿಗಳ ಅಥವಾ ಫ್ಯಾಕಲ್ಟಿಯ ಸಮಿತಿಯ ಯಾವುದೇ ಸಭೆಯಲ್ಲಿ ಹಾಜರಿರಲು ಮತ್ತು ಮಾತನಾಡಲು ಅಧಿಕಾರ ಹೊಂದಿರತಕ್ಕದ್ದು, ಆದರೆ ಅವರು ಅದರ ಸದಸ್ಯರಾಗಿದ್ದ ಹೊರತು ಮತ ನೀಡಲು ಅಧಿಕಾರ ಹೊಂದಿರತಕ್ಕದ್ದಲ್ಲ.

**15. ಕುಲಸಚಿವ.–** (1) ಕುಲಸಚಿವರು ವಿಶ್ವವಿದ್ಯಾಲಯದ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು. ಸರ್ಕಾರವು, ಕರ್ನಾಟಕ ಆಡಳಿತ ಸೇವೆಗಳಿಗೆ ಸೇರಿದ, ಹಿರಿಯ ವೇತನ ಶ್ರೇಣಿಯ ಅಥವಾ ಅದಕ್ಕಿಂತ ಹೆಚ್ಚಿನ ಶ್ರೇಣಿಯ ಒಬ್ಬ ಅಧಿಕಾರಿಯನ್ನು ವಿಶ್ವವಿದ್ಯಾಲಯದ ಕುಲಸಚಿವರಾಗಿ ನೇಮಕ ಮಾಡಬಹುದು.

(2) ಕುಲಸಚಿವರು, ಪ್ರಶಾಸನ ಸಭೆ ಮತ್ತು ಪ್ರಶಿಕ್ಷಣ ಪರಿಷತ್ತಿನ ಪದನಿಮಿತ್ತ ಸದಸ್ಯ ಕಾರ್ಯದರ್ಶಿ ಮತ್ತು ಹಣಕಾಸು ಸಮಿತಿಯ ಸದಸ್ಯ ಆಗಿರತಕ್ಕದ್ದು.

(3) ಕುಲಸಚಿವರಿಗೆ ಒಬ್ಬರು ಅಥವಾ ಹೆಚ್ಚು ಉಪ-ಕುಲಸಚಿವರು ಹಾಗೂ ಸಹಾಯಕ ಕುಲಸಚಿವರುಗಳು ಸಹಾಯಕರಾಗಿರಬಹುದು.

**16. ಕುಲಸಚಿವರ ಅಧಿಕಾರಗಳು ಮತ್ತು ಕರ್ತವ್ಯಗಳು.–** (1) (ಎ) ಕುಲಸಚಿವರು, ಪ್ರಶಾಸನ ಸಭೆಯ ಆದೇಶಗಳಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಬೋಧಕರು ಮತ್ತು ಶೈಕ್ಷಣಿಕ ಸಿಬ್ಬಂದಿಯ ಹೊರತಾಗಿ ಅಂಥ ನೌಕರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಮತ್ತು ವಿಚಾರಣೆ ಇತ್ಯರ್ಥದಲ್ಲಿರುವಾಗ ಅಮಾನತುಗೊಳಿಸಲು, ಅವರಿಗೆ ಎಚ್ಚರಿಕೆ ನೀಡಲು ಅಥವಾ ಅವರಿಗೆ ವಾಗ್ದಂಡನೆ ಅಥವ ವೇತನ ಬಡ್ತಿಗಳನ್ನು ತಡೆಹಿಡಿಯಲು ಅಧಿಕಾರ ಹೊಂದಿರತಕ್ಕದ್ದು:

ಪರಂತು, ಈ ಸಂಬಂಧದಲ್ಲಿ ಕೈಗೊಳ್ಳಲು ಉದ್ದೇಶಿಸಿದ ಕ್ರಮದ ವಿರುದ್ಧ ಕಾರಣ ತೋರಿಸುವ ಸೂಕ್ತ ಅವಕಾಶವನ್ನು ಸಂಬಂಧಪಟ್ಟ ವ್ಯಕ್ತಿಗೆ ನೀಡಿದ ಹೊರತು, ಅಂಥ ಯಾವುದೇ ದಂಡವನ್ನು ವಿಧಿಸತಕ್ಕದ್ದಲ್ಲ.

(ಬಿ) (ಎ) ಖಂಡದಲ್ಲಿ ನಿರ್ದಿಷ್ಟಪಡಿಸಿದ ಯಾವುದೇ ದಂಡವನ್ನು ವಿಧಿಸುವ ಕುಲಸಚಿವರ ಆದೇಶದ ವಿರುದ್ಧ ಕುಲಾಧಿಪತಿಯವರಿಗೆ ಅಪೀಲನ್ನು ಸಲ್ಲಿಸಬಹುದು.

(ಸಿ) ಕುಲಸಚಿವರ ಅಧಿಕಾರಗಳಿಗೆ ಮೀರಿ ದಂಡ ವಿಧಿಸುವ ಅಗತ್ಯವಿದೆ ಎಂದು ವಿಚಾರಣೆಯಿಂದ ತಿಳಿದು ಬಂದ ಸಂದರ್ಭದಲ್ಲಿ, ಕುಲಸಚಿವರು, ವಿಚಾರಣೆಯಲ್ಲಿಯ ತೀರ್ಮಾನದ ಮೇಲೆ ತನ್ನ ಶಿಫಾರಸ್ಸುಗಳೊಡನೆ ಕುಲಪತಿಯವರಿಗೆ ಒಂದು ವರದಿಯನ್ನು ಸಲ್ಲಿಸತಕ್ಕದ್ದು;

ಪರಂತು, ದಂಡ ವಿಧಿಸುವಂತೆ ಕುಲಪತಿಯವರು ಮಾಡಿದ ಆದೇಶದ ವಿರುದ್ಧ ಪ್ರಶಾಸನ ಸಭೆಗೆ ಅಪೀಲನ್ನು ಸಲ್ಲಿಸತಕ್ಕದ್ದು.

(ಡಿ) (ಬಿ) ಖಂಡದ ಅಥವಾ (ಸಿ) ಖಂಡದ ಅಡಿಯಲ್ಲಿ ಯಾವುದೇ ಅಪೀಲನ್ನು, ಅಪೀಲುದಾರನು ಯಾವ ಆದೇಶದ ವಿರುದ್ಧ ಅಪೀಲು ಸಲ್ಲಿಸಿರುವನೋ ಆ ಆದೇಶದ ದಿನಾಂಕದಿಂದ ಅರವತ್ತು ದಿನಗಳು ಮುಕ್ತಾಯವಾದ ತರುವಾಯ ಸಲ್ಲಿಸತಕ್ಕದಲ್ಲ.

(2) ಕುಲಸಚಿವರು, ಪ್ರಶಾಸನ ಸಭೆಯ, ಪ್ರಶಿಕ್ಷಣ ಪರಿಷತ್ತಿನ, ಫ್ಯಾಕಲ್ಟಿಗಳ ಮತ್ತು ಅಧ್ಯಯನ ಮಂಡಲಿಗಳ ಸದಸ್ಯ ಕಾರ್ಯದರ್ಶಿಯಾಗಿರತಕ್ಕದ್ದು.

(3) ಈ ಮುಂದಿನವುಗಳು ಕುಲಸಚಿವರ ಕರ್ತವ್ಯಗಳಾಗಿರತಕ್ಕದ್ದು:-

(ಎ) ಕುಲಪತಿಯವರು ಅಥವಾ ಪ್ರಶಾಸನ ಸಭೆಯು ತಮ್ಮ ಪ್ರಭಾರಕ್ಕೆ ಒಪ್ಪಿಸಿದ ವಿಶ್ವವಿದ್ಯಾಲಯದ ದಾಖಲೆಗಳ, ಸಾಮಾನ್ಯ ಮೊಹರಿನ ಮತ್ತು ಇತರ ಸ್ವತ್ತಿನ ಅಭಿರಕ್ಷಕರಾಗಿರತಕ್ಕದ್ದು;

(ಬಿ) ಪ್ರಶಾಸನ ಸಭೆಯ, ಪ್ರಶಿಕ್ಷಣ ಪರಿಷತ್ತಿನ, ಅಧ್ಯಯನ ಮಂಡಳಿಗಳ, ಪರೀಕ್ಷಾ ಮಂಡಳಿಗಳ ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳು ನೇಮಕಮಾಡಿದ ಯಾವುದೇ ಸಮಿತಿಯ ಸಭೆಗಳನ್ನು ನಡೆಸುವುದಕ್ಕೆ ನೋಟೀಸುಗಳನ್ನು ನೀಡತಕ್ಕದ್ದು;

(ಸಿ) ಪ್ರಶಾಸನ ಸಭೆಯ, ಪ್ರಶಿಕ್ಷಣ ಪರಿಷತ್ತಿನ, ಅಧ್ಯಯನ ಮಂಡಳಿಗಳ, ಪರೀಕ್ಷಕರ ಮಂಡಳಿಗಳ ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳು ನೇಮಕ ಮಾಡಿದ ಸಮಿತಿಗಳ ಸಭೆಗಳ ಎಲ್ಲಾ ವ್ಯವಹರಣೆಗಳ ಸಭಾ ನಡೆವಳಿಗಳನ್ನು ಇಟ್ಟುಕೊಂಡು ಬರತಕ್ಕದ್ದು;

(ಡಿ) ಪ್ರಶಾಸನ ಸಭೆಯ ಮತ್ತು ಪ್ರಶಿಕ್ಷಣ ಪರಿಷತ್ತಿನ ಅಧಿಕೃತ ಪತ್ರ ವ್ಯವಹಾರಗಳನ್ನು ನಡೆಸತಕ್ಕದ್ದು;

(ಇ) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಸಭೆಗಳ ಕಾರ್ಯಸೂಚಿಯ ಪ್ರತಿಗಳನ್ನು, ಅವುಗಳನ್ನು ಹೊರಡಿಸಿದ ಕೂಡಲೇ ಮತ್ತು ಅಂಥ ಸಭೆಗಳ ಸಭಾ ನಡವಳಿಗಳ ಪ್ರತಿಗಳನ್ನು, ಅಂಥ ಸಭೆ ನಡೆದ ಒಂದು ತಿಂಗಳ ಒಳಗೆ ಕುಲಾಧಿಪತಿಯವರಿಗೆ ಕಳುಹಿಸಿಕೊಡತಕ್ಕದ್ದು; ಮತ್ತು

(ಎಫ್) ಶಾಸನಗಳಲ್ಲಿ, ನಿರ್ದಿಷ್ಟಪಡಿಸಿದ ಅಥವಾ ಪ್ರಶಾಸನ ಸಭೆಯು ಅಥವಾ ಕುಲಪತಿಯವರು ಕಾಲಕಾಲಕ್ಕೆ ಅಗತ್ಯಪಡಿಸಬಹುದಾದಂಥ ಇತರ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

(4) ಕುಲಸಚಿವರ ಸ್ಥಾನವು ಖಾಲಿಯಾದಾಗ ಅಥವಾ ಕುಲಸಚಿವರು, ಖಾಯಿಲೆ, ಗೈರು ಹಾಜರಿ ಅಥವಾ ಇನ್ನಾವುದೇ ಕಾರಣದಿಂದ ತನ್ನ ಸ್ಥಾನದ ಕರ್ತವ್ಯಗಳನ್ನು ನೆರವೇರಿಸುವುದು ಸಾಧ್ಯವಾಗದಿದ್ದಾಗ ಕುಲಸಚಿವರ ಕರ್ತವ್ಯಗಳನ್ನು ಕುಲಪತಿಯವರು ಈ ಉದ್ದೇಶಕ್ಕಾಗಿ ನೇಮಿಸಬಹುದಾದ ವ್ಯಕ್ತಿಯು ನೆರವೇರಿಸತಕ್ಕದ್ದು.

**17. ಹಣಕಾಸು ಅಧಿಕಾರಿ.-** ಹಣಕಾಸು ಅಧಿಕಾರಿಯು, ರಾಜ್ಯ ಲೆಕ್ಕ ಪತ್ರ ಇಲಾಖೆಯ ಸಹಾಯಕ ನಿಯಂತ್ರಕರ ದರ್ಜೆಗಿಂತ ಕಡಿಮೆ ದರ್ಜೆಯವರಲ್ಲದ, ಈ ಬಗ್ಗೆ ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ಅವಧಿಗೆ ಸರ್ಕಾರದಿಂದ ನೇಮಕಗೊಂಡ ವಿಶ್ವವಿದ್ಯಾಲಯದ ಒಬ್ಬ ಪೂರ್ಣಕಾಲಿಕ ವೇತನ ಪಡೆಯುವ ಅಧಿಕಾರಿಯಾಗಿರತಕ್ಕದ್ದು ಮತ್ತು ಹಣಕಾಸು ಅಧಿಕಾರಿಯ ಸೇವಾ ಷರತ್ತುಗಳು ಮತ್ತು ನಿಬಂಧನೆಗಳು ಸರ್ಕಾರವು ನಿರ್ದಿಷ್ಟಪಡಿಸಿದಂಥವುಗಳಾಗಿರತಕ್ಕದ್ದು.

**18. ಹಣಕಾಸು ಅಧಿಕಾರಿಯ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು.-** (1) ಹಣಕಾಸು, ಅಧಿಕಾರಿಯ ಉಪಲಬ್ಧಿಗಳು ಮತ್ತು ಇತರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸ ಬಹುದಾದಂಥವುಗಳಾಗಿರತಕ್ಕದ್ದು. ಹಣಕಾಸು ಅಧಿಕಾರಿಯು ತನಗೆ ಅರವತ್ತು ವರ್ಷಗಳ ವಯಸ್ಸಾದಾಗ ಅಥವಾ

17ನೇ ಪ್ರಕರಣದಲ್ಲಿ ಸರ್ಕಾರವು ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾದ ಮೇಲೆ, ಇವುಗಳಲ್ಲಿ ಯಾವುದು ಮೊದಲೋ ಆಗ ನಿವೃತ್ತರಾಗತಕ್ಕದ್ದು.

ಪರಂತು, ಹಣಕಾಸು ಅಧಿಕಾರಿಯು ಅರವತ್ತು ವರ್ಷ ವಯಸ್ಸಾಗಿದ್ದರೂ ಅವರ ಉತ್ತರಾಧಿಕಾರಿಯು ನೇಮಕವಾಗಿ ಅಧಿಕಾರವಹಿಸಿಕೊಳ್ಳುವವರೆಗೂ ಅಥವಾ ಒಂದು ವರ್ಷದ ಅವಧಿಯು ಮುಕ್ತಾಯ ವಾಗುವವರೆಗೂ, ಇವುಗಳಲ್ಲಿ ಯಾವುದು ಮೊದಲೋ ಆವರೆಗೆ ಪದದಲ್ಲಿ ಮುಂದುವರಿಯತಕ್ಕದ್ದು.

(2) ಹಣಕಾಸು ಅಧಿಕಾರಿಯ ಸ್ಥಾನವು ಖಾಲಿಯಾಗಿದ್ದಾಗ ಅಥವಾ ಅನಾರೋಗ್ಯ, ಗೈರು ಹಾಜರಿ ಅಥವಾ ಯಾವುದೇ ಇತರ ಕಾರಣದಿಂದ ತಮ್ಮ ಅಧಿಕಾರ ಸ್ಥಾನದ ಕರ್ತವ್ಯಗಳನ್ನು ನಿರ್ವಹಿಸಲು ಅಸಮರ್ಥರಾದಾಗ, ಹಣಕಾಸು ಅಧಿಕಾರಿಯ ಕರ್ತವ್ಯಗಳನ್ನು ಈ ಉದ್ದೇಶಕ್ಕಾಗಿ ಕುಲಪತಿಯವರು ನೇಮಕಮಾಡಬಹುದಾದಂಥ ವ್ಯಕ್ತಿಯು ನೆರವೇರಿಸತಕ್ಕದ್ದು.

(3) ಹಣಕಾಸು ಅಧಿಕಾರಿಯು, ಹಣಕಾಸು ಸಮಿತಿಯ ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು, ಆದರೆ ಅವರು ಆ ಸಮಿತಿಯ ಸದಸ್ಯರೆಂದು ಭಾವಿಸತಕ್ಕದ್ದಲ್ಲ ;

(4) (ಎ) ಹಣಕಾಸು ಅಧಿಕಾರಿಯು, ವಿಶ್ವವಿದ್ಯಾಲಯದ ನಿಧಿಗಳ ಮೇಲೆ ಸಾಮಾನ್ಯ ಮೇಲ್ವಿಚಾರಣೆ ನಡೆಸತಕ್ಕದ್ದು ಮತ್ತು ವಿಶ್ವವಿದ್ಯಾಲಯಕ್ಕೆ ಅದರ ಹಣಕಾಸು ನೀತಿಯ ಸಂಬಂಧದಲ್ಲಿ ಸಲಹೆ ನೀಡತಕ್ಕದ್ದು ; ಮತ್ತು

(ಬಿ) ನಿಯಮಿಸಬಹುದಾದಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಇತರ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು :

ಪರಂತು, ಹಣಕಾಸು ಅಧಿಕಾರಿಯು, ಪ್ರಶಾಸನ ಸಭೆಯ ಪೂರ್ವಾನುಮತಿಯಿಲ್ಲದೇ ನಿಯಮಿಸಬಹುದಾದಂಥ ಮೊತ್ತಕ್ಕೆ ಮೀರಿ ಯಾವುದೇ ವೆಚ್ಚವನ್ನು ವಹಿಸತಕ್ಕದ್ದಲ್ಲ ಅಥವಾ ಯಾವುದೇ ಹೂಡಿಕೆ ಮಾಡತಕ್ಕದ್ದಲ್ಲ

(5) ಪ್ರಶಾಸನ ಸಭೆಯ ನಿಯಂತ್ರಣಕ್ಕೊಳಪಟ್ಟು ಹಣಕಾಸು ಅಧಿಕಾರಿಯು,-

(ಎ) ನ್ಯಾಸದ ಮತ್ತು ದತ್ತಿ ನೀಡಲಾದ ಸ್ವತ್ತು ಒಳಗೊಂಡಂತೆ ವಿಶ್ವವಿದ್ಯಾಲಯದ ಸ್ವತ್ತನ್ನು ಮತ್ತು ಹೂಡಿಕೆಗಳನ್ನು ಧಾರಣಮಾಡತಕ್ಕದ್ದು ಮತ್ತು ನಿರ್ವಹಿಸತಕ್ಕದ್ದು.

(ಬಿ) ಒಂದು ವರ್ಷಕ್ಕಾಗಿ ಆವರ್ತಕ ಮತ್ತು ಅನಾವರ್ತಕ ವೆಚ್ಚಗಳು ಪ್ರಶಾಸನ ಸಭೆಯು ನಿಗದಿಪಡಿಸಿದ ಪರಿಮಿತಿಗಳನ್ನು ಮೀರದಂತೆ ಮತ್ತು ಯಾವ ಉದ್ದೇಶಕ್ಕಾಗಿ ಆ ಹಣವನ್ನು ಮಂಜೂರುಮಾಡಲಾಗಿತ್ತೋ ಅಥವಾ ಹಂಚಿಕೆಮಾಡಲಾಗಿತ್ತೋ ಅದಕ್ಕಾಗಿ ಬಳಸುವಂತೆ ನೋಡಿಕೊಳ್ಳತಕ್ಕದ್ದು.

(ಸಿ) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಗಳು ಆರ್ಥಿಕ ಅಂದಾಜುಗಳು ಮತ್ತು ಬಜೆಟ್‌ಅನ್ನು ಸಿದ್ಧಪಡಿಸುವುದಕ್ಕೆ ಮತ್ತು ಅದನ್ನು ಪ್ರಶಾಸನ ಸಭೆಯ ಮುಂದೆ ಮಂಡಿಸುವುದಕ್ಕೆ ಜವಾಬ್ದಾರರಾಗಿರತಕ್ಕದ್ದು.

(ಡಿ) ನಗದು ಮತ್ತು ಬ್ಯಾಂಕ್ ಶಿಲ್ಕು ಮತ್ತು ಹೂಡಿಕೆಗಳ ಮೇಲೆ ನಿರಂತರ ಗಮನವಿಡತಕ್ಕದ್ದು.

(ಇ) ರಾಜಸ್ವ ಸಂಗ್ರಹಣೆಯ ಪ್ರಗತಿಯನ್ನು ಮತ್ತು ಅನುಸರಿಸಬೇಕಾದ ಸಂಗ್ರಹಣಾವಿಧಾನಗಳ ಮೇಲೆ ಗಮನವಿಡತಕ್ಕದ್ದು.

(ಎಫ್) ಕಟ್ಟಡಗಳ, ಭೂಮಿಯ, ಪೀಠೋಪಕರಣಗಳ ಮತ್ತು ಸಲಕರಣೆಗಳ ರಿಜಿಸ್ಟರುಗಳನ್ನು ಇಂದೀಕರಿಸಿ ನಿರ್ವಹಿಸತಕ್ಕದ್ದು ಮತ್ತು ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಎಲ್ಲ ಕಛೇರಿಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಸಲಕರಣೆಗಳ ಮತ್ತು ಇತರ ಬಳಕೆವಸ್ತುಗಳ ದಾಸ್ತಾನು ಪರೀಕ್ಷೆ ಮಾಡುವಂತೆ ನೋಡಿಕೊಳ್ಳತಕ್ಕದ್ದು.

(ಜಿ) ಯಾವುದೇ ಅನಧಿಕೃತ ವೆಚ್ಚದ ಬಗ್ಗೆ ಅಥವಾ ಇತರ ಹಣಕಾಸು ಅಕ್ರಮಗಳ ಬಗ್ಗೆ ಕುಲಪತಿಯವರ ಗಮನಕ್ಕೆ ತರತಕ್ಕದ್ದು ಮತ್ತು ತಪ್ಪಿತಸ್ಥ ವ್ಯಕ್ತಿಗಳ ವಿರುದ್ಧ ಸೂಕ್ತ ಕ್ರಮಕೈಗೊಳ್ಳುವುದಕ್ಕೆ ಸಲಹೆ ನೀಡತಕ್ಕದ್ದು ; ಮತ್ತು

(ಎಚ್) ವಿಶ್ವವಿದ್ಯಾಲಯವು ನಿರ್ವಹಿಸುತ್ತಿರುವ ಯಾವುದೇ ಕಛೇರಿ ಅಥವಾ ಇತರ ಸ್ಥಳದಿಂದ ತನ್ನ ಕರ್ತವ್ಯಗಳನ್ನು ನೆರವೇರಿಸುವುದಕ್ಕಾಗಿ ತಾನು ಅಗತ್ಯವೆಂದು ಭಾವಿಸಬಹುದಾದ ಮಾಹಿತಿ ಅಥವಾ ವಿವರಣಾ ಪಟ್ಟಿಗಳನ್ನು ಕೇಳಿ ತರಿಸಿಕೊಳ್ಳತಕ್ಕದ್ದು.

(6) ವಿಶ್ವವಿದ್ಯಾನಿಲಯಕ್ಕೆ ಸಂದಾಯವಾಗತಕ್ಕ ಯಾವುದೇ ಹಣಕ್ಕಾಗಿ ಹಣಕಾಸು ಅಧಿಕಾರಿಯ ಅಥವಾ ಪ್ರಶಾಸನ ಸಭೆಯು ಈ ಸಂಬಂಧದಲ್ಲಿ ವಿಧ್ಯುಕ್ತವಾಗಿ ಪ್ರಾಧೀಕರಿಸಿದ ವ್ಯಕ್ತಿಯು ಅಥವಾ ವ್ಯಕ್ತಿಗಳು ನೀಡಿದ ರಸೀದಿಗಳು ಅಂಥ ಹಣದ ಸಂದಾಯವಾಗಿರುವುದಕ್ಕೆ ಪರ್ಯಾಪ್ತ ತೀರಿಕೆಯಾಗಿರತಕ್ಕದ್ದು.

## ಅಧ್ಯಾಯ – IV

## ವಿಶ್ವವಿದ್ಯಾಲಯದ ಪ್ರಾಧಿಕಾರಗಳು

**19. ವಿಶ್ವವಿದ್ಯಾಲಯದ ಪ್ರಾಧಿಕಾರಗಳು.–** ಪ್ರಶಾಸನ ಸಭೆ, ಪ್ರಶಿಕ್ಷಣ ಪರಿಷತ್ತು, ಫ್ಯಾಕಲ್ಟಿಗಳು ಮತ್ತು ಹಣಕಾಸು ಸಮಿತಿ, ಅಧ್ಯಯನ ಮಂಡಳಿಗಳು, ಮತ್ತು ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಶಾಸನಗಳ ಮೂಲಕ ಘೋಷಿಸಬಹುದಾದಂಥ ಇತರ ಪ್ರಾಧಿಕಾರಗಳು, ವಿಶ್ವವಿದ್ಯಾಲಯದ ಪ್ರಾಧಿಕಾರಗಳಾಗಿರತಕ್ಕದ್ದು.

**20. ಪ್ರಶಾಸನ ಸಭೆ.–** ಕುಲಾಧಿಪತಿಯವರು, ಪ್ರಥಮ ಕುಲಪತಿಯವರ ನೇಮಕವಾದ ಮೇಲೆ ಆದಷ್ಟುಬೇಗನೇ ಈ ಮುಂದಿನ ವ್ಯಕ್ತಿಗಳನ್ನು ಒಳಗೊಂಡ ಪ್ರಶಾಸನಸಭೆಯನ್ನು ರಚಿಸತಕ್ಕದ್ದು, ಎಂದರೆ:–

(ಎ) ಕುಲಪತಿ

(ಬಿ) ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಅವರ ನಾಮನಿರ್ದೇಶಿತರು.

(ಸಿ) ಆರ್ಥಿಕ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಅವರ ನಾಮನಿರ್ದೇಶಿತರು.

(ಡಿ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಅವರ ನಾಮನಿರ್ದೇಶಿತರು.

(ಇ) ಅಧ್ಯಕ್ಷರು, ವಿಶ್ವವಿದ್ಯಾಲಯ ಅನುದಾನ ಆಯೋಗ ಅಥವಾ ಅವರ ನಾಮನಿರ್ದೇಶಿತರು.

(ಎಫ್) ಮಹಾನಿರ್ದೇಶಕರು, ಪುರಾತತ್ವ ಇಲಾಖೆ, ಭಾರತ ಸರ್ಕಾರ

(ಜಿ) ಸಂಗೀತ, ಪ್ರದರ್ಶನಕಲೆಗಳ ಕ್ಷೇತ್ರದಲ್ಲಿ ಪ್ರಸಿದ್ಧ ಶಿಕ್ಷಣ ತಜ್ಞರು, ಮತ್ತು ಇತರ ತತ್ಸಂಬಂಧಿತ ವೃತ್ತಿಗಳ ವ್ಯಕ್ತಿಗಳ ಪೈಕಿಯಿಂದ ಕುಲಾಧಿಪತಿಯವರು ನಾಮನಿರ್ದೇಶಿಸಿದ ಇಬ್ಬರು ಸದಸ್ಯರು, ಇವರ ಪೈಕಿ ಒಬ್ಬರು ಮಹಿಳೆ ಆಗಿರತಕ್ಕದ್ದು.

(ಎಚ್) ಸಂಗೀತ ಮತ್ತು ಪ್ರದರ್ಶಕ ಕಲೆಗಳಲ್ಲಿ ವಿಖ್ಯಾತ ಕಲಾವಿದರು, ಶಿಕ್ಷಣ ತಜ್ಞರು ಅಥವಾ ಸಂಗೀತ ಮತ್ತು ಪ್ರದರ್ಶಕ ಕಲೆಗಳಲ್ಲಿ ಪ್ರಶಸ್ತಿ ವಿಜೇತರು ಅಥವಾ ಇತರ ವೃತ್ತಿಗಳ ವ್ಯಕ್ತಿಗಳಿಂದ ಆಯ್ದು ರಾಜ್ಯ ಸರ್ಕಾರವು ನಾಮನಿರ್ದೇಶಿಸಿದ ಆರು ವ್ಯಕ್ತಿಗಳು, ಅವರಲ್ಲಿ,–

(i) ಅನುಸೂಚಿತ ಜಾತಿಗಳು ಅಥವಾ ಅನುಸೂಚಿತ ಬುಡಕಟ್ಟುಗಳಿಗೆ ಸೇರಿದ ಒಬ್ಬ ವ್ಯಕ್ತಿ;

(ii) ಇತರ ಹಿಂದುಳಿದ ವರ್ಗಗಳಿಗೆ ಸೇರಿದ ಒಬ್ಬ ವ್ಯಕ್ತಿ,

(iii) ಒಬ್ಬ ಮಹಿಳೆ

(iv) ಧಾರ್ಮಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಒಬ್ಬ ವ್ಯಕ್ತಿ ಮತ್ತು

(v) ಇತರೆ ಇಬ್ಬರು.

– ಇರತಕ್ಕದ್ದು

ಪರಂತು, ಘಟಕ ಕಾಲೇಜಿನಲ್ಲಿ ಅಥವಾ ವಿಶ್ವವಿದ್ಯಾಲಯದಲ್ಲಿ ಯಾವುದೇ ಸಾಮರ್ಥ್ಯದಲ್ಲಿ ನಿಯೋಜಿತನಾದ ಯಾವೊಬ್ಬ ವ್ಯಕ್ತಿಯೂ ನಾಮನಿರ್ದೇಶನಕ್ಕೆ ಅರ್ಹನಾಗಿರತಕ್ಕದ್ದಲ್ಲ.

(ಐ) ಕರ್ನಾಟಕ ವಿಧಾನಸಭೆಯಿಂದ ಮತ್ತು ಕರ್ನಾಟಕ ವಿಧಾನ ಪರಿಷತ್ತಿನಿಂದ ಚುನಾಯಿತರಾದ ಒಬ್ಬೊಬ್ಬ ಸದಸ್ಯರು.

**21. ಪದಾವಧಿ.–** (1) ಈ ಅಧಿನಿಯಮದ ಅಡಿಯಲ್ಲಿಯ ಯಾವುದೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ಸದಸ್ಯನು ಸಂಬಂಧಪಟ್ಟ ನಾಮನಿರ್ದೇಶಿಸುವ ಪ್ರಾಧಿಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು. ಈ ಅಧಿನಿಯಮದ ಅಡಿಯಲ್ಲಿಯ ಯಾವುದೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ವ್ಯಕ್ತಿಯು ಎರಡನೇ ಅವಧಿಗಾಗಿ ನಾಮನಿರ್ದೇಶಿತನಾಗುವುದಕ್ಕೆ ಅಥವಾ ಚುನಾಯಿತನಾಗುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ:

ಪರಂತು, ನಾಮನಿರ್ದೇಶಿತನಾದ ಒಬ್ಬ ಪ್ರಶಾಸನ ಸಭೆಯ ಸದಸ್ಯನು, ಯಾವ ಹುದ್ದೆಯ ಕಾರಣದಿಂದ ತಾನು ಪ್ರಶಾಸನ ಸಭೆಯ ಸದಸ್ಯನಾಗುವನೋ ಅಂಥ ಒಂದು ಹುದ್ದೆಗೆ ತಾತ್ಕಲಿಕವಾಗಿ ನೇಮಕನಾಗಿರುವಲ್ಲಿ ತಾನು ನೇಮಕನಾದ ಹುದ್ದೆಯ ಪ್ರಭಾರವನ್ನು ತೆಗೆದುಕೊಂಡ ದಿನದಿಂದ ಏಳು ದಿನಗಳ ಒಳಗೆ ತಾನು ಸಹಿಮಾಡಿದ ಲಿಖಿತ ನೋಟೀಸನ್ನು ಕುಲಪತಿಯವರಿಗೆ ನೀಡಿ ತನ್ನ ನಾಮ ನಿರ್ದೇಶನದ ಬಲದಿಂದ ಪ್ರಶಾಸನ ಸಭೆಯ ಸದಸ್ಯನಾಗಿ ಮುಂದುವರೆಯುವನೋ ಅಥವಾ ಅಂಥ ಸದಸ್ಯನ ಪದವನ್ನು ಬಿಟ್ಟುಕೊಟ್ಟು ಹುದ್ದೆಯ ಬಲದಿಂದ ಪದನಿಮಿತ್ತ ಸದಸ್ಯನಾಗುವುದನ್ನು ಆಯ್ಕೆ ಮಾಡಿಕೊಳ್ಳುವನೋ ಎಂಬುದನ್ನು ತಿಳಿಸತಕ್ಕದ್ದು ಮತ್ತು ಸದರಿ ಆಯ್ಕೆಯು ಅಂತಿಮವಾಗಿರತಕ್ಕದ್ದು, ಅಂಥ ಆಯ್ಕೆಯನ್ನು ಮಾಡಲು ತಪ್ಪಿದರೆ ಅವನು ನಾಮನಿರ್ದೇಶಿತ ಸದಸ್ಯನಾಗಿ ತನ್ನ ಸ್ಥಾನವನ್ನು ಖಾಲಿಮಾಡಿದ್ದಾನೆಂದು ಭಾವಿಸತಕ್ಕದ್ದು.

(2) ಒಬ್ಬ ವ್ಯಕ್ತಿಯು ಪ್ರಶಾಸನಸಭೆಯ ಸದಸ್ಯನಾಗಿರುವುದು ನಿಂತುಹೋದಾಗ, ಅವನು ಪ್ರಶಾಸನ ಸಭೆಯ ಸದಸ್ಯನಾಗಿರುವ ಬಲದಿಂದ ವಿಶ್ವವಿದ್ಯಾಲಯದ ಯಾವುದೇ ಇತರ ಪ್ರಾಧಿಕಾರದ ಸದಸ್ಯನಾಗಿರುವುದೂ ನಿಂತುಹೋಗತಕ್ಕದ್ದು.

(3) ಪ್ರಶಾಸನ ಸಭೆಯ ಸದಸ್ಯನು, ಅನುಮತಿಸಬಹುದಾದಂಥ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಗಳ ಹೊರತಾಗಿ ವಿಶ್ವವಿದ್ಯಾಲಯದಿಂದ ಯಾವುದೇ ಸಂಭಾವನೆಯನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ ;

ಪರಂತು, (3)ನೇ ಉಪ ಪ್ರಕರಣದಲ್ಲಿ ಇರುವುದಾವುದೂ, ಯಾವ ಸದಸ್ಯನನ್ನೂ ಆತನು ತಾನು ಧಾರಣಮಾಡಿದ ಹುದ್ದೆಯ ಬಲದಿಂದ ಹಕ್ಕುಳ್ಳವನಾಗಿರುವ ತನ್ನ ವಾಡಿಕೆಯ ಉಪಲಬ್ಧಿಗಳನ್ನು ಪಡೆದುಕೊಳ್ಳದಂತೆ ತಡೆಯತಕ್ಕದ್ದಲ್ಲ.

(4) ಪದನಿಮಿತ್ತ ಸದಸ್ಯನಲ್ಲದ ಒಬ್ಬ ಪ್ರಶಾಸನಸಭೆಯ ಸದಸ್ಯನು ತನ್ನ ಪದಾವಧಿಯು ಮುಕ್ತಾಯವಾಗುವ ಮೊದಲು ಯಾವುದೇ ಸಮಯದಲ್ಲಿ ತನ್ನ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಬಹುದು. ಅಂಥ

ರಾಜೀನಾಮೆಯನ್ನು ಸದಸ್ಯನು ಲಿಖಿತಪತ್ರದ ಮೂಲಕ ಕುಲಾಧಿಪತಿಯವರಿಗೆ ಕಳುಹಿಸಿಕೊಡತಕ್ಕದ್ದು ಮತ್ತು ರಾಜೀನಾಮೆಯು, ಕುಲಾಧಿಪತಿಯವರು ಅಂಗೀಕರಿಸಿದ ದಿನಾಂಕದಿಂದ ಪರಿಣಾಮಕ್ಕೆ ಬರತಕ್ಕದ್ದು.

(5) ಯಾವುವೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ಸದಸ್ಯನು, ಕುಲಾಧಿಪತಿಯವರು ಯಾವುದೇ ಸಮಯದಲ್ಲಿ ಆತನ ದುರ್ವ್ಯವಹಾರ, ದುರ್ನಡತೆ ಅಥವಾ ಅನ್ಯ ಕಾರಣದ ಮೇಲೆ ಆ ಬಗ್ಗೆ ವಿಚಾರಣೆ ನಡೆಸಿದ ತರುವಾಯ ಸದಸ್ಯತ್ವದಿಂದ ತೆಗೆದುಹಾಕುವುದಕ್ಕೆ ಬದ್ಧನಾಗಿರತಕ್ಕದ್ದು.

**22. ಪ್ರಶಾಸನ ಸಭೆಯ ಅಧಿಕಾರಗಳು.–** ಪ್ರಶಾಸನ ಸಭೆಯು ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು ವಿಶ್ವವಿದ್ಯಾಲಯದ ಆಡಳಿತಾತ್ಮಕ ಕಾರ್ಯನೀತಿಗಳು, ಕಾರ್ಯಕ್ರಮಗಳು ಮತ್ತು ಪ್ರಕಾರ್ಯಗಳ ನಿರ್ವಹಣೆಯ ಪರಿಶೀಲನೆಮಾಡತಕ್ಕದ್ದು, ಮತ್ತು ಈ ಮುಂದಿನ ಅಧಿಕಾರಗಳನ್ನು ಮತ್ತು ಪ್ರಕಾರ್ಯಗಳನ್ನು ಹೊಂದಿರತಕ್ಕದ್ದು, ಎಂದರೆ :–

(1) ವಿಶ್ವವಿದ್ಯಾಲಯದ ಆಡಳಿತಾತ್ಮಕ ಕಾರ್ಯನೀತಿಗಳನ್ನು ಮತ್ತು ಕಾರ್ಯಕ್ರಮಗಳನ್ನು ಮತ್ತು ಕಾರ್ಯ ನಿರ್ವಹಣೆಯನ್ನು ಕಾಲಕಾಲಕ್ಕೆ ಪರಿಶೀಲಿಸುವುದು ಮತ್ತು ವಿಶ್ವವಿದ್ಯಾಲಯದ ಸುಧಾರಣೆಗಾಗಿ ಕ್ರಮಗಳನ್ನು ಸಲಹೆಮಾಡುವುದು ;

(2) ಸಲಹೆಗಾಗಿ ಕಳುಹಿಸಿಕೊಡಬಹುದಾದ ಯಾವುದೇ ವಿಷಯದ ಸಂಬಂಧದಲ್ಲಿ ಕುಲಾಧಿಪತಿಯವರಿಗೆ ಸಲಹೆ ನೀಡುವುದು ;

(3) ಅದು ನಿರ್ಧರಿಸಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಉದ್ದೇಶಗಳಿಗಾಗಿ ಇತರೆ ವಿಶ್ವವಿದ್ಯಾಲಯಗಳೊಡನೆ, ಇತರ ಪ್ರಶಿಕ್ಷಣ ಪ್ರಾಧಿಕಾರಗಳೊಡನೆ ಮತ್ತು ಕಾಲೇಜುಗಳೊಡನೆ ಸಹಕರಿಸುವುದು;

(4) ಸಂಗೀತ ಮತ್ತು ಪ್ರದರ್ಶಕ ಕಲೆಗಳಲ್ಲಿ ಸಂಶೋಧನೆಯ ಮುಂದುವರಿಕೆ ಮತ್ತು ಜ್ಞಾನದ ಪ್ರಸಾರಕ್ಕಾಗಿ ಅವಕಾಶ ಕಲ್ಪಿಸುವುದು ;

(5) ವಿಶ್ವವಿದ್ಯಾಲಯಕ್ಕೆ ಅಗತ್ಯವಾದ ಉಪನ್ಯಾಸಕರ, ರೀಡರುಗಳ, ಪ್ರಾಧ್ಯಾಪಕರ ಮತ್ತು ಯಾವುದೇ ಇತರ ಅಧ್ಯಾಪಕ ವರ್ಗದ ಅಥವಾ ಸಂಶೋಧನೆಯ ಹುದ್ದೆಗಳನ್ನು ಪ್ರಾರಂಭಿಸುವುದು ;

(6) ಪದವಿಗಳು, ಡಿಪ್ಲೋಮ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರಾರಂಭಿಸುವುದು ;

(7) ನಿಯಮಿಸಬಹುದಾದ ಷರತ್ತುಗಳಿಗೊಳಪಟ್ಟು ಸಂಶೋಧನೆ ನಡೆಸುವ ವ್ಯಕ್ತಿಗಳಿಗೆ ಪದವಿಗಳು, ಡಿಪ್ಲೋಮ ಮತ್ತು ಇತರ ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನಮಾಡುವುದು ;

(8) ಪ್ರಶಾಸನ ಸಭೆಯ ಸದಸ್ಯರ ಪೈಕಿ ಮೂರನೆ ಎರಡಕ್ಕಿಂತ ಕಡಿಮೆಯಿಲ್ಲದ ಸದಸ್ಯರು ಶಿಫಾರಸ್ಸು ಮಾಡಿದ ಗೌರವ ಪದವಿಗಳು ಅಥವಾ ಇತರ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು.

(9) ಶಾಸನಗಳಿಗೆ ಅನುಸಾರವಾಗಿ, ಫೆಲೋಷಿಪ್‌ಗಳು, ವಿದ್ಯಾರ್ಥಿವೇತನಗಳು, ಬರ್ಸರಿಗಳು, ಪ್ರದರ್ಶಿಕೆಗಳು, ಪದಕಗಳು ಮತ್ತು ಪಾರಿತೋಷಕಗಳನ್ನು ಪ್ರಾರಂಭಿಸುವುದು ಮತ್ತು ಅವುಗಳನ್ನು ನೀಡುವುದು.

(10) ವಾರ್ಷಿಕ ವರದಿ, ವಾರ್ಷಿಕ ಲೆಕ್ಕಪತ್ರಗಳು, ಮತ್ತು ಹಣಕಾಸು ಅಂದಾಜುಗಳನ್ನು ಪರಿಗಣಿಸುವುದು ಮತ್ತು ಅವುಗಳ ಬಗ್ಗೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಕ್ರಮಕೈಗೊಳ್ಳುವುದು.

(11) ಯಾವುದೇ ಸಂಸ್ಥೆಯ ಆಡಳಿತವನ್ನು ವಹಿಸಿಕೊಳ್ಳುವುದಕ್ಕಾಗಿ ಮತ್ತು ಅದರ ಆಸ್ತಿಗಳನ್ನು ಮತ್ತು ಹೊಣೆಗಾರಿಕೆಗಳನ್ನು ವಹಿಸಿಕೊಳ್ಳುವುದಕ್ಕಾಗಿ ಅಥವಾ ಈ ಅಧಿನಿಯಮದ ಉಪಬಂಧಗಳಿಗೆ ವಿರೋಧವಾಗಿರದ ಯಾವುದೇ ಇತರ ಉದ್ದೇಶಗಳಿಗಾಗಿ ಕೇಂದ್ರ ಅಥವಾ ಯಾವುದೇ ಇತರ ರಾಜ್ಯ ಸರ್ಕಾರದೊಡನೆ ಅಥವಾ ಖಾಸಗಿ ಸಂಸ್ಥೆಯೊಡನೆ ಯಾವುದೇ ಒಪ್ಪಂದ ಮಾಡಿಕೊಳ್ಳುವುದು;

(12) ವಿಶ್ವವಿದ್ಯಾಲಯದ ಸ್ವತ್ತುಗಳ ಮತ್ತು ನಿಧಿಗಳನ್ನು ಧಾರಣ ಮಾಡುವುದು, ನಿಯಂತ್ರಿಸುವುದು ಮತ್ತು ಆಡಳಿತ ನಡೆಸುವುದು.

(13) ವಿಶ್ವವಿದ್ಯಾಲಯದ ಸಾಮಾನ್ಯ ಮೊಹರಿನ ಸ್ವರೂಪ, ಅಭಿರಕ್ಷೆ ಮತ್ತು ಬಳಕೆಯನ್ನು ನಿರ್ದೇಶಿಸುವುದು;

(14) ಈ ಅಧಿನಿಯಮಕ್ಕೆ ಮತ್ತು ಶಾಸನಗಳಿಗೆ ಅನುಸಾರವಾಗಿ ವಿಶ್ವವಿದ್ಯಾಲಯಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನು ವಿನಿಯಮಗೊಳಿಸುವುದು ಮತ್ತು ನಿರ್ಧರಿಸುವುದು;

(15) ನಿರ್ದಿಷ್ಟ ಉದ್ದೇಶಗಳಿಗಾಗಿ ವಿಶ್ವವಿದ್ಯಾಲಯದ ವಿಲೆಗಾಗಿ ಒಪ್ಪಿಸಿದ ಎಲ್ಲ ಸ್ವತ್ತುಗಳ ಮತ್ತು ಎಲ್ಲ ನಿಧಿಗಳ ಆಡಳಿತ ನಡೆಸುವುದು;

(16) (ಎ) ವಿಶ್ವವಿದ್ಯಾಲಯದ ಉಪನ್ಯಾಸಕರು, ವಿಶ್ವವಿದ್ಯಾಲಯದ ರೀಡರ್‌ಗಳು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ವಿಶ್ವವಿದ್ಯಾಲಯದ ಸಂಶೋಧಕರು ಮತ್ತು ವಿಶ್ವವಿದ್ಯಾಲಯದ ಅಧ್ಯಾಪಕರನ್ನು ನೇಮಕ ಮಾಡುವುದು ಮತ್ತು ಅವರ ಉಪಲಬ್ಧಿಗಳು ಯಾವುದಾದರು ಇದ್ದರೆ ಅದನ್ನು ನಿಗದಿಪಡಿಸುವುದು; ಅವರ ಕರ್ತವ್ಯಗಳನ್ನು ಮತ್ತು ಸೇವಾ ಷರತ್ತುಗಳನ್ನು ನಿರ್ದಿಷ್ಟಪಡಿಸುವುದು ಮತ್ತು ತಾತ್ಕಾಲಿಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ;

(ಬಿ) ಆಡಳಿತಾತ್ಮಕ ಮತ್ತು ಅದೇರೀತಿಯ ಇತರ ಹುದ್ದೆಗಳ ನೇಮಕದ ವಿಧಾನವನ್ನು ನಿರ್ದಿಷ್ಟಪಡಿಸುವ ಶಾಸನಗಳನ್ನು ರಚಿಸುವುದು ಮತ್ತು ಅವರ ಉಪಲಬ್ಧಿಗಳು ಯಾವುದಾದರೂ ಇದ್ದರೆ ಅವುಗಳನ್ನು ನಿಗದಿಪಡಿಸುವುದು ಅವರ ಕರ್ತವ್ಯಗಳನ್ನು ಮತ್ತು ಸೇವಾ ಷರತ್ತುಗಳನ್ನು ನಿರ್ದಿಷ್ಟಪಡಿಸುವುದು ಮತ್ತು ತಾತ್ಕಾಲಿಕ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವುದು ;

(17) ವಿಶ್ವವಿದ್ಯಾಲಯದ ಉಪನ್ಯಾಸಕರು, ವಿಶ್ವವಿದ್ಯಾಲಯದ ರೀಡರ್‌ಗಳು, ವಿಶ್ವವಿದ್ಯಾಲಯದ ಪ್ರಾಧ್ಯಾಪಕರು, ವಿಶ್ವವಿದ್ಯಾಲಯದ ಸಂಶೋಧಕರು ಮತ್ತು ವಿಶ್ವವಿದ್ಯಾಲಯದ ಅಧ್ಯಾಪಕರು ಮತ್ತು ವಿಶ್ವವಿದ್ಯಾಲಯದ ಇತರ ನೌಕರರನ್ನು ಅಮಾನತ್ತು ಮಾಡುವುದು ಮತ್ತು ವಜಾಮಾಡುವುದು;

(18) ವಿಶ್ವವಿದ್ಯಾಲಯದ ಪರವಾಗಿ ದತ್ತಿಗಳನ್ನು, ಉಯಿಲುದಾನ, ದೇಣಿಗೆಗಳನ್ನು, ಅನುದಾನಗಳನ್ನು ಮತ್ತು ಅದಕ್ಕೆ ವರ್ಗಾವಣೆ ಮಾಡಿದ ಸ್ಥಿರ ಮತ್ತು ಚರ ಸ್ವತ್ತುಗಳನ್ನು ಸ್ವೀಕರಿಸುವುದು.

(19) (ಎ) ವಿಶ್ವವಿದ್ಯಾಲಯದ ಪರವಾಗಿ ಕೇಂದ್ರ ಅಥವಾ ರಾಜ್ಯ ಸರ್ಕಾರದಿಂದ ಮತ್ತು ವಿಶ್ವವಿದ್ಯಾಲಯದ ಅನುದಾನ ಆಯೋಗದಿಂದ ಅಥವಾ ಸಾರ್ವಜನಿಕರಿಂದ ಅಥವಾ ಕೇಂದ್ರ ಅಥವಾ ರಾಜ್ಯ ಸರ್ಕಾರದ ಸ್ವಾಮ್ಯದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮದಿಂದ ಸಾಲಗಳನ್ನು ಎತ್ತುವುದು ;

(ಬಿ) ಸರ್ಕಾರದ ಅನುಮೋದನೆಯೊಡನೆ ವಿಶ್ವವಿದ್ಯಾಲಯದ ಉದ್ದೇಶಕ್ಕಾಗಿ ವಿಶ್ವವಿದ್ಯಾಲಯದ ಭದ್ರತೆ ಮೇಲೆ ಹಣವನ್ನು ಸಾಲವಾಗಿ ಪಡೆಯುವುದು ;

(20) ವಿದ್ಯಾರ್ಥಿನಿಲಯಗಳ ತಪಾಸಣೆಗಾಗಿ ವ್ಯವಸ್ಥೆ ಮಾಡುವುದು ಮತ್ತು ನಿರ್ದೇಶಿಸುವುದು ;

(21) ಶಾಸನಗಳ ಮೂಲಕ ನಿಯಮಿಸಬಹುದಾದಂತಹ ಇತರ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಪ್ರಕಾರ್ಯಗಳನ್ನು ನೆರವೇರಿಸುವುದು ;

(22) ಶಾಸನಗಳನ್ನು ರಚಿಸುವುದು ಅಥವಾ ಶಾಸನಗಳನ್ನು ತಿದ್ದುಪಡಿ ಮಾಡುವುದು ಅಥವಾ ನಿರಸನಗೊಳಿಸುವುದು.

**23. ಪ್ರಶಾಸನ ಸಭೆಯ ಸಭೆಗಳು.– (1)** ಪ್ರಶಾಸನ ಸಭೆಯು ಪ್ರತಿಯೊಂದು ವರ್ಷದಲ್ಲಿ ಕುಲಾಧಿಪತಿಯವರು ನಿಗದಿಪಡಿಸುವ ದಿನಾಂಕದಂದು ಕೊನೆಯ ಪಕ್ಷ ಮೂರುಸಲವಾದರೂ ಸಭೆ ಸೇರತಕ್ಕದ್ದು. ಅಂಥ ಸಭೆಗಳಲ್ಲಿ ಒಂದನ್ನು ವಾರ್ಷಿಕ ಸಭೆ ಎಂದು ಕರೆಯತಕ್ಕದ್ದು. ಪ್ರಶಾಸನ ಸಭೆಯು ತಾನು ಕಾಲಕಾಲಕ್ಕೆ ನಿರ್ಧರಿಸಬಹುದಾದಂತಹ ಇತರ ಸಮಯಗಳಲ್ಲಿ ಸಭೆ ಸೇರಬಹುದು;

(2) ಒಟ್ಟು ಸದಸ್ಯರ ಸಂಖ್ಯೆಯ ಮೂರನೇ ಒಂದರಷ್ಟು ಸದಸ್ಯರು ಪ್ರಶಾಸನ ಸಭೆಯ ಕೋರಂ ಆಗಿರತಕ್ಕದ್ದು ;

ಪರಂತು ಅಂಥ ಕೋರಂ, ವಿಶ್ವವಿದ್ಯಾಲಯದ ಘಟಿಕೋತ್ಸವದ ಸಭೆಗಾಗಿ ಪದವಿ ಡಿಪ್ಲೋಮಾ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳ ಪ್ರದಾನ ಮಾಡುವ ಉದ್ದೇಶಕ್ಕಾಗಿ ನಡೆದ ಪ್ರಶಾಸನ ಸಭೆಯಲ್ಲಿ ಅಗತ್ಯವಿರತಕ್ಕದ್ದಲ್ಲ;

**(3)** ಕುಲಾಧಿಪತಿಯವರು, ಅವರು ಸೂಕ್ತವೆಂದು ಭಾವಿಸಿದಾಗ ಮತ್ತು ಪ್ರಶಾಸನ ಸಭೆಯ ಸದಸ್ಯರ ಶೇಕಡಾ ಐವತ್ತಕ್ಕೆ ಕಡಿಮೆ ಅಲ್ಲದಷ್ಟು ಸದಸ್ಯರು ಸಹಿಮಾಡಿ ಲಿಖಿತದಲ್ಲಿ ನೀಡಿದ ಕೋರಿಕೆಯ ಮೇರೆಗೆ ಪ್ರಶಾಸನ ಸಭೆಯ ವಿಶೇಷ ಸಭೆಯನ್ನು ಕರೆಯಬಹುದು.

**24. ಪ್ರಶಿಕ್ಷಣ ಪರಿಷತ್ತು.–** (1) ಕುಲಾಧಿಪತಿಯವರು, ಪ್ರಥಮ ಕುಲಪತಿಯವರ ನೇಮಕವಾದ ಕೂಡಲೆ ಪ್ರಶಿಕ್ಷಣ ಪರಿಷತ್ತನ್ನು ರಚಿಸತಕ್ಕದ್ದು.

(2) ಪ್ರಶಿಕ್ಷಣ ಪರಿಷತ್ತು ಕುಲಪತಿಯವರ ಜೊತೆಗೆ ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು ಎಂದರೆ:–

(ಎ) ಉನ್ನತ ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ;

(ಬಿ) ಆರ್ಥಿಕ ಇಲಾಖೆಯ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ.

(ಸಿ) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರ ಹೊಂದಿರುವ ಸರ್ಕಾರದ ಕಾರ್ಯದರ್ಶಿ.

(ಡಿ) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ.

(ಇ) ಫ್ಯಾಕಲ್ಟಿಗಳ ಡೀನರು.

(ಎಫ್) ಸರ್ಕಾರವು ನಾಮ ನಿರ್ದೇಶನ ಮಾಡಿದ ಗೇಯ ಸಂಗೀತ, ಪ್ರದರ್ಶಕ ಕಲೆಗಳು, ವಾದ್ಯ ಸಂಗೀತ ಮತ್ತು ಸಂಗೀತ ಶಾಸ್ತ್ರದ ಕ್ಷೇತ್ರಗಳಲ್ಲಿ ಅಸಾಧಾರಣ ಕೊಡುಗೆ ನೀಡಿರುವಂಥ ಖ್ಯಾತ ನಾಮರಾದ ಎಂಟು ಜನರು. ಅವರಲ್ಲಿ ಒಬ್ಬರು ಪರಿಶಿಷ್ಟಜಾತಿಗೆ ಸೇರಿದವರಾಗಿರತಕ್ಕದ್ದು, ಇನ್ನೊಬ್ಬರು ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರತಕ್ಕದ್ದು, ಒಬ್ಬರು ಮಹಿಳೆಯಾಗಿರತಕ್ಕದ್ದು, ಒಬ್ಬರು ಮತೀಯ ಆಧಾರದ ಮೇಲೆ ಅಲ್ಪಸಂಖ್ಯಾತರಾಗಿರತಕ್ಕದ್ದು ಮತ್ತು ಒಬ್ಬರು ಸರ್ಕಾರವು ನಿರ್ದಿಷ್ಟಪಡಿಸಿದ ಹಿಂದುಳಿದ ವರ್ಗಗಳಿಗೆ ಸೇರಿದವರಾಗಿರತಕ್ಕದ್ದು.

(3) ಕುಲಪತಿಯವರು ಪ್ರಶಿಕ್ಷಣ ಪರಿಷತ್ತಿನ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು.

(4) ಶಿಕ್ಷಣ ಇಲಾಖೆ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಆರ್ಥಿಕ ಇಲಾಖೆ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ ಅಥವಾ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಪ್ರಭಾರದಲ್ಲಿರುವ ಕಾರ್ಯದರ್ಶಿ ಇವರು ಯಾವುದೇ ಕಾರಣಕ್ಕಾಗಿ ಪ್ರಶಿಕ್ಷಣ ಪರಿಷತ್ತಿನ ಸಭೆಗಳಿಗೆ ಹಾಜರಾಗಲು ಸಾಧ್ಯವಾಗದ ಸಂದರ್ಭದಲ್ಲಿ ಸರ್ಕಾರದ ಉಪ ಕಾರ್ಯದರ್ಶಿಯ ದರ್ಜೆಗೆ ಕಡಿಮೆಯಲ್ಲದ ತನ್ನ ಇಲಾಖೆಯ ಯಾವೊಬ್ಬ ಅಧಿಕಾರಿಯನ್ನು ಪ್ರತಿನಿಯೋಜಿಸಬಹುದು.

(5) ಈ ಅಧಿನಿಯಮದ ಅಡಿಯಲ್ಲಿಯ ಯಾವುದೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ಸದಸ್ಯನು ಸಂಬಂಧಪಟ್ಟ ನಾಮನಿರ್ದೇಶಿಸುವ ಪ್ರಾಧಿಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು. ಈ ಅಧಿನಿಯಮದ ಅಡಿಯಲ್ಲಿಯ ಯಾವುದೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ವ್ಯಕ್ತಿಯು ಎರಡನೇ ಅವಧಿಗಾಗಿ ನಾಮನಿರ್ದೇಶಿತನಾಗುವುದಕ್ಕೆ ಅಥವಾ ಚುನಾಯಿತನಾಗುವುದಕ್ಕೆ ಅರ್ಹನಾಗಿರತಕ್ಕದ್ದಲ್ಲ ;

ಪರಂತು, ನಾಮನಿರ್ದೇಶಿತನಾದ ಒಬ್ಬ ಪ್ರಶಿಕ್ಷಣ ಪರಿಷತ್ತಿನ ಸದಸ್ಯನು, ಯಾವ ಹುದ್ದೆಯ ಕಾರಣದಿಂದ ತಾನು ಪ್ರಶಿಕ್ಷಣ ಪರಿಷತ್ತಿನ ಸದಸ್ಯನಾಗುವನೋ ಅಂಥ ಒಂದು ಹುದ್ದೆಗೆ ತಾತ್ಕಾಲಿಕವಾಗಿ ನೇಮಕನಾದಲ್ಲಿ, ತಾನು ನೇಮಕನಾದ ಹುದ್ದೆಯ ಪ್ರಭಾರವನ್ನು ತೆಗೆದುಕೊಂಡ ದಿನದಿಂದ ಏಳು ದಿನಗಳ ಒಳಗೆ, ತಾನು ಸಹಿಮಾಡಿದ ಲಿಖಿತ ನೋಟೀಸನ್ನು ಕುಲಪತಿಯವರಿಗೆ ನೀಡಿ, ತನ್ನ ನಾಮ ನಿರ್ದೇಶನದ ಬಲದಿಂದ ಪ್ರಶಿಕ್ಷಣ ಪರಿಷತ್ತಿನ ಸದಸ್ಯನಾಗಿ ಮುಂದುವರೆಯುವನೇ ಅಥವಾ ಅಂಥ ಸದಸ್ಯನ ಪದವನ್ನು ಬಿಟ್ಟುಕೊಟ್ಟು ಹುದ್ದೆಯ ಬಲದಿಂದ ಪದನಿಮಿತ್ತ ಸದಸ್ಯನಾಗುವುದನ್ನು ಆಯ್ಕೆ ಮಾಡಿಕೊಳ್ಳುವನೇ ಎಂಬುದನ್ನು ತಿಳಿಸತಕ್ಕದ್ದು ಮತ್ತು ಸದರಿ ಆಯ್ಕೆಯು ಅಂತಿಮವಾಗಿರತಕ್ಕದ್ದು, ಅಂಥ ಆಯ್ಕೆಯನ್ನು ಮಾಡಲು ತಪ್ಪಿದರೆ ಅವನು ನಾಮನಿರ್ದೇಶಿತ ಸದಸ್ಯನಾಗಿ ತನ್ನ ಸ್ಥಾನವನ್ನು ಖಾಲಿಮಾಡಿದ್ದಾನೆಂದು ಭಾವಿಸತಕ್ಕದ್ದು.

(6) ಒಬ್ಬ ವ್ಯಕ್ತಿಯು ಪ್ರಶಿಕ್ಷಣ ಪರಿಷತ್ತಿನ ಸದಸ್ಯನಾಗಿರುವುದು ನಿಂತುಹೋದಾಗ, ಅವನು ಪ್ರಶಿಕ್ಷಣ ಪರಿಷತ್ತಿನ ಸದಸ್ಯನಾಗಿರುವ ಬಲದಿಂದ ವಿಶ್ವವಿದ್ಯಾಲಯದ ಯಾವುದೇ ಇತರ ಪ್ರಾಧಿಕಾರದ ಸದಸ್ಯನಾಗಿರುವುದೂ ನಿಂತುಹೋಗತಕ್ಕದ್ದು.

(7) ಪ್ರಶಿಕ್ಷಣ ಪರಿಷತ್ತಿನ ಸದಸ್ಯನು, ಅನುಮತಿಸಬಹುದಾದಂಥ ದಿನಭತ್ಯೆ ಮತ್ತು ಪ್ರಯಾಣ ಭತ್ಯೆಗಳ ಹೊರತಾಗಿ ವಿಶ್ವವಿದ್ಯಾಲಯದಿಂದ ಯಾವುದೇ ಸಂಭಾವನೆಯನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ:

ಪರಂತು, (3)ನೇ ಉಪ ಪ್ರಕರಣದಲ್ಲಿ ಇರುವುದಾವುದೂ ತಾನು ಧಾರಣಮಾಡಿದ ಹುದ್ದೆಯ ಬಲದಿಂದ ಹಕ್ಕುಳ್ಳವನಾಗಿರುವ ತನ್ನ ಸಾಮಾನ್ಯ ಉಪಲಬ್ಧಿಗಳನ್ನು ಪಡೆದುಕೊಳ್ಳದಂತೆ ಯಾವೊಬ್ಬ ಸದಸ್ಯನನ್ನು ತಡೆಯತಕ್ಕದ್ದಲ್ಲ.

(8) ಪದನಿಮಿತ್ತ ಸದಸ್ಯನಲ್ಲದ ಒಬ್ಬ ಪ್ರಶಿಕ್ಷಣ ಪರಿಷತ್ತಿನ ಸದಸ್ಯನು ತನ್ನ ಪದಾವಧಿಯು ಮುಕ್ತಾಯವಾಗುವ ಮೊದಲು ಯಾವುದೇ ಸಮಯದಲ್ಲಿ ತನ್ನ ಸದಸ್ಯತ್ವಕ್ಕೆ ರಾಜೀನಾಮೆ ಸಲ್ಲಿಸಬಹುದು. ಅಂಥ ರಾಜೀನಾಮೆಯನ್ನು ಸದಸ್ಯನು ಲಿಖಿತಪತ್ರದ ಮೂಲಕ ಕುಲಾಧಿಪತಿಯವರಿಗೆ ಕಳುಹಿಸಿಕೊಡತಕ್ಕದ್ದು ಮತ್ತು ರಾಜೀನಾಮೆಯು, ಕುಲಾಧಿಪತಿಯವರು ಅಂಗೀಕರಿಸಿದ ದಿನಾಂಕದಿಂದ ಪರಿಣಾಮಕ್ಕೆ ಬರತಕ್ಕದ್ದು.

**25. ಪ್ರಶಿಕ್ಷಣ ಪರಿಷತ್ತಿನ ಅಧಿಕಾರಗಳು.–** ಪ್ರಶಿಕ್ಷಣ ಪರಿಷತ್ತು ಈ ಮುಂದಿನ ಅಧಿಕಾರಗಳನ್ನು ಹೊಂದಿರತಕ್ಕದ್ದು ಎಂದರೆ,–

(1) ಅಧ್ಯಾಪಕರುಗಳ ವಿದ್ಯಾರ್ಹತೆಗಳನ್ನು ನೇಮಿಸುವುದು.

(2) ನಿಯಮಿಸಬಹುದಾದಂಥ ಶುಲ್ಕಗಳನ್ನು ವಿಧಿಸುವುದು ಮತ್ತು ಸಂಗ್ರಹಿಸುವುದು.

(3) ಶಾಸನಗಳಿಗನುಸಾರವಾಗಿ ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳಿಗೆ ಪ್ರವೇಶ ನೀಡುವುದನ್ನು ನಿಯಂತ್ರಿಸುವುದು.

(4) ಅಧ್ಯಯನ ಮಂಡಳಿಗಳಿಗೆ ಸದಸ್ಯರನ್ನು ನೇಮಕ ಮಾಡುವುದು.

(5) (ಎ) ಶಾಸನಗಳಲ್ಲಿ ಹೇಳಿದ ಕಾರ್ಯವಿಧಾನಕ್ಕೆ ಅನುಸಾರವಾಗಿ ಮಂಡಳಿಗಳ ಶಿಫಾರಸ್ಸನ್ನು ಪರಿಗಣಿಸಿದ ತರುವಾಯ ರೆಫರಿ ಮತ್ತು ಪರೀಕ್ಷಕರನ್ನು ನೇಮಕ ಮಾಡುವುದು.

(ಬಿ) ಅವರ ಸಂಭಾವನೆಗಳನ್ನು ನಿಗದಿಪಡಿಸುವುದು.

(6) ವಿಶ್ವವಿದ್ಯಾಲಯದ ನಿವಾಸದ ಮತ್ತು ಶಿಸ್ತಿನ ಮೇಲ್ವಿಚಾರಣೆ ಮತ್ತು ನಿಯಂತ್ರಣ ಮತ್ತು ಅವರ ಆರೋಗ್ಯ ಮತ್ತು ಕ್ಷೇಮವನ್ನು ತಿಳಿದುಕೊಳ್ಳುವುದಕ್ಕಾಗಿ ವ್ಯವಸ್ಥೆ ಮಾಡುವುದು.

(7) ವಿಶ್ವವಿದ್ಯಾಲಯಗಳು ಸ್ಥಾಪಿಸಿದ ಮತ್ತು ನಿರ್ವಹಿಸುತ್ತಿರುವ ಗ್ರಂಥಾಲಯಗಳು, ವಸ್ತು ಸಂಗ್ರಹಾಲಯಗಳು, ಸಂಶೋಧನಾ ಸಂಸ್ಥೆಗಳು ಮತ್ತು ಇತರೆ ಸಂಸ್ಥೆಗಳನ್ನು ಪ್ರಾರಂಭಿಸುವುದು ಮತ್ತು ನಿರ್ವಹಿಸುವುದು;

(8) ವಿಶ್ವವಿದ್ಯಾಲಯವು ಪ್ರಾರಂಭಿಸಿದ ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸುವುದು;

(9) ವಿಶ್ವವಿದ್ಯಾಲಯವು ಪ್ರಾರಂಭಿಸಿದ ಯಾವುದೇ ಪ್ರಸಾರಾಂಗವನ್ನು ನಿರ್ವಹಿಸುವುದು;

(10) ವಿಶ್ವವಿದ್ಯಾಲಯದೊಳಗೆ ಸಂಶೋಧನೆಗೆ ಉತ್ತೇಜಿಸುವುದು; ಮತ್ತು ಅಂಥ ಸಂಶೋಧನೆಯ ವರದಿಗಳನ್ನು ಕಾಲಕಾಲಕ್ಕೆ ಪಡೆದುಕೊಳ್ಳುವುದು;

(11) ಶೈಕ್ಷಣಿಕ ವಿಷಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ವಿನಿಯಮಗೊಳಿಸುವುದು;

(12) ಅಧ್ಯಯನ ವ್ಯಾಸಂಗ ಕ್ರಮಗಳನ್ನು ವಿನಿಯಮಗೊಳಿಸುವುದು;

(13) ವಿದ್ಯಾರ್ಥಿಗಳನ್ನು ಪರೀಕ್ಷೆಗಳಿಗೆ, ಪದವಿಗಳಿಗೆ, ಡಿಪ್ಲೋಮಗಳಿಗೆ, ಪ್ರಮಾಣಪತ್ರ ಕೋರ್ಸುಗಳಿಗೆ ಅಥವಾ ಇತರ ಶೈಕ್ಷಣಿಕ ಪ್ರಶಸ್ತಿಗಳಿಗೆ ಪ್ರವೇಶ ನೀಡತಕ್ಕ ವಿಷಯದ ಬಗ್ಗೆ ಪರೀಕ್ಷಾ ಯೋಜನೆಯನ್ನು ಮತ್ತು ಷರತ್ತುಗಳನ್ನು ವಿನಿಯಮಗೊಳಿಸುವುದು;

(14) ವಿಶ್ವವಿದ್ಯಾಲಯದ ವಿವಿಧ ಪರೀಕ್ಷೆಗಳ ಫಲಿತಾಂಶಗಳ ಘೋಷಣೆಯನ್ನು ವಿನಿಯಮಗೊಳಿಸುವುದು;

(15) ಕಾಲೇಜುಗಳಲ್ಲಿ ಮತ್ತು ಮಾನ್ಯತೆ ಪಡೆದ ಸಂಸ್ಥೆಗಳಲ್ಲಿ ಅಧ್ಯಯನ ಮತ್ತು ಬೋಧನೆಯನ್ನು ಸಮನ್ವಯಗೊಳಿಸುವುದನ್ನು ವಿನಿಯಮಗೊಳಿಸುವುದು;

(16) ವಿಶ್ವವಿದ್ಯಾಲಯದಲ್ಲಿ ಸಂಶೋಧನೆಗೆ ಉತ್ತೇಜನ ನೀಡುವುದಕ್ಕಾಗಿ ಮತ್ತು ಇತರ ವಿಶೇಷ ಅಧ್ಯಯನಗಳನ್ನು ಉತ್ತೇಜಿಸುವುದಕ್ಕಾಗಿ ಯೋಜನೆಗಳನ್ನು ರೂಪಿಸುವುದು;

(17) ಫ್ಯಾಕಲ್ಟಿಗಳಿಗೆ ವಿಷಯಗಳನ್ನು ಹಂಚಿಕೆ ಮಾಡುವುದಕ್ಕಾಗಿ ಪ್ರಸ್ತಾವಗಳನ್ನು ಮಾಡುವುದು ಮತ್ತು ತನ್ನ ಸದಸ್ಯರುಗಳನ್ನು ಫ್ಯಾಕಲ್ಟಿಗಳಿಗೆ ವಹಿಸಿಕೊಡುವುದು;

(18) ಪರೀಕ್ಷೆಗಳಿಗೆ ವಿದ್ಯಾರ್ಥಿಗಳ ಪ್ರವೇಶಕ್ಕೆ ಸಂಬಂಧಪಟ್ಟಂತೆ ವಿನಾಯತಿ ನೀಡುವುದಕ್ಕಾಗಿ ಮಾನದಂಡಗಳನ್ನು ನಿರ್ಧರಿಸುವುದು;

(19) ವಿಶ್ವವಿದ್ಯಾಲಯವು ಅಗತ್ಯಪಡಿಸಿದ ಪ್ರಾಧ್ಯಾಪಕರ, ರೀಡರುಗಳ, ಉಪನ್ಯಾಸಕರ, ಮತ್ತು ಇತರ ಅಧ್ಯಾಪಕರ ಹುದ್ದೆಗಳನ್ನು ಪ್ರಾರಂಭಿಸುವುದಕ್ಕಾಗಿ ಮತ್ತು ಅಂಥ ಹುದ್ದೆಗಳಿಗಾಗಿ ಕರ್ತವ್ಯಗಳನ್ನು ನಿಯಮಿಸುವುದಕ್ಕಾಗಿ ಪ್ರಸ್ತಾವಗಳನ್ನು ಮಾಡುವುದು;

(20) ಸಂಶೋಧನಾ ವೇತನಗಳು, ಪ್ರವಾಸಿ ಸಂಶೋಧನಾ ವೇತನಗಳು, ವಿದ್ಯಾರ್ಥಿವೇತನಗಳು, ಶಿಷ್ಯವೇತನಗಳು, ಅಥವಾ ಪ್ರಶಸ್ತಿಗಳನ್ನು ಪ್ರಾರಂಭಿಸುವುದು ಮತ್ತು ನೀಡುವುದಕ್ಕಾಗಿ ಪ್ರಸ್ತಾವಗಳನ್ನು ಮಾಡುವುದು;

(21) ಪರೀಕ್ಷೆಗಳ ಸಮತೆಯನ್ನು ನಿಯಮಿಸುವುದಕ್ಕಾಗಿ ವಿನಿಯಮಗೊಳಿಸುವುದು;

(22) ಪದವಿಗಳು, ಡಿಪ್ಲೋಮಗಳು ಮತ್ತು ಇತರೆ ಶೈಕ್ಷಣಿಕ ಪ್ರಶಸ್ತಿಗಳಿಗಾಗಿ ಅರ್ಹತೆ ನೀಡುವ ಸಂಬಂಧದಲ್ಲಿ ವಿಶ್ವವಿದ್ಯಾಲಯದಲ್ಲಿ ಅನುಮೋದಿತ ಅಧ್ಯಯನ ವ್ಯಾಸಂಗ ಕ್ರಮಗಳಿಂದ ವಿನಾಯಿತಿ ನೀಡುವುದನ್ನು ವಿನಿಯಮಗೊಳಿಸುವುದು;

(23) ಸಂಶೋಧನೆಗಾಗಿ ಮತ್ತು ಕಲಿಕೆಯ ಮುಂದುವರಿಕೆಗೆ ಮತ್ತು ಪ್ರಸಾರಕ್ಕಾಗಿ ಸೂಕ್ತವಾಗಬಹುದಾದಂಥ ಕಲಿಕೆ ಮತ್ತು ಅಧ್ಯಯನ ವ್ಯಾಸಂಗ ಕ್ರಮಗಳ ಶಾಖೆಗಳಲ್ಲಿ ಶಿಕ್ಷಣ, ಬೋಧನೆ ಮತ್ತು ತರಬೇತಿಗಾಗಿ ಅವಕಾಶ ಕಲ್ಪಿಸುವುದು;

(24) ಮಾನ್ಯತೆ ಪಡೆದ ಸಂಸ್ಥೆಗಳು ವ್ಯಾಸಂಗವಿಷಯಗಳಲ್ಲಿ ವಿಶೇಷ ಅಧ್ಯಯನ ಕೈಗೊಳ್ಳುವುದು ಸಾಧ್ಯವಾಗುವಂತೆ ಮಾಡಲು ಏರ್ಪಾಡುಗಳನ್ನು ಮಾಡುವುದು;

(25) ಈ ಅಧಿನಿಯಮದ ಅಥವಾ ಶಾಸನಗಳ ಮೂಲಕ ಅದಕ್ಕೆ ಪ್ರದಾನ ಮಾಡಬಹುದಾದ ಅಥವಾ ವಿಧಿಸಬಹುದಾದಂಥ ಇತರೆ ಅಧಿಕಾರಗಳನ್ನು ಚಲಾಯಿಸುವುದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸುವುದು;

(26) ಶಾಸನಗಳಿಗನುಸಾರವಾಗಿ ತನ್ನ ಯಾವುವೇ ಅಧಿಕಾರಗಳನ್ನು ಕುಲಪತಿಯವರಿಗೆ ಅಥವಾ ತನ್ನ ಸದಸ್ಯರ ಪೈಕಿಯಿಂದ ರಚಿಸಿದ ಸಮಿತಿಗೆ ಪ್ರತ್ಯಾಯೋಜಿಸುವುದು.

**26.. ಪ್ರಶಿಕ್ಷಣ ಪರಿಷತ್ತಿನ ಸಭೆಗಳು.-** (1) ಪ್ರಶಿಕ್ಷಣ ಪರಿಷತ್ತು ನಿಯಮಿಸಬಹುದಾದಂಥ ಸಮಯದಲ್ಲಿ ಮತ್ತು ಸ್ಥಳಗಳಲ್ಲಿ ಸಭೆ ಸೇರತಕ್ಕದ್ದು ಮತ್ತು (2) ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು ಸಭೆಯ ಕೋರಂ ಒಳಗೊಂಡಂತೆ ಅದರ ಸಭೆಯಲ್ಲಿ ವ್ಯವಹರಿಸಬೇಕಾದ ವಿಷಯಗಳ ಸಂಬಂಧದಲ್ಲಿ ನಿಯಮಿಸಬಹುದಾದಂಥ ಕಾರ್ಯವಿಧಾನ ನಿಯಮಗಳನ್ನು ಪಾಲಿಸತಕ್ಕದ್ದು:

ಪರಂತು, ಪ್ರಶಿಕ್ಷಣ ಪರಿಷತ್ತು ಪ್ರತಿ ಮೂರು ತಿಂಗಳಿಗೊಮ್ಮೆ ಸಭೆ ಸೇರತಕ್ಕದ್ದು;

(2) ಕುಲಪತಿಯವರು ಅಥವಾ ಅವರ ಗೈರು ಹಾಜರಿಯಲ್ಲಿ ಸದಸ್ಯರು ಆಯ್ಕೆ ಮಾಡಿದ ಯಾವೊಬ್ಬ ಸದಸ್ಯರು ಪ್ರಶಿಕ್ಷಣ ಪರಿಷತ್ತಿನ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(3) ಪ್ರಶಿಕ್ಷಣ ಪರಿಷತ್ತಿನ ಯಾವುದೇ ಸಭೆಯಲ್ಲಿ ಎಲ್ಲಾ ಪ್ರಶ್ನೆಗಳನ್ನು ಹಾಜರಿದ್ದ ಮತ್ತು ಮತ ಚಲಾಯಿಸುವ ಸದಸ್ಯರ ಬಹುಮತದಿಂದ ನಿರ್ಧರಿಸತಕ್ಕದ್ದು ಮತ್ತು ಮತಗಳು ಸಮನಾಗಿ ಬಂದ ಸಂದರ್ಭದಲ್ಲಿ ಕುಲಪತಿಯವರು ಅಥವಾ ಸಂದರ್ಭಾನುಸಾರ ಅಧ್ಯಕ್ಷತೆ ವಹಿಸಿದ ಸದಸ್ಯರು ಎರಡನೆಯ ಅಥವಾ ನಿರ್ಣಾಯಕ ಮತ ಚಲಾಯಿಸತಕ್ಕದ್ದು;

(4) (ಎ) ಪ್ರಶಿಕ್ಷಣ ಪರಿಷತ್ತು ಸಮಾಲೋಚನೆಯ ಉದ್ದೇಶಕ್ಕಾಗಿ, ಪರಿಶೀಲನೆಯಲ್ಲಿರುವ ಯಾವುದೇ ವಿಷಯದಲ್ಲಿ ವಾಸ್ತವಿಕ ಅನುಭವದ ವಿಶೇಷ ಜ್ಞಾನವಿರುವ ಯಾವೊಬ್ಬ ವ್ಯಕ್ತಿಯು ಯಾವುದೇ ಸಭೆಗೆ ಹಾಜರಾಗಲು ಆಹ್ವಾನಿಸಬಹುದು. ಅಂಥವ್ಯಕ್ತಿಯು ಸಭೆಯಲ್ಲಿ ಮಾತನಾಡಬಹುದು ಮತ್ತು ಅನ್ಯಥಾ ಈ ಸಭೆಯ ನಡೆವಳಿಗಳಲ್ಲಿ ಭಾಗವಹಿಸಬಹುದು, ಆದರೆ ಮತಚಲಾಯಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ;

(ಬಿ) ಹಾಗೆ ಆಹ್ವಾನಿಸಲಾದ ವ್ಯಕ್ತಿಯು, ಪ್ರಶಿಕ್ಷಣ ಪರಿಷತ್ತಿನ ಸದಸ್ಯನಿಗೆ ಅನುಮತಿಸಬಹುದಾದಂಥ ದಿನಭತ್ಯೆ ಮತ್ತು ಪ್ರಯಾಣ ಭತ್ಯೆ ಪಡೆಯಲು ಹಕ್ಕುಳ್ಳವನಾಗಿರತಕ್ಕದ್ದು;

**27. ಫ್ಯಾಕಲ್ಟಿಗಳ ರಚನೆ ಮತ್ತು ಪ್ರಕಾರ್ಯಗಳು.-** (1) ವಿಶ್ವವಿದ್ಯಾಲಯವು, ಗೇಯ (ಹಾಡುಗಾರಿಕೆ) ಸಂಗೀತ, ವಾದ್ಯ ಸಂಗೀತ, ಪ್ರದರ್ಶಕ ಕಲೆಗಳು, ಸಂಗೀತ ಶಾಸ್ತ್ರ ಮತ್ತು ಶಾಸನಗಳಿಂದ ನಿಯಮಿಸಬಹುದಾದಂಥ ಇತರ ಫ್ಯಾಕಲ್ಟಿಗಳನ್ನು ಹೊಂದಿರತಕ್ಕದ್ದು.

(2) ಫ್ಯಾಕಲ್ಟಿಗಳ ರಚನೆ ಮತ್ತು ಪ್ರಕಾರ್ಯಗಳು ಇತರ ಎಲ್ಲ ವಿಷಯಗಳಲ್ಲಿ, ನಿಯಮಿಸಬಹುದಾದಂತೆ ಇರತಕ್ಕದ್ದು.

(3) ಪ್ರತಿಯೊಂದು ಫ್ಯಾಕಲ್ಟಿಯು ಮೊದಲನೇ ಶಾಸನಗಳಲ್ಲಿ ನಿರ್ದಿಷ್ಟಪಡಿಸಬಹುದಾದಂಥ ವಿದ್ಯಾ ವಿಭಾಗಗಳನ್ನು ಒಳಗೊಂಡಿರತಕ್ಕದ್ದು.

**28. ಹಣಕಾಸು ಸಮಿತಿ.**- (1) ಹಣಕಾಸು ಸಮಿತಿಯು ಈ ಮುಂದಿನ ಸದಸ್ಯರನ್ನು ಒಳಗೊಂಡಿರತಕ್ಕದ್ದು, ಎಂದರೆ:-

(ಎ) ಕುಲಪತಿ,

(ಬಿ) ಹಣಕಾಸಿನ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ,

(ಸಿ) ಶಿಕ್ಷಣದ ಪ್ರಭಾರದಲ್ಲಿರುವ ಸರ್ಕಾರದ ಕಾರ್ಯದರ್ಶಿ,

(ಡಿ) ಪ್ರಶಿಕ್ಷಣ ಪರಿಷತ್ತು ತನ್ನ ಸದಸ್ಯರ ಪೈಕಿಯಿಂದ ನಾಮನಿರ್ದೇಶಿಸಿದ ಇಬ್ಬರು ಸದಸ್ಯರಲ್ಲಿ ಒಬ್ಬರು ಪ್ರಾಧ್ಯಾಪಕರಾಗಿರತಕ್ಕದ್ದು ಮತ್ತು ಇನ್ನೊಬ್ಬರು ಪ್ರಶಿಕ್ಷಣ ಪರಿಷತ್ತಿಗೆ ಕುಲಾಧಿಪತಿಯವರಿಂದ ನಾಮ ನಿರ್ದೇಶಿತರಾದ ವ್ಯಕ್ತಿಯಾಗಿರತಕ್ಕದ್ದು.

(2) ಯಾವುದೇ ಕಾರಣದಿಂದಾಗಿ (1)ನೇ ಉಪ-ಪ್ರಕರಣದ (ಬಿ) ಖಂಡ ಅಥವಾ (ಸಿ) ಖಂಡದಲ್ಲಿ ಉಲ್ಲೇಖಿಸಲಾದ ಅಧಿಕಾರಿಯು ಹಣಕಾಸು ಸಮಿತಿಯ ಯಾವುದೇ ಸಭೆಗೆ ಹಾಜರಾಗಲು ಅಸಮರ್ಥರಾದರೆ ಅವರು ಸರ್ಕಾರದ ಉಪ-ಕಾರ್ಯದರ್ಶಿ ದರ್ಜೆಗೆ ಕಡಿಮೆಯದಲ್ಲದ ದರ್ಜೆಯ ತನ್ನ ಇಲಾಖೆಯ ಯಾವೊಬ್ಬ ಅಧಿಕಾರಿಯನ್ನು ಅಂಥ ಸಭೆಯಲ್ಲಿ ಹಾಜರಿರಲು ಪ್ರತಿನಿಯೋಜಿಸಬಹುದು. ಅಧಿಕಾರಿ ಅಥವಾ ಪ್ರತಿನಿಯೋಜಿತ ವ್ಯಕ್ತಿಯು ಸಮಿತಿಯ ಚರ್ಚೆಗಳಲ್ಲಿ ಭಾಗವಹಿಸಲು ಮತ್ತು ಮತ ನೀಡಲು ಹಕ್ಕುಳ್ಳವನಾಗಿರತಕ್ಕದ್ದು.

(3) ಕುಲಪತಿಯವರು, ಹಣಕಾಸು ಸಮಿತಿಯ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು ಮತ್ತು ಹಣಕಾಸು ಅಧಿಕಾರಿಯು ಪದನಿಮಿತ್ತ ಕಾರ್ಯದರ್ಶಿಯಾಗಿರತಕ್ಕದ್ದು.

(4) ಪದನಿಮಿತ್ತ ಸದಸ್ಯರಲ್ಲದ ಹಣಕಾಸು ಸಮಿತಿಯ ಎಲ್ಲ ಸದಸ್ಯರು ಮೂರು ವರ್ಷಗಳ ಅವಧಿಯವರೆಗೆ ಪದಧಾರಣ ಮಾಡತಕ್ಕದ್ದು.

(5) ಹಣಕಾಸು ಸಮಿತಿಯ ಲೆಕ್ಕಪತ್ರಗಳನ್ನು ಪರೀಕ್ಷಿಸಲು ಮತ್ತು ವೆಚ್ಚಗಳ ಪ್ರಸ್ತಾವಗಳನ್ನು ಪರಿಶೀಲಿಸಲು ಕಡೇಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ಸಭೆ ಸೇರತಕ್ಕದ್ದು;

(6) ಹಣಕಾಸು ಅಧಿಕಾರಿಯು ಸಿದ್ಧಪಡಿಸಿದ ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕಪತ್ರಗಳನ್ನು ಪರ್ಯಾಲೋಚನೆ ಮತ್ತು ಟೀಕೆ-ಟಿಪ್ಪಣಿಗಳಿಗಾಗಿ ಹಣಕಾಸು ಸಮಿತಿಯ ಮುಂದೆ ಮಂಡಿಸತಕ್ಕದ್ದು ಮತ್ತು ತದನಂತರ ಅನುಮೋದನೆಗಾಗಿ ಪ್ರಶಾಸನ ಸಭೆಗೆ ಸಲ್ಲಿಸತಕ್ಕದ್ದು.

(7) ಹಣಕಾಸು ಸಮಿತಿಯು, ಉತ್ಪಾದನಾಪರ ಕಾರ್ಯಗಳ ಸಂದರ್ಭಗಳಲ್ಲಿ ಸಾಲಗಳಿಂದ ಬರುವ ಉತ್ಪತ್ತಿಗಳನ್ನು ಒಳಗೊಳ್ಳಬಹುದಾದ ವಿಶ್ವವಿದ್ಯಾಲಯದ ಆದಾಯ ಮತ್ತು ಸಂಪನ್ಮೂಲಗಳನ್ನು ಆಧರಿಸಿ ಆ ವರ್ಷದ ಒಟ್ಟು ಆವರ್ತಕ ವೆಚ್ಚ ಮತ್ತು ಒಟ್ಟು ಅನಾವರ್ತಕ ವೆಚ್ಚಗಳಿಗಾಗಿ ಪರಿಮಿತಿಗಳನ್ನು ಶಿಫಾರಸ್ಸು ಮಾಡತಕ್ಕದ್ದು.

(8) ಹಣಕಾಸು ಸಮಿತಿಯು,-

(ಎ) ವಿಶ್ವವಿದ್ಯಾಲಯದ ಹಣಕಾಸು ಸ್ಥಿತಿಯನ್ನು ಆಗಿಂದಾಗ್ಗೆ ಪುನರವಲೋಕನ ಮಾಡತಕ್ಕದ್ದು;

(ಬಿ) ವಾರ್ಷಿಕ ಹಣಕಾಸು ಅಂದಾಜುಗಳಲ್ಲಿ ಬಂಡವಾಳ ಹೂಡಿಕೆ ಅಥವಾ ವೆಚ್ಚಕ್ಕೆ ಯಾವುದೇ ಹಣದ ಏರ್ಪಾಡು ಮಾಡಿಲ್ಲದ ಅಥವಾ ವಾರ್ಷಿಕ ಹಣಕಾಸು ಅಂದಾಜುಗಳಲ್ಲಿ ಏರ್ಪಾಡು ಮಾಡಿರುವ ಮೊಬಲಗನ್ನು ಮೀರಿದ ವೆಚ್ಚವನ್ನು ಒಳಗೊಳ್ಳುವ ಪ್ರತಿಯೊಂದು ಪ್ರಸ್ತಾವದ ಬಗ್ಗೆ ಪ್ರಶಿಕ್ಷಣ ಪರಿಷತ್ತಿಗೆ ಶಿಫಾರಸ್ಸು ಮಾಡತಕ್ಕದ್ದು;

(ಸಿ) ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ನಿರ್ವಹಿಸುವುದಕ್ಕಾಗಿ ವಿಧಾನಗಳನ್ನು ಮತ್ತು ಪ್ರಕ್ರಿಯೆಗಳನ್ನು ಮತ್ತು ರೀತಿಗಳನ್ನು ನಿಯಮಿಸತಕ್ಕದ್ದು;

(ಡಿ) ವಿಶ್ವವಿದ್ಯಾಲಯದ ಹಣಕಾಸಿಗೆ ಸಂಬಂಧಪಟ್ಟ ಎಲ್ಲ ವಿಷಯಗಳ ಬಗ್ಗೆ ಪ್ರಶಿಕ್ಷಣ ಪರಿಷತ್ತಿಗೆ ಶಿಫಾರಸ್ಸುಗಳನ್ನು ಮಾಡತಕ್ಕದ್ದು; ಮತ್ತು

(ಇ) ನಿಯಮಿಸಬಹುದಾದಂಥ ಇತರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

(9) ಹಣಕಾಸು ಅಧಿಕಾರಿಯು ಸಿದ್ಧಪಡಿಸಿದ ವಿಶ್ವವಿದ್ಯಾಲಯದ ಹಣಕಾಸು ಅಂದಾಜುಗಳನ್ನು ಪರ್ಯಾಲೋಚನೆ ಮತ್ತು ಟೀಕೆ-ಟಿಪ್ಪಣಿಗಳಿಗಾಗಿ ಹಣಕಾಸು ಸಮಿತಿಯ ಮುಂದೆ ಮಂಡಿಸತಕ್ಕದ್ದು. ನಂತರ ಪರ್ಯಾಲೋಚನೆಗಾಗಿ, ಸದರಿ ಅಂದಾಜುಗಳನ್ನು ಹಣಕಾಸು ಸಮಿತಿಯಿಂದ ಮಾರ್ಪಾಟಾದ ರೂಪದಲ್ಲಿ ಪ್ರಶಿಕ್ಷಣ ಪರಿಷತ್ತಿನ ಮುಂದೆ ಮಂಡಿಸತಕ್ಕದ್ದು. ಪ್ರಶಿಕ್ಷಣ ಪರಿಷತ್ತು ಹಣಕಾಸು ಸಮಿತಿಯು ಮಾಡಿದ ಮಾರ್ಪಾಡುಗಳನ್ನು ಅಂಗೀಕರಿಸಬಹುದು.

**29. ಅಧ್ಯಯನ ಮಂಡಲಿಗಳು.-** ಪ್ರತಿಯೊಂದು ಬೋಧನಾ ವಿಭಾಗಕ್ಕೆ ಲಗತ್ತಾಗಿ ಸೇರಿದಂತೆ ಅಧ್ಯಯನ ಮಂಡಲಿಗಳು ಇರತಕ್ಕದ್ದು. ಅಧ್ಯಯನ ಮಂಡಲಿಗಳ ರಚನೆ ಮತ್ತು ಅಧಿಕಾರಗಳು ಶಾಸನಗಳ ಮೂಲಕ ನಿಯಮಿಸಬಹುದಾದಂತೆ ಇರತಕ್ಕದ್ದು.

**30. ಇತರ ಪ್ರಾಧಿಕಾರಗಳ ರಚನೆ.-** ಶಾಸನವು ವಿಶ್ವವಿದ್ಯಾಲಯದ ಪ್ರಾಧಿಕಾರಗಳೆಂದು ಘೋಷಿಸಬಹುದಾದಂಥ ಇತರ ನಿಕಾಯಗಳ ರಚನೆಗೆ ನಿಯಮಿಸಬಹುದಾದ ರೀತಿಯಲ್ಲಿ ಉಪಬಂಧ ಕಲ್ಪಿಸತಕ್ಕದ್ದು.

**31. ಸದಸ್ಯರ ಅನರ್ಹತೆಗಳು.–** (1) ಒಬ್ಬ ವ್ಯಕ್ತಿಯು ವಿಶ್ವವಿದ್ಯಾಲಯದ ಯಾವುವೇ ಪ್ರಾಧಿಕಾರಗಳ ಸದಸ್ಯನಾಗಿ ನಾಮನಿರ್ದೇಶಿತನಾಗಲು ಅಥವಾ ನಾಮನಿರ್ದೇಶನದ ದಿನಾಂಕದಂದು ಆತನು,

(i) ಅಸ್ವಸ್ಥ ಚಿತ್ತನಾಗಿದ್ದರೆ;

(ii) ಅನುನ್ಮುಕ್ತ ದಿವಾಳಿಯಾಗಿದ್ದಾನೆಂದು ನ್ಯಾಯನಿರ್ಣಿತನಾಗಿದ್ದರೆ;

(iii) ನೈತಿಕ ಅಧಃಪತನವನ್ನು ಒಳಗೊಳ್ಳುವ ಯಾವುದೇ ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ ಕಾರವಾಸ ಶಿಕ್ಷೆಗೆ ಅಪರಾಧ ನಿರ್ಣಿತನಾಗಿದ್ದರೆ;

– ಅನರ್ಹನಾಗಿರತಕ್ಕದ್ದು;

(2) ಅನರ್ಹತೆಗೆ ಸಂಬಂಧಪಟ್ಟಂತೆ ಯಾವುದೇ ವಿವಾದ ಅಥವಾ ಸಂದೇಹವಿದ್ದಲ್ಲಿ ಪ್ರಶಾಸನ ಸಭೆಯು (1)ನೇ ಉಪ ಪ್ರಕರಣದ ಅಡಿಯಲ್ಲಿ ಆ ವ್ಯಕ್ತಿಯು ಅನರ್ಹನಾಗಿರುವನೇ ಅಥವಾ ಇಲ್ಲವೇ ಎಂಬುದನ್ನು ನಿರ್ಧರಿಸತಕ್ಕದ್ದು. ಮತ್ತು ಅದರ ತೀರ್ಮಾನವು ಅಂತಿಮವಾಗಿರತಕ್ಕದ್ದು.

(3) ಈ ಅಧಿನಿಯಮದ ಅಡಿಯಲ್ಲಿ ಯಾವುವೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ವ್ಯಕ್ತಿಯು, ಸಂಬಂಧಪಟ್ಟ ನಾಮನಿರ್ದೇಶನ ಮಾಡುವ ಪ್ರಾಧಿಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು.

(4) ಯಾವುವೇ ಪ್ರಾಧಿಕಾರಗಳಿಗೆ ನಾಮನಿರ್ದೇಶಿತನಾದ ಯಾವೊಬ್ಬ ವ್ಯಕ್ತಿಯನ್ನು, ಆತನ ದುರ್ವರ್ತನೆ, ದುರ್ನಡತೆ ಅಥವಾ ಅನ್ಯಥಾ ಕಾರಣದ ಮೇಲೆ ವಿಚಾರಣೆಯನ್ನು ನಡೆಸಿದ ತರುವಾಯ ಕುಲಾಧಿಪತಿಯವರು ಯಾವುದೇ ಕಾಲದಲ್ಲಿ ಸದಸ್ಯತ್ವದಿಂದ ತೆಗೆದುಹಾಕಬಹುದು.:

ಪರಂತು, ಪ್ರಶಾಸನ ಸಭೆಯ ಮತ್ತು ಪ್ರಶಿಕ್ಷಣ ಪರಿಷತ್ತಿನ ಯಾವೊಬ್ಬ ಸದಸ್ಯನು ವಯೋನಿವೃತ್ತನಾದಾಗ ಆತನು ಸದಸ್ಯತ್ವವನ್ನು ಹೊಂದಿರುವುದು ನಿಂತುಹೋಗತಕ್ಕದ್ದು.

**32. ಕೆಲವೊಂದು ಸಂದರ್ಭಗಳಲ್ಲಿ ಪ್ರಶಾಸನ ಸಭೆ ಮತ್ತು ಪ್ರಶಿಕ್ಷಣ ಪರಿಷತ್ತಿಗೆ ನಾಮನಿರ್ದೇಶನ ಹೊಂದಲು ಅನರ್ಹತೆಗಳು.–** (1) 20 ಅಥವಾ 24ನೇ ಪ್ರಕರಣಗಳಲ್ಲಿ ಏನೇ ಇದ್ದರೂ ಈ ಮುಂದಿನ ಪ್ರಾಧಿಕಾರಗಳಲ್ಲಿ ಯಾವುದಾದರೊಂದರಲ್ಲಿ ಅಥವಾ ಅವೆರಡರಲ್ಲೂ ಒಟ್ಟು ಆರು ವರ್ಷಗಳ ಕಾಲ ಸದಸ್ಯನಾಗಿರುವ ಯಾವೊಬ್ಬ ವ್ಯಕ್ತಿಯು, ಎಂದರೆ,–

(ಎ) ಪ್ರಶಾಸನ ಸಭೆ; ಮತ್ತು

(ಬಿ) ಪ್ರಶಿಕ್ಷಣ ಪರಿಷತ್ತು ಆ ಎರಡು ಪ್ರಾಧಿಕಾರಗಳಲ್ಲಿ ಯಾವುದಕ್ಕೂ ನಾಮನಿರ್ದೇಶನ ಹೊಂದಲು ಅರ್ಹನಾಗಿರತಕ್ಕದ್ದಲ್ಲ.

**ವಿವರಣೆ:–** ಈ ಉಪ ಪ್ರಕರಣದಲ್ಲಿ ಹೇಳಿದ ಆರು ವರ್ಷಗಳ ಒಟ್ಟು ಅವಧಿಯನ್ನು ಲೆಕ್ಕ ಹಾಕುವಾಗ ಒಬ್ಬ ವ್ಯಕ್ತಿ ಒಂದು ಪ್ರಾಧಿಕಾರದಲ್ಲಿ ನಾಮನಿರ್ದೇಶಿತನಾಗಿ ಅಧಿಕಾರ ಸ್ಥಾನದಲ್ಲಿದ್ದ ಒಟ್ಟು ಮೂರು ವರ್ಷಗಳು ಇನ್ನೊಂದು ಪ್ರಾಧಿಕಾರದಲ್ಲಿ ನಾಮನಿರ್ದೇಶಿತನಾಗಿ ಅಧಿಕಾರ ಸ್ಥಾನದಲ್ಲಿದ್ದ ಒಟ್ಟು ಮೂರು ವರ್ಷಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು ಮತ್ತು ಅದಕ್ಕನುಸಾರವಾಗಿ ಆ ವ್ಯಕ್ತಿಯು ಅಂಥ ಪ್ರಾಧಿಕಾರಗಳಲ್ಲಿ ಯಾವುದೊಂದಕ್ಕೆ ನಾಮನಿರ್ದೇಶಿತನಾಗಲು ಅರ್ಹನಾಗತಕ್ಕದ್ದಲ್ಲ:

ಪರಂತು ಈ ಉಪ ಪ್ರಕರಣದ ಉದ್ದೇಶಕ್ಕಾಗಿ ಒಬ್ಬ ವ್ಯಕ್ತಿಯನ್ನು ಒಂದು ಪ್ರಾಧಿಕಾರಕ್ಕೆ ನಾಮನಿರ್ದೇಶನ ಮಾಡಿದ್ದು ಮೊದಲು ಹೇಳಿದ ಪ್ರಾಧಿಕಾರದ ಸದಸ್ಯತ್ವದ ಕಾರಣದಿಂದ ಎರಡನೇ ಪ್ರಾಧಿಕಾರಕ್ಕೆ ಅವನು ಸದಸ್ಯನಾದರೆ ಆತನು ಮೊದಲನೆ ಪ್ರಾಧಿಕಾರದ ಸದಸ್ಯನಾಗಿದ್ದ ಅವಧಿಯನ್ನು ಮಾತ್ರ ಲೆಕ್ಕಕ್ಕೆ ತೆಗೆದುಕೊಳ್ಳತಕ್ಕದ್ದು.

(2) (1)ನೇ ಉಪ ಪ್ರಕರಣದಲ್ಲಿರುವುದು ಯಾವುದೂ,–

(ಎ) (ಜಿ) ಬಾಬಿನಲ್ಲಿ ಹೇಳಲಾದ ಪ್ರಶಾಸನಸಭೆಯ ಸದಸ್ಯರಲ್ಲದ 20ನೇ ಪ್ರಕರಣದ (2)ನೇ ಉಪಪ್ರಕರಣದ ಸದಸ್ಯರಿಗೆ,

(ಬಿ) 24ನೇ ಪ್ರಕರಣದ (2)ನೇ ಉಪಪ್ರಕರಣದ (ಎ) ನಿಂದ (ಎಫ್) ಖಂಡದಲ್ಲಿ ಹೇಳಲಾದ ಸದಸ್ಯರಿಗೆ,

–ಅನ್ವಯಿಸತಕ್ಕದ್ದಲ್ಲ.

**33. ಆಕಸ್ಮಿಕ ಖಾಲಿಸ್ಥಾನಗಳನ್ನು ಭರ್ತಿ ಮಾಡುವುದು.–** ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ಇತರ ನಿಕಾಯದ ಪದನಿಮಿತ್ತ ಸದಸ್ಯರಲ್ಲದ ಸದಸ್ಯರ ಪೈಕಿ ಉಂಟಾಗುವ ಎಲ್ಲ ಆಕಸ್ಮಿಕ ಖಾಲಿಸ್ಥಾನಗಳನ್ನು, ಆ ಸದಸ್ಯನನ್ನು ನಾಮನಿರ್ದೇಶಿಸಿದ ವ್ಯಕ್ತಿ ಅಥವಾ ನಿಕಾಯವು, ಅನುಕೂಲವಾದಷ್ಟು ಬೇಗನೆ ಭರ್ತಿ ಮಾಡತಕ್ಕದ್ದು ಮತ್ತು ಆಕಸ್ಮಿಕ ಖಾಲಿಸ್ಥಾನದಲ್ಲಿ ನಾಮನಿರ್ದೇಶಿತನಾದ ವ್ಯಕ್ತಿಯು, ಯಾವ ವ್ಯಕ್ತಿಯ

ಸ್ಥಾನದಲ್ಲಿ ಭರ್ತಿಗೊಂಡಿರುವನೋ ಆ ವ್ಯಕ್ತಿಯು ಸದಸ್ಯನಾಗಿರುತ್ತಿದ್ದ ಉಳಿದ ಅವಧಿಯವರೆಗೆ ಅಂಥ ಪ್ರಾಧಿಕಾರ ಅಥವಾ ನಿಕಾಯದ ಸದಸ್ಯನಾಗಿರತಕ್ಕದ್ದು:

ಪರಂತು, ಅಂಥ ಯಾವುದೇ ಆಕಸ್ಮಿಕ ಖಾಲಿಸ್ಥಾನವು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯನ ಪದಾವಧಿಯು ಮುಕ್ತಾಯವಾಗುವ ದಿನಾಂಕಕ್ಕೆ ಮುಂಚಿನ ಆರು ತಿಂಗಳೊಳಗಾಗಿ ಉಂಟಾದರೆ, ಅಂಥ ಯಾವುದೇ ಖಾಲಿಸ್ಥಾನವನ್ನು ಭರ್ತಿಮಾಡತಕ್ಕದ್ದಲ್ಲ.

**34. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ನಿಕಾಯಗಳ ವ್ಯವಹರಣೆಗಳು, ಖಾಲಿಸ್ಥಾನಗಳು ಇರುವುದರಿಂದಾಗಿ ಅಮಾನ್ಯವಾಗತಕ್ಕದ್ದಲ್ಲ.-** ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಯಾವುದೇ ಕೃತ್ಯ ಅಥವಾ ವ್ಯವಹರಣೆಯು, ಯಾವುದೇ ಖಾಲಿಸ್ಥಾನ ಇದೆ ಎಂಬ ಅಥವಾ ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರ ಅಥವಾ ಇತರ ನಿಕಾಯದ ಸದಸ್ಯನ ನೇಮಕಾತಿಯಲ್ಲಿನ ಯಾವುದೇ ದೋಷ ಅಥವಾ ಅಕ್ರಮತೆಯ ಅಥವಾ ಪ್ರಕರಣದ ಗುಣಗಳಿಗೆ ಬಾಧಕವಾಗದ, ಅಂಥ ಕೃತ್ಯ ಅಥವಾ ವ್ಯವಹರಣೆಯಲ್ಲಿನ ಯಾವುದೇ ದೋಷ ಅಥವಾ ಅಕ್ರಮತೆಯ ಕಾರಣ ಮಾತ್ರದಿಂದಲೇ ಅಮಾನ್ಯವಾಗತಕ್ಕದ್ದಲ್ಲ.

**35. ವಿಶ್ವವಿದ್ಯಾಲಯದ ಸದಸ್ಯತ್ವದಿಂದ ತೆಗೆದುಹಾಕುವುದು.-** (1) ಪ್ರಶಾಸನ ಸಭೆಯು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸದಸ್ಯತ್ವದಿಂದ ಯಾವೊಬ್ಬ ವ್ಯಕ್ತಿಯನ್ನು, ಅಂಥ ವ್ಯಕ್ತಿಯು, ಕಾರ್ಯಕಾರಿ ಸಮಿತಿಯ ಅಭಿಪ್ರಾಯದಲ್ಲಿ ನೈತಿಕ ಅಧಃಪತನವನ್ನು ಒಳಗೊಳ್ಳುವ ಒಂದು ಅಪರಾಧಕ್ಕಾಗಿ ಕ್ರಿಮಿನಲ್ ನ್ಯಾಯಾಲಯದಿಂದ ಅಪರಾಧ ನಿರ್ಣಿತನಾಗಿ ಅಥವಾ ಗುರುತರ ದುರ್ವರ್ತನೆಯ ದೋಷಿಯಾಗಿದ್ದರೆ ಪ್ರಶಾಸನ ಸಭೆಯು ಒಟ್ಟು ಸದಸ್ಯರ ಬಹುಮತದಿಂದ ಮತ್ತು ಸಭೆಯಲ್ಲಿ ಹಾಜರಿದ್ದು ಮತ ನೀಡುವ ಪ್ರಶಾಸನ ಸಭೆಯ ಮೂರನೇ ಎರಡರಷ್ಟು ಸಂಖ್ಯೆಯ ಸದಸ್ಯರಿಗಿಂತ ಕಡಿಮೆಯಿಲ್ಲದ ಬಹುಮತದಿಂದ ಒಂದು ಗೊತ್ತುವಳಿಯನ್ನು ಅಂಗೀಕರಿಸಿ ಆ ಬಗ್ಗೆ ಲಿಖಿತದಲ್ಲಿ ಆದೇಶವನ್ನು ಹೊರಡಿಸುವ ಮೂಲಕ ತೆಗೆದು ಹಾಕಬಹುದು ಮತ್ತು ಅದೇ ಕಾರಣಕ್ಕಾಗಿ ಪ್ರಶಾಸನ ಸಭೆಯು ವಿಶ್ವವಿದ್ಯಾಲಯವು ಆ ವ್ಯಕ್ತಿಗೆ ಪ್ರದಾನ ಮಾಡಿರುವ ಅಥವಾ ನೀಡಿರುವ ಯಾವುದೇ ಪದವಿ ಅಥವಾ ಡಿಪ್ಲೋಮಾವನ್ನು ಹಿಂತೆಗೆದುಕೊಳ್ಳಬಹುದು.

(2) ಪ್ರಶಾಸನ ಸಭೆಯು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಸದಸ್ಯತ್ವದಿಂದ ಯಾವೊಬ್ಬ ವ್ಯಕ್ತಿಯನ್ನು, ಅವನು ಅಸ್ವಸ್ಥಚಿತ್ತದವನಾದರೆ, ಕಿವುಡನಾದರೆ, ಮೂಕನಾದರೆ, ಅಥವಾ ಕುಷ್ಠರೋಗದಿಂದ ನರಳುತ್ತಿದ್ದರೆ ಅಥವಾ ದಿವಾಳಿಯೆಂದು ನ್ಯಾಯ ನಿರ್ಣಯಿಸಬೇಕೆಂದು ಅರ್ಜಿ ಸಲ್ಲಿಸಿದ್ದರೆ ಅಥವಾ ಹಾಗೆಂದು ನ್ಯಾಯ ನಿರ್ಣೀತನಾಗಿದ್ದರೆ, ಈ ಬಗ್ಗೆ ಹೊರಡಿಸಲಾದ ಲಿಖಿತ ಆದೇಶದ ಮೂಲಕ ತೆಗೆದುಹಾಕಬಹುದು.

(3) ಈ ಪ್ರಕರಣದ ಅಡಿಯಲ್ಲಿ ಯಾವೊಬ್ಬ ವ್ಯಕ್ತಿಯ ವಿರುದ್ಧ ತೆಗೆದುಕೊಳ್ಳಲು ಉದ್ದೇಶಿಸಿದ ಕ್ರಮದ ವಿರುದ್ಧ ಕಾರಣ ತೋರಿಸಲು ಅವನಿಗೆ ಒಂದು ಯುಕ್ತ ಅವಕಾಶವನ್ನು ನೀಡಿದ ಹೊರತು, ಅವನ ಮೇಲೆ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

(4) ಸಂದರ್ಭಾನುಸಾರ, (1)ನೇ ಉಪ-ಪ್ರಕರಣದ ಅಥವಾ (2)ನೇ ಉಪ-ಪ್ರಕರಣದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಆದೇಶದ ಒಂದು ಪ್ರತಿಯನ್ನು ಅದನ್ನು ಹಾಗೆ ಹೊರಡಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ, ನಿಯಮಿಸಲಾದ ರೀತಿಯಲ್ಲಿ ಸಂಬಂಧಪಟ್ಟ ವ್ಯಕ್ತಿಗೆ ಕಳುಹಿಸತಕ್ಕದ್ದು.

**36. ವಿಶ್ವವಿದ್ಯಾಲಯದ ಪ್ರಾಧಿಕಾರಗಳು ಮತ್ತು ನಿಕಾಯಗಳ ರಚನೆಗೆ ಸಂಬಂಧಪಟ್ಟ ವಿವಾದಗಳು.-** ಯಾವೊಬ್ಬ ವ್ಯಕ್ತಿಯು, ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ವಿಶ್ವವಿದ್ಯಾಲಯದ ಇತರ ನಿಕಾಯದ ಸದಸ್ಯನಾಗಿ ಯಥೋಚಿತವಾಗಿ ನಾಮನಿರ್ದೇಶಿತನಾಗಿದ್ದಾನೆಯೇ ಅಥವಾ ಸದಸ್ಯನಾಗಿರಲು ಹಕ್ಕುಳ್ಳವನಾಗಿದ್ದಾನೆಯೇ ಎಂಬ ಬಗ್ಗೆ ಯಾವುದೇ ಪ್ರಶ್ನೆ ಉದ್ಭವಿಸಿದರೆ, ಪ್ರಶ್ನೆಯನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಅದರ ಬಗ್ಗೆ ಅವರ ತೀರ್ಮಾನವು ಅಂತಿಮವಾಗಿರತಕ್ಕದ್ದು.

**37. ಸಮಿತಿಗಳ ರಚನೆ.-** ವಿಶ್ವವಿದ್ಯಾಲಯದ ಎಲ್ಲ ಪ್ರಾಧಿಕಾರಗಳು ಸಮಿತಿಗಳನ್ನು ರಚಿಸಲು ಅಥವಾ ಪುನರ್ ರಚಿಸಲು ಮತ್ತು ತಾವು ಉಚಿತವೆಂದು ಭಾವಿಸುವ ಅಂಥ ತಮ್ಮ ಅಧಿಕಾರಗಳನ್ನು ಅವುಗಳಿಗೆ ಪ್ರತ್ಯಾಯೋಜಿಸಲು ಅಧಿಕಾರ ಹೊಂದಿರತಕ್ಕದ್ದು. ಅಂಥ ಸಮಿತಿಗಳು, ಅನ್ಯಥಾ ಉಪಬಂಧಿಸಿರುವುದನ್ನುಳಿದು, ಸಂಬಂಧಪಟ್ಟ ಪ್ರಾಧಿಕಾರದ ಸದಸ್ಯರನ್ನು ಮತ್ತು ಪ್ರಾಧಿಕಾರವು ಪ್ರತಿಯೊಂದು ಸಂದರ್ಭದಲ್ಲಿ ತಾನು ಉಚಿತವೆಂದು ಭಾವಿಸಬಹುದಾದಂಥ ಇತರ ವ್ಯಕ್ತಿಗಳು, ಯಾರಾದರೂ ಇದ್ದರೆ, ಅವರನ್ನು ಒಳಗೊಂಡಿರತಕ್ಕದ್ದು.

## ಅಧ್ಯಾಯ – V

### ಶಾಸನಗಳು

**38. ಶಾಸನಗಳು.-** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ಶಾಸನಗಳು, ಈ ಮುಂದಿನ ಎಲ್ಲ ಅಥವಾ ಯಾವುವೇ ವಿಷಯಗಳಿಗಾಗಿ ಉಪಬಂಧ ಕಲ್ಪಿಸಬಹುದು, ಎಂದರೆ: -

(1) ಪದವಿಗಳನ್ನು ಪ್ರದಾನ ಮಾಡಲು ಘಟಿಕೋತ್ಸವವನ್ನು ಏರ್ಪಡಿಸುವುದು;

(2) ಗೌರವ ಪದವಿಗಳನ್ನು ಮತ್ತು ಶೈಕ್ಷಣಿಕ ಪ್ರಶಸ್ತಿಗಳನ್ನು ಪ್ರದಾನ ಮಾಡುವುದು;

(3) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ರಚನೆ, ಅಧಿಕಾರಗಳು ಮತ್ತು ಪ್ರಕಾರ್ಯಗಳು;

(4) ವಿಶ್ವವಿದ್ಯಾಲಯದ ಪ್ರಾಧಿಕಾರಗಳ ಸದಸ್ಯರ ಪೈಕಿಯಿಂದ ಖಾಲಿಸ್ಥಾನಗಳನ್ನು ಭರ್ತಿ ಮಾಡುವ ರೀತಿ;

(5) ಪ್ರಾಧಿಕಾರಗಳ ಮತ್ತು ಅವುಗಳ ಸಮಿತಿಗಳ ಸದಸ್ಯರಿಗೆ ಸಂದಾಯ ಮಾಡಬೇಕಾಗಿರುವ ಭತ್ಯೆಗಳು;

(6) ಪ್ರಾಧಿಕಾರಗಳ ಆದೇಶಗಳ ಅಥವಾ ತೀರ್ಮಾನಗಳ ಪ್ರಮಾಣೀಕರಣ;

(7) ಪ್ರಾಧಿಕಾರಗಳ ಸಭೆಗಳಲ್ಲಿನ ಕಾರ್ಯಕಲಾಪಗಳಿಗೆ, ಅಂಥ ಸಭೆಗಳಲ್ಲಿ ಇರಬೇಕಾದ ಕೋರಂ ಅನ್ನು ಒಳಗೊಂಡಂತೆ, ಅಂಥ ಸಭೆಗಳ ಕಾರ್ಯವಿಧಾನ;

(8) ವಿಶ್ವವಿದ್ಯಾಲಯದ ಸಂಶೋಧನಾ ಇಲಾಖೆಗಳ ರಚನೆ;

(9) ಕುಲಾಧಿಪತಿಯವರು ಮತ್ತು ಸಹಕುಲಾಧಿಪತಿಗಳಲ್ಲದ ವಿಶ್ವವಿದ್ಯಾಲಯದ ಅಧಿಕಾರಿಗಳ ಪದಾವಧಿ ಮತ್ತು ನೇಮಕಾತಿ ವಿಧಾನಗಳು ಮತ್ತು ಸೇವಾ ಷರತ್ತುಗಳು;

(10) ವಿಶ್ವವಿದ್ಯಾಲಯದಿಂದ ನಿಯೋಜಿತರಾದ ಬೋಧಕರು ಮತ್ತು ಇತರ ವ್ಯಕ್ತಿಗಳ ವಿದ್ಯಾರ್ಹತೆಗಳು;

(11) ವಿಶ್ವವಿದ್ಯಾಲಯದಿಂದ ನಿಯೋಜಿತರಾದ ಬೋಧಕರು ಮತ್ತು ಇತರ ವ್ಯಕ್ತಿಗಳ ವರ್ಗೀಕರಣ, ನೇಮಕಾತಿ ವಿಧಾನ ಮತ್ತು ಸೇವಾ ನಿಬಂಧನೆಗಳು ಮತ್ತು ಷರತ್ತುಗಳ ನಿರ್ಧಾರ;

(12) ವಿಶ್ವವಿದ್ಯಾಲಯದಿಂದ ನಿಯೋಜಿತರಾದ ಅಧಿಕಾರಿಗಳು, ಬೋಧಕರು ಮತ್ತು ಇತರ ವ್ಯಕ್ತಿಗಳ ಪ್ರಯೋಜನಕ್ಕಾಗಿ ನಿವೃತ್ತಿ ವೇತನ, ಉಪದಾನ, ವಿಮೆ ಅಥವಾ ಭವಿಷ್ಯ ನಿಧಿಗಳ ಪ್ರಾರಂಭ;

(13) ಸಂಶೋಧನಾ ವೇತನಗಳು, ಪ್ರವಾಸೀ ಸಂಶೋಧನಾ ವೇತನಗಳು, ವಿದ್ಯಾರ್ಥಿ ವೇತನ, ಶಿಷ್ಯ ವೇತನ, ಬರ್ಸರಿಗಳು, ಪ್ರದರ್ಶನಗಳು, ಪದಕಗಳು ಮತ್ತು ಬಹುಮಾನಗಳನ್ನು ನೀಡುವುದನ್ನು ಪ್ರಾರಂಭಿಸುವುದು ಮತ್ತು ಅವುಗಳನ್ನು ನೀಡುವ ಬಗ್ಗೆ ಷರತ್ತುಗಳು;

(14) ವಸತಿ ನಿಲಯಗಳು ಮತ್ತು ಹಾಸ್ಟೆಲುಗಳ ಸ್ಥಾಪನೆ ಮತ್ತು ನಿರ್ವಹಣೆ;

(15) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ವಸತಿ ಮತ್ತು ವಿಶ್ವವಿದ್ಯಾಲಯವು ನಿರ್ವಹಿಸುವ ಹಾಸ್ಟೆಲುಗಳು ಮತ್ತು ವಸತಿ ನಿಲಯಗಳ ಷರತ್ತುಗಳು ಮತ್ತು ಅಂಥ ವಸತಿಗೆ ಶುಲ್ಕಗಳು ಮತ್ತು ಇತರ ವೆಚ್ಚಗಳನ್ನು ವಿಧಿಸುವುದು;

(16) ವಿಶ್ವವಿದ್ಯಾಲಯದ ಅಧಿಕಾರಿಗಳ ಮೇಲೆ ಪ್ರಾಧಿಕಾರಗಳಲ್ಲಿ ನಿಹಿತವಾಗಿರುವ ಅಧಿಕಾರಗಳ ಪ್ರತ್ಯಾಯೋಜನೆ;

(17) ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ;

(18) ಪರೀಕ್ಷಾ ನಿಕಾಯಗಳು ಮತ್ತು ಪರೀಕ್ಷಕರ ನೇಮಕಾತಿ ಷರತ್ತುಗಳು ಮತ್ತು ವಿಧಾನ ಹಾಗೂ ಅವರ ಕರ್ತವ್ಯಗಳು;

(19) ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಮಧ್ಯೆ ಶಿಸ್ತು ನಿರ್ವಹಣೆಯ ಷರತ್ತುಗಳು;

(20) ಸಂಶೋಧನೆಗೆ ವಿಧಿಸಬೇಕಾದ ಶುಲ್ಕಗಳು; ಮತ್ತು

(21) ಪರಿನಿಯಮಗಳಿಂದ ನಿಯಮಿಸುವ ಅಗತ್ಯವಿರುವ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

**39. ಶಾಸನಗಳನ್ನು ರಚಿಸುವ ಬಗೆ.-** (1) ಪ್ರಶಾಸನ ಸಭೆಯು ಈ ಪ್ರಕರಣದಲ್ಲಿ ಇನ್ನು ಮುಂದೆ ಉಪಬಂಧಿಸಿದ ವಿಧಾನದಲ್ಲಿ ಕಾಲಕಾಲಕ್ಕೆ ಶಾಸನಗಳನ್ನು ರಚಿಸಬಹುದು ಹಾಗೂ ಅವುಗಳನ್ನು ತಿದ್ದುಪಡಿ ಮಾಡಬಹುದು ಅಥವಾ ನಿರಸನಗೊಳಿಸಬಹುದು.

(2) ಪ್ರಶಿಕ್ಷಣ ಪರಿಷತ್ತು ಅಥವಾ ಕುಲಪತಿಯವರು ಯಾವುವೇ ಶಾಸನಗಳ ಅಥವಾ ಅವುಗಳಿಗೆ ಮಾಡಬೇಕಾದ ಯಾವುವೇ ತಿದ್ದುಪಡಿಗಳ ಕರಡನ್ನು ಅಥವಾ ಶಾಸನದ ನಿರಸನದ ಪ್ರಸ್ತಾವದ ಕರಡನ್ನು ಪ್ರಶಾಸನ ಸಭೆಯ ಅಂಗೀಕಾರಕ್ಕಾಗಿ ಸಲ್ಲಿಸಬಹುದು ಮತ್ತು ಅಂಥ ಕರಡನ್ನು ಪ್ರಶಾಸನ ಸಭೆಯು ತನ್ನ ಮುಂದಿನ ಸಭೆಯಲ್ಲಿ ಪರಿಗಣಿಸತಕ್ಕದ್ದು:

ಪರಂತು, ಕುಲಪತಿಯವರು ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಧಿಕಾರಗಳಿಗೆ ಮತ್ತು ರಚನೆಗೆ ಬಾಧಕವಾಗುವಂತೆ ಯಾವುವೇ ಶಾಸನಗಳಿಗೆ ಯಾವುವೇ ತಿದ್ದುಪಡಿಗಳನ್ನು ಮಾಡುವ ಪ್ರಸ್ತಾವಗಳನ್ನು, ಅಂಥ ಪ್ರಾಧಿಕಾರಕ್ಕೆ ತನ್ನ ಅಭಿಪ್ರಾಯವನ್ನು ಹೇಳಿಕೊಳ್ಳಲು ಅವಕಾಶವನ್ನು ನೀಡದೇ ಮಂಡಿಸತಕ್ಕದ್ದಲ್ಲ ಮತ್ತು ಹಾಗೆ ವ್ಯಕ್ತಪಡಿಸಿದ ಅಭಿಪ್ರಾಯಗಳನ್ನು ಪ್ರಶಾಸನ ಸಭೆ ಪರಿಗಣಿಸತಕ್ಕದ್ದು.

(3) ಪ್ರಶಿಕ್ಷಣ ಪರಿಷತ್ತು ಅಥವಾ ಕುಲಪತಿಯವರು (2)ನೇ ಉಪಪ್ರಕರಣದ ಅಡಿಯಲ್ಲಿ ಪ್ರಸ್ತಾವಿಸಿದ ಕರಡನ್ನು ಪ್ರಶಾಸನ ಸಭೆಯು ಪರಿಗಣಿಸಬಹುದು ಮತ್ತು ಆ ಕರಡನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು ಅಥವಾ ತಿದ್ದುಪಡಿಗಳೊಡನೆ ಅಥವಾ ತಿದ್ದುಪಡಿಗಳಿಲ್ಲದೆ ಅದನ್ನು ಪುನರ್ ಪರಿಗಣನೆ ಮಾಡಲು ಸಂದರ್ಭಾನುಸಾರ ಪ್ರಶಿಕ್ಷಣ ಪರಿಷತ್ತಿಗೆ ಅಥವಾ ಕುಲಪತಿಯವರಿಗೆ ಹಿಂದಿರುಗಿಸಬಹುದು.

(4) (ಎ) ಪ್ರಶಾಸನ ಸಭೆಯ ಯಾವೊಬ್ಬ ಸದಸ್ಯನು, ಪ್ರಶಾಸನ ಸಭೆಗೆ ಕರಡು ಶಾಸನಗಳನ್ನು ಅಥವಾ ಶಾಸನಗಳ ತಿದ್ದುಪಡಿ ಅಥವಾ ನಿರಸನಕ್ಕಾಗಿ ಪ್ರಸ್ತಾವವನ್ನು ಸಲ್ಲಿಸಬಹುದು ಮತ್ತು ಪ್ರಶಾಸನ ಸಭೆಯು, ಆ ವಿಷಯವು ಪ್ರಶಿಕ್ಷಣ ಸಭೆಯ ಪರಿಮಿತಿಯಲ್ಲಿ ಬರುವಂತಹದಲ್ಲದಿದ್ದರೆ ಕರಡನ್ನು ಒಪ್ಪಿಕೊಳ್ಳಬಹುದು ಅಥವಾ ತಿರಸ್ಕರಿಸಬಹುದು.

(ಬಿ) ವಿಷಯವು ಪ್ರಶಿಕ್ಷಣ ಪರಿಷತ್ತಿನ ಪರಿಮಿತಿಯಲ್ಲಿ ಬರುತ್ತಿದ್ದರೆ ಅಂಥ ಕರಡನ್ನು ಪ್ರಶಾಸನ ಸಭೆಯು ಪ್ರಶಿಕ್ಷಣ ಪರಿಷತ್ತಿಗೆ ಪರಿಗಣನೆಗಾಗಿ ಕಳುಹಿಸತಕ್ಕದ್ದು. ಪ್ರಶಿಕ್ಷಣ ಪರಿಷತ್ತು, ಪ್ರಶಾಸನ

ಸಭೆಗೆ ತಾನು ಕರಡನ್ನು ಒಪ್ಪಿಲ್ಲವೆಂದು ವರದಿ ಮಾಡಬಹುದು ಅಥವಾ ಪ್ರಶಿಕ್ಷಣ ಪರಿಷತ್ತು ಅಂಗೀಕರಿಸಬಹುದಾದ ರೂಪದಲ್ಲಿ ಕರಡನ್ನು ಪ್ರಶಾಸನ ಸಭೆಗೆ ಸಲ್ಲಿಸಬಹುದು ಮತ್ತು ಪ್ರಶಾಸನ ಸಭೆಯು ತಿದ್ದುಪಡಿ ಇಲ್ಲದೆ ಅಥವಾ ತಿದ್ದುಪಡಿಗಳೊಡನೆ ಕರಡನ್ನು ಅಂಗೀಕರಿಸಬಹುದು ಅಥವಾ ತಿರಸ್ಕರಿಸಬಹುದು.

(5) ಪ್ರಶಾಸನಸಭೆಯು, ಹಣಕಾಸಿನ ವಿಷಯಗಳನ್ನು ಒಳಗೊಂಡ ಶಾಸನಗಳ ಸಂಬಂಧದಲ್ಲಿ ಹಣಕಾಸು ಸಮಿತಿಯ ಅಭಿಪ್ರಾಯವನ್ನು ಪಡೆಯತಕ್ಕದ್ದು.

(6) ಪ್ರಶಾಸನ ಸಭೆಯು ಕರಡು ಶಾಸನಗಳ ಸಂಬಂಧದಲ್ಲಿ ಅವುಗಳನ್ನು ಪರಿಗಣಿಸುವುದಕ್ಕೆ ಮುಂಚೆ ತಾನು ಅವಶ್ಯವೆಂದು ಭಾವಿಸಿದರೆ, ವಿಶ್ವವಿದ್ಯಾಲಯದ ಯಾವೊಬ್ಬ ಅಧಿಕಾರಿಯ, ಪ್ರಾಧಿಕಾರದ ಅಥವಾ ನಿಕಾಯದ ಅಭಿಪ್ರಾಯವನ್ನು ಸಹ ಪಡೆಯಬಹುದು.

(7) ಪ್ರಶಾಸನ ಸಭೆಯು ತಾನು ಅಂಗೀಕರಿಸಿದ ಪ್ರತಿಯೊಂದು ಶಾಸನವನ್ನು, ತನ್ನ ನಿರ್ದಿಷ್ಟ ಶಿಫಾರಸ್ಸುಗಳೊಡನೆ ಅನುಮೋದನೆಗಾಗಿ ಕುಲಾಧಿಪತಿಯವರಿಗೆ ಒಪ್ಪಿಸುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು.

(8) ರಾಜ್ಯ ಸರ್ಕಾರವು, ಕರಡು ಶಾಸನಗಳನ್ನು ಸ್ವೀಕರಿಸಿದ ಮೇಲೆ, ಅವುಗಳನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳುಗಳೊಳಗೆ ತನ್ನ ಟೀಕೆ ಟಿಪ್ಪಣಿಗಳು ಮತ್ತು ನಿರ್ದಿಷ್ಟ ಶಿಫಾರಸ್ಸುಗಳೊಡನೆ, ಅಂಥ ಕರಡು ಶಾಸನಗಳನ್ನು ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು ಮತ್ತು ಕುಲಾಧಿಪತಿಯವರು, ರಾಜ್ಯ ಸರ್ಕಾರದಿಂದ ಕರಡು ಶಾಸನಗಳನ್ನು ಸ್ವೀಕರಿಸಿದ ದಿನಾಂಕದಿಂದ ಎರಡು ತಿಂಗಳೊಳಗೆ ತನ್ನ ಅನುಮೋದನೆಯನ್ನು ನೀಡಬಹುದು ಅಥವಾ ಅದಕ್ಕೆ ತನ್ನ ಅನುಮೋದನೆಯನ್ನು ತಡೆಹಿಡಿಯಬಹುದು ಅಥವಾ ಅದನ್ನು ಮತ್ತಷ್ಟು ಪರಿಗಣನೆಗಾಗಿ ಪ್ರಶಾಸನ ಸಭೆಗೆ ಕಳುಹಿಸಬಹುದು.

(9) ಪ್ರಶಾಸನ ಸಭೆಯು ಅಂಗೀಕರಿಸಿದ ಶಾಸನಗಳನ್ನು ಕುಲಾಧಿಪತಿಯವರು ಅನುಮೋದಿಸುವವರೆಗೆ ಜಾರಿಗೊಳಿಸತಕ್ಕದ್ದಲ್ಲ.

**40. ವಿನಿಯಮಗಳು.–** (1) ಪ್ರಶಿಕ್ಷಣ ಪರಿಷತ್ತು ಎಲ್ಲಾ ಅಥವಾ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಉಪಬಂಧಿಸುವುದಕ್ಕಾಗಿ ಮತ್ತು ವಿಶೇಷವಾಗಿ ಈ ಮುಂದಿನ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸುವುದಕ್ಕಾಗಿ ಈ ಅಧಿನಿಯಮಕ್ಕೆ ಸುಸಂಗತವಾಗಿರುವ ವಿನಿಯಮಗಳನ್ನು ರಚಿಸಬಹುದು, ಎಂದರೆ:–

(ಎ) ವಿಶ್ವವಿದ್ಯಾಲಯಕ್ಕೆ ವಿದ್ಯಾರ್ಥಿಗಳ ಪ್ರವೇಶ;

(ಬಿ) ಇತರ ವಿಶ್ವವಿದ್ಯಾಲಯಗಳ ಪರೀಕ್ಷೆಗಳು ಮತ್ತು ಪದವಿಗಳನ್ನು, ವಿಶ್ವವಿದ್ಯಾಲಯದ ಪರೀಕ್ಷೆ ಮತ್ತು ಪದವಿಗಳಿಗೆ ಸಮನಾದುವೆಂದು ಮನ್ನಣೆ ನೀಡುವುದು;

(ಸಿ) ವಿಶ್ವವಿದ್ಯಾಲಯದ ವ್ಯಾಸಂಗ ಕ್ರಮಗಳು ಮತ್ತು ಪರೀಕ್ಷೆಗಳು ಮತ್ತು ವಿಶ್ವವಿದ್ಯಾಲಯದ ಅಥವಾ ಸಂಯೋಜನೆಗೊಂಡ ಕಾಲೇಜುಗಳ ಅಥವಾ ವಿಶ್ವವಿದ್ಯಾಲಯದ ಇತರ ಸಂಸ್ಥೆಗಳ ವಿದ್ಯಾರ್ಥಿಗಳನ್ನು ಯಾವ ಷರತ್ತುಗಳ ಮೇಲೆ ವಿಶ್ವವಿದ್ಯಾಲಯದ ಪರೀಕ್ಷೆಗಳು ಅಥವಾ ಪದವಿಗಳು, ಡಿಪ್ಲೊಮೋಗಳು ಮತ್ತು ಇತರ ಪ್ರಮಾಣ ಪತ್ರಗಳ ವ್ಯಾಸಂಗ ಕ್ರಮಗಳಿಗೆ ಸೇರಿಸಿಕೊಳ್ಳತಕ್ಕದ್ದೋ ಆ ಷರತ್ತುಗಳು;

(ಡಿ) ವಿನಾಯಿತಿಗಳನ್ನು ನೀಡುವುದು; ಮತ್ತು

(ಇ) ವಿನಿಯಮಗಳ ಮೂಲಕ ನಿಯಂತ್ರಿಸುವ ಅಗತ್ಯವಿರುವ ಅಥವಾ ನಿಯಂತ್ರಿಸಬಹುದಾದ ಯಾವುವೇ ಇತರ ವಿಷಯಗಳು.

(2) ಪ್ರಶಿಕ್ಷಣ ಪರಿಷತ್ತು ಅಂಗೀಕರಿಸಿದ ಎಲ್ಲ ವಿನಿಯಮಗಳನ್ನು ಕುಲಾಧಿಪತಿಯವರ ಅನುಮೋದನೆಗಾಗಿ ಸಲ್ಲಿಸಲು ರಾಜ್ಯ ಸರ್ಕಾರಕ್ಕೆ ಕಳುಹಿಸತಕ್ಕದ್ದು. ರಾಜ್ಯ ಸರ್ಕಾರವು, ವಿಶ್ವವಿದ್ಯಾಲಯದಿಂದ ಸ್ವೀಕರಿಸಿದ ವಿನಿಯಮಗಳನ್ನು ಅವುಗಳನ್ನು ಸ್ವೀಕರಿಸಿದ ದಿನದಿಂದ ಎರಡು ತಿಂಗಳೊಳಗೆ ತನ್ನ ಟೀಕೆ ಟಿಪ್ಪಣಿಗಳೊಡನೆ ಕುಲಾಧಿಪತಿಯವರಿಗೆ ಕಳುಹಿಸತಕ್ಕದ್ದು. ಕುಲಾಧಿಪತಿಯವರು, ರಾಜ್ಯ ಸರ್ಕಾರದಿಂದ ಈ ವಿನಿಯಮಗಳನ್ನು ಸ್ವೀಕರಿಸಿದ ದಿನದಿಂದ ಒಂದು ತಿಂಗಳೊಳಗೆ ಅವುಗಳನ್ನು ಅನುಮೋದಿಸಬಹುದು ಅಥವಾ ಮತ್ತಷ್ಟು ಪರಿಶೀಲನೆಗಾಗಿ ಅವುಗಳನ್ನು ಪ್ರಶಿಕ್ಷಣ ಪರಿಷತ್ತಿಗೆ ಹಿಂದಿರುಗಿಸಬಹುದು.

(3) ಎಲ್ಲ ವಿನಿಯಮಗಳು, ಕುಲಾಧಿಪತಿಯವರು ಅವುಗಳನ್ನು ಅನುಮೋದಿಸಿದ ದಿನಾಂಕದಿಂದ ಅಥವಾ ಕುಲಾಧಿಪತಿಯವರು ನಿರ್ದೇಶಿಸಬಹುದಾದಂಥ ಇತರ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

## ಅಧ್ಯಾಯ – VI

## ಫ್ಯಾಕಲ್ಟಿಗಳು

**41. ಫ್ಯಾಕಲ್ಟಿಗಳು ಮತ್ತು ವಿಭಾಗಗಳು.–** ಈ ಕೆಳಗೆ ಹೇಳಿದ ವಿಭಾಗಗಳನ್ನು ತನ್ನ ಅಡಿಯಲ್ಲಿ ಹೊಂದಿರುವಂಥ ಈ ಮುಂದಿನ ಫ್ಯಾಕಲ್ಟಿಗಳು ಇರತಕ್ಕದ್ದು:–

I. ಗೇಯ ಸಂಗೀತ (ಹಾಡುಗಾರಿಕೆ) ಫ್ಯಾಕಲ್ಟಿ

II. ವಾದ್ಯ ಸಂಗೀತ ಫ್ಯಾಕಲ್ಟಿ

III. ಸಂಗೀತ ಶಾಸ್ತ್ರದ ಫ್ಯಾಕಲ್ಟಿ

IV. ನೃತ್ಯದ ಫ್ಯಾಕಲ್ಟಿ

V. ಪ್ರದರ್ಶಕ ಕಲೆಗಳ ಫ್ಯಾಕಲ್ಟಿ.

VI. ನಾಟಕ ಫ್ಯಾಕಲ್ಟಿ

VII. ವಿಶ್ವವಿದ್ಯಾಲಯವು ನಿರ್ಧರಿಸಬಹುದಾದ ಯಾವುದೇ ಇತರ ಫ್ಯಾಕಲ್ಟಿ

### 1. ಗೇಯ ಸಂಗೀತ (ಹಾಡುಗಾರಿಕೆ) ಫ್ಯಾಕಲ್ಟಿ

ಈ ಫ್ಯಾಕಲ್ಟಿಯ ಅಡಿಯಲ್ಲಿ ಕೆಳಗೆ ತಿಳಿಸಿರುವ ಸಂಗೀತ ವಿಭಾಗಗಳು ಇರುತ್ತವೆ.

ಎ. ಹಿಂದೂಸ್ತಾನೀ ಶಾಸ್ತ್ರೀಯ ಗಾಯನ ಸಂಗೀತ ವಿಭಾಗ

ಬಿ. ಕರ್ನಾಟಕ ಶಾಸ್ತ್ರೀಯ ಗಾಯನ ಸಂಗೀತ ವಿಭಾಗ

### II. ವಾದ್ಯ ಸಂಗೀತ ಫ್ಯಾಕಲ್ಟಿ

ಎ. ತಂತಿವಾದ್ಯಗಳ ವಿಭಾಗ

ಬಿ. ಊದುವಾದ್ಯಗಳ ವಿಭಾಗ

ಸಿ. ತಾಳವಾದ್ಯಗಳ ವಿಭಾಗ

ಡಿ. ಡೋಲು ವಾದ್ಯಗಳ ವಿಭಾಗ

### III. ಸಂಗೀತ ಶಾಸ್ತ್ರದ ಫ್ಯಾಕಲ್ಟಿ

ಎ. ಶಾಸ್ತ್ರ ವಿಭಾಗ

ಬಿ. ಹಸ್ತಪ್ರತಿ ವಿಭಾಗ

ಸಿ. ದೃಶ್ಯ ಧ್ವನಿ ವಿಭಾಗ

ಡಿ. ಸಂಶೋಧನಾ ವಿಧಿ–ವಿಧಾನ ವಿಭಾಗ

ಇ. ಗ್ರಂಥ ಸಂಪಾದನೆ ವಿಭಾಗ

ಎಫ್. ವಿಶ್ವ ಸಂಗೀತ ಶಾಸ್ತ್ರ ವಿಭಾಗ

ಜಿ. ಭಾಷಾಂತರ ವಿಭಾಗ

ಎಚ್. ವಸ್ತುಸಂಗ್ರಹಾಲಯ ಮತ್ತು ಪತ್ರಾಗಾರ ವಿಭಾಗ

IV. **ನೃತ್ಯ ಫ್ಯಾಕಲ್ಟಿ**

ಎ. ಭರತನಾಟ್ಯ ವಿಭಾಗ.

ಬಿ. ಕಥಕ್ ವಿಭಾಗ.

ಸಿ. ಕೂಚ್ಚುಪುಡಿ ವಿಭಾಗ.

ಡಿ. ಯಕ್ಷಗಾನ ಮತ್ತು ಜನಪದ ನೃತ್ಯ ವಿಭಾಗ.

V. **ಪ್ರದರ್ಶಕ ಕಲೆಗಳ ವಿಭಾಗ.**

ಎ. ವೇಷಭೂಷಣಗಳ ವಿಭಾಗ.

ಬಿ. ಚಿತ್ರ ಸಂಚಲನಾ ಕಲಾ (ಅನಿಮೇಶನ್) ವಿಭಾಗ.

ಸಿ. ಮಾನವಿಕಗಳ ವಿಭಾಗ.

ಡಿ. ಭಾರತೀಯ ಕಲೆಗಳು ಮತ್ತು ಸಂಸ್ಕೃತಿಯ ಇತಿಹಾಸ ವಿಭಾಗ.

ಇ. ಜನಪದಗೀತೆಗಳು, ಸಂಗೀತ ಮತ್ತು ನೃತ್ಯ ವಿಭಾಗ.

ಎಫ್. ಭಾಷಾಂತರ ವಿಭಾಗ.

ಜಿ. ವಸ್ತು ಸಂಗ್ರಹಾಲಯಗಳು ಮತ್ತು ಪತ್ರಗಾರ ವಿಭಾಗ.

**VI. ನಾಟಕ ಫ್ಯಾಕಲ್ಟಿ**

**VII. ವಿಶ್ವವಿದ್ಯಾಲಯವು ನಿರ್ಧರಿಸಬಹುದಾದ ಯಾವುದೇ ಇತರ ಫ್ಯಾಕಲ್ಟಿ.**

**42. ಆಯ್ಕೆ ಸಮಿತಿಗಳು.-** (1) ವಿಶ್ವವಿದ್ಯಾಲಯವು ನಿರ್ವಹಿಸುವ ಸಂಸ್ಥೆಗಳಲ್ಲಿಯ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು, ಸಹಾಯಕ ಪ್ರಾಧ್ಯಾಪಕರು ಮತ್ತು ಗ್ರಂಥಪಾಲರ ಹುದ್ದೆಗಳಿಗೆ ನೇಮಕ ಮಾಡುವ ಬಗ್ಗೆ ಕಾರ್ಯಕಾರಿ ಸಮಿತಿಗೆ ಶಿಫಾರಸ್ಸು ಮಾಡಲು ಒಂದು ಆಯ್ಕೆ ಸಮಿತಿ ಇರತಕ್ಕದ್ದು.

(2) ಕೆಳಕಂಡ ಕೋಷ್ಠಕದ (1)ನೇ ಅಂಕಣದಲ್ಲಿ ನಿರ್ದಿಷ್ಟಪಡಿಸಲಾದ ಹುದ್ದೆಗಳ ನೇಮಕಾತಿಗಾಗಿ ಆಯ್ಕೆ ಸಮಿತಿಯು ಕುಲಪತಿ, ಸರ್ಕಾರದ ಒಬ್ಬ ನಾಮನಿರ್ದೇಶಿತ ವ್ಯಕ್ತಿ ಮತ್ತು ಸದರಿ ಕೋಷ್ಠಕದ (2)ನೇ ಅಂಕಣದಲ್ಲಿಯ ಸಂವಾದಿ ನಮೂದಿನಲ್ಲಿ ನಿರ್ದಿಷ್ಟಪಡಿಸಲಾದ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು ಮತ್ತು ಇಲಾಖಾ ಮುಖ್ಯಸ್ಥರಿಲ್ಲದಿರುವ ಕಡೆ ಪ್ರಾಧ್ಯಾಪಕರು, ಸಹಪ್ರಾಧ್ಯಾಪಕರು ಅಥವಾ ಸಹಾಯಕ ಪ್ರಾಧ್ಯಾಪಕರ ನೇಮಕಾತಿಯ ಸಂದರ್ಭದಲ್ಲಿ ಕಾರ್ಯಕಾರಿ ಸಮಿತಿಯು ತನ್ನ ಸದಸ್ಯರ ಪೈಕಿಯಿಂದ ನಾಮನಿರ್ದೇಶನ ಮಾಡಿರುವ ವ್ಯಕ್ತಿಯನ್ನು ಸಹ ಒಳಗೊಂಡಿರತಕ್ಕದ್ದು.

**ಕೋಷ್ಟಕ**

| 1 | | 2 |
|---|---|---|
| ಪ್ರಾಧ್ಯಾಪಕರು ಅಥವಾ ಸಹಪ್ರಾಧ್ಯಾಪಕರು | (i) | ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರು, ಅವರು ಪ್ರಾಧ್ಯಾಪಕರಾಗಿದ್ದರೆ. |
| | (ii) | ಕುಲಪತಿಯವರಿಂದ ನಾಮ ನಿರ್ದೇಶಿತರಾಗಬೇಕಾದ ಒಬ್ಬ ಡೀನ್ ಅಥವಾ ಪ್ರಾಧ್ಯಾಪಕರು. |
| | (iii) | ಪ್ರಾಧ್ಯಾಪಕರು ಅಥವಾ ಸಹಪ್ರಾಧ್ಯಾಪಕರಿಗೆ ಸಂಬಂಧಪಟ್ಟ ವಿಷಯದಲ್ಲಿ ವಿಶೇಷ ಜ್ಞಾನ ಅಥವಾ ಆಸಕ್ತಿಯುಳ್ಳ, ಪ್ರಶಾಸನಸಭೆಯಿಂದ ನಾಮನಿರ್ದೇಶಿತರಾದ ವಿಶ್ವವಿದ್ಯಾಲಯದ ಸೇವೆಯಲ್ಲಿರದ ಮೂವರು ವ್ಯಕ್ತಿಗಳು. |
| ಸಹಾಯಕ ಪ್ರಾಧ್ಯಾಪಕರು | (i) | ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರು. |
| | (ii) | ಕುಲಪತಿಯವರಿಂದ ನಾಮನಿರ್ದೇಶಿತರಾಗಬೇಕಾದ ಒಬ್ಬ ಪ್ರಾಧ್ಯಾಪಕರು. |
| | (iii) | ಸಹಾಯಕ ಪ್ರಾಧ್ಯಾಪಕರಿಗೆ ಸಂಬಂಧಪಟ್ಟ ವಿಷಯದಲ್ಲಿ ವಿಶೇಷ ಜ್ಞಾನ ಅಥವಾ ಆಸಕ್ತಿಯುಳ್ಳ, ಪ್ರಶಾಸನಸಭೆಯಿಂದ ನಾಮ ನಿರ್ದೇಶಿತರಾದ, ವಿಶ್ವವಿದ್ಯಾಲಯದ ಸೇವೆಯಲ್ಲಿರದ ಇಬ್ಬರು ವ್ಯಕ್ತಿಗಳು. |
| ಗ್ರಂಥಪಾಲ | (i) | ಗ್ರಂಥಾಲಯ ವಿಜ್ಞಾನ ಅಥವಾ ಗ್ರಂಥಾಲಯ ಆಡಳಿತದ ಬಗ್ಗೆ ವಿಶೇಷ ಜ್ಞಾನವಿರುವ ಪ್ರಶಾಸನ ಸಭೆಯಿಂದ ನಾಮನಿರ್ದೇಶಿತರಾಗಬೇಕಾದ, ವಿಶ್ವವಿದ್ಯಾಲಯದ ಸೇವೆಯಲ್ಲಿರದ ಇಬ್ಬರು ವ್ಯಕ್ತಿಗಳು. |
| | (ii) | ಪ್ರಶಾಸನಸಭೆಯಿಂದ ನಾಮ ನಿರ್ದೇಶಿತನಾದ ವಿಶ್ವವಿದ್ಯಾಲಯದ ಸೇವೆಯಲ್ಲಿರದ ಒಬ್ಬ ವ್ಯಕ್ತಿ. |

**ವಿವರಣೆ.-I.** ಅಂತರ ವಿದ್ಯಾವಿಷಯಗಳ ಯೋಜನೆಗಾಗಿ ನೇಮಕಾತಿಗಳನ್ನು ಮಾಡುತ್ತಿರುವಲ್ಲಿ, ಯೋಜನೆಯ ಮುಖ್ಯಸ್ಥನನ್ನು ಸಂಬಂಧಪಟ್ಟ ಇಲಾಖೆಯ ಮುಖ್ಯಸ್ಥನೆಂದು ಭಾವಿಸತಕ್ಕದ್ದು.

**ವಿವರಣೆ.-II.** ನಾಮನಿರ್ದೇಶಿತರಾಗಬೇಕಾದ ಪ್ರಾಧ್ಯಾಪಕರು, ಆಯ್ಕೆ ಮಾಡಲಾಗುವ ವಿಶೇಷ ವಿಷಯಕ್ಕೆ ಸಂಬಂಧಿಸಿದ ಪ್ರಾಧ್ಯಾಪಕರಾಗಿರತಕ್ಕದ್ದು ಮತ್ತು ಕುಲಪತಿಯವರು, ಪ್ರಾಧ್ಯಾಪಕರನ್ನು ನಾಮನಿರ್ದೇಶಿಸುವುದಕ್ಕೆ ಮುಂಚೆ ಇಲಾಖಾ ಮುಖ್ಯಸ್ಥರು ಮತ್ತು ಫ್ಯಾಕಲ್ಟಿ ಡೀನರೊಂದಿಗೆ ಸಮಾಲೋಚಿಸತಕ್ಕದ್ದು.

**ವಿವರಣೆ.-III.** (1) (2)ನೇ ಅಂಕಣದಲ್ಲಿ ಉಲ್ಲೇಖಿಸಲಾದ ವಿಶೇಷ ವಿಷಯಕ್ಕೆ ಸಂಬಂಧಿಸಿದಂತೆ, ಸಂದರ್ಭಾನುಸಾರ, ಕಡೇ ಪಕ್ಷ ನಾಲ್ವರ ಪೈಕಿ ಮೂವರು ಅಥವಾ ಮೂವರು ಸದಸ್ಯರ ಪೈಕಿ ಇಬ್ಬರು ಆಯ್ಕೆ ಸಮಿತಿಯ ಸಭೆಯಲ್ಲಿ ಹಾಜರಿರತಕ್ಕದ್ದು.

(2) ಕುಲಪತಿಯವರು ಆಯ್ಕೆ ಸಮಿತಿಯ ಸಭೆಯ ಅಧ್ಯಕ್ಷತೆ ವಹಿಸತಕ್ಕದ್ದು.

(3) ಆಯ್ಕೆ ಸಮಿತಿಯ ಸಭೆಗಳನ್ನು ಕುಲಪತಿಯವರು ಸಮಾವೇಶಗೊಳಿಸತಕ್ಕದ್ದು.

(4) ಶಿಫಾರಸ್ಸುಗಳನ್ನು ಮಾಡುವಲ್ಲಿ ಆಯ್ಕೆ ಸಮಿತಿಯು ಅನುಸರಿಸಬೇಕಾದ ಕಾರ್ಯವಿಧಾನವು ನಿಯಮಿಸಬಹುದಾದಂತೆ ಇರತಕ್ಕದ್ದು.

(5) ಆಯ್ಕೆ ಸಮಿತಿಯು ಮಾಡಿದ ಶಿಫಾರಸ್ಸುಗಳನ್ನು ಅಂಗೀಕರಿಸಲು ಪ್ರಶಾಸನಸಭೆಗೆ ಸಾಧ್ಯವಾಗದಿದ್ದರೆ, ಅದು ಕಾರಣಗಳನ್ನು ದಾಖಲಿಸಿ, ಅಂತಿಮ ಆದೇಶಗಳಿಗಾಗಿ ಪ್ರಕರಣವನ್ನು ಕುಲಾಧಿಪತಿಯವರಿಗೆ ಒಪ್ಪಿಸತಕ್ಕದ್ದು.

(6) ತಾತ್ಕಾಲಿಕ ಹುದ್ದೆಗಳಿಗೆ ಮಾಡುವ ನೇಮಕಾತಿಗಳನ್ನು ಈ ಕೆಳಗೆ ಸೂಚಿಸಲಾದಂತೆ ಮಾಡತಕ್ಕದ್ದು:-

(i) ತಾತ್ಕಾಲಿಕ ಖಾಲಿಸ್ಥಾನಗಳು ಒಂದು ಶೈಕ್ಷಣಿಕ ವರ್ಷಕ್ಕಿಂತ ಹೆಚ್ಚಿನ ಅವಧಿಯವರೆಗಿನದಾಗಿದ್ದರೆ, ಅದನ್ನು ಆಯ್ಕೆ ಸಮಿತಿಯ ಸಲಹೆಯೊಂದಿಗೆ, ಪೂರ್ವೋಕ್ತ ಉಪಬಂಧಗಳಲ್ಲಿ ಸೂಚಿಸಿರುವ ಪ್ರಕ್ರಿಯೆಗನುಸಾರವಾಗಿ ಭರ್ತಿ ಮಾಡತಕ್ಕದ್ದು:

ಪರಂತು, ಕೆಲಸದ ಹಿತಾಸಕ್ತಿಯಲ್ಲಿ ಖಾಲಿ ಸ್ಥಾನವನ್ನು ಭರ್ತಿ ಮಾಡುವುದು ಅಗತ್ಯವೆಂದು ಕುಲಪತಿಯವರಿಗೆ ಮನದಟ್ಟಾದರೆ, (2)ನೇ ಉಪ-ಖಂಡದಲ್ಲಿ ಉಲ್ಲೇಖಿಸಲಾದ ಸ್ಥಳೀಯ ಆಯ್ಕೆ ಸಮಿತಿಯು ಆರು ತಿಂಗಳಿಗೆ ಮೀರದ ಅವಧಿಗೆ, ತಾತ್ಕಾಲಿಕ ಆಧಾರದ ಮೇಲೆ ನೇಮಕಾತಿ ಮಾಡಬಹುದು.

(ii) ತಾತ್ಕಾಲಿಕ ಖಾಲಿ ಸ್ಥಾನವು ಒಂದು ವರ್ಷಕ್ಕಿಂತ ಕಡಿಮೆ ಅವಧಿಯದಾಗಿದ್ದರೆ ಅಂಥ ಖಾಲಿಸ್ಥಾನಕ್ಕೆ ನೇಮಕಾತಿಯನ್ನು, ಸಂಬಂಧಪಟ್ಟ ಫ್ಯಾಕಲ್ಟಿಯ ಡೀನ್, ಇಲಾಖಾ ಮುಖ್ಯಸ್ಥ ಹಾಗೂ ಕುಲಪತಿಯವರಿಂದ ನಾಮನಿರ್ದೇಶಿತರಾದ ವ್ಯಕ್ತಿ ಇವರನ್ನು ಒಳಗೊಂಡಿರುವ ಸ್ಥಳೀಯ ಆಯ್ಕೆ ಸಮಿತಿಯ ಶಿಫಾರಸ್ಸಿನ ಮೇಲೆ ಮಾಡತಕ್ಕದ್ದು:

ಪರಂತು, ಒಬ್ಬನೇ ವ್ಯಕ್ತಿಯು ಡೀನ್ ಮತ್ತು ಇಲಾಖಾ ಮುಖ್ಯಸ್ಥರ ಪದವನ್ನು ಧಾರಣ ಮಾಡಿದ್ದರೆ ಆಯ್ಕೆ ಸಮಿತಿಯು ಕುಲಪತಿಯವರಿಂದ ನಾಮನಿರ್ದೇಶಿತರಾದ ಇಬ್ಬರು ವ್ಯಕ್ತಿಗಳನ್ನು ಒಳಗೊಂಡಿರಬಹುದು:

ಮತ್ತು ಪರಂತು, ಅಧ್ಯಾಪಕ ಹುದ್ದೆಗಳಲ್ಲಿ ಮರಣ ಅಥವಾ ಇತರ ಯಾವುದೇ ಕಾರಣಕ್ಕಾಗಿ ಇದ್ದಕ್ಕಿದ್ದಂತೆ ಉಂಟಾದ ಆಕಸ್ಮಿಕ ಖಾಲಿ ಸ್ಥಾನದ ಸಂದರ್ಭದಲ್ಲಿ, ಡೀನರು, ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರೊಂದಿಗೆ ಸಮಾಲೋಚಿಸಿ, ಒಂದು ತಿಂಗಳಿಗಾಗಿ ತಾತ್ಕಾಲಿಕ ನೇಮಕಾತಿಯನ್ನು ಮಾಡಿ, ಅಂಥ ನೇಮಕಾತಿಯ ಬಗ್ಗೆ ಕುಲಪತಿಯವರಿಗೆ ಮತ್ತು ಕುಲಸಚಿವರಿಗೆ ವರದಿ ಮಾಡತಕ್ಕದ್ದು.

(iii) ತಾತ್ಕಾಲಿಕವಾಗಿ ನೇಮಕಗೊಂಡ ಯಾವೊಬ್ಬ ಬೋಧಕನು ತಾನು ಈ ಶಾಸನಗಳ ಅಡಿಯಲ್ಲಿ ನೇಮಕಾತಿಗಾಗಿ ಇರುವ ನಿಯತ ಆಯ್ಕೆ ಸಮಿತಿಯಿಂದ ಶಿಫಾರಸ್ಸು ಪಡೆದಿರದಿದ್ದರೆ, ಸಂದರ್ಭಾನುಸಾರ, ತಾತ್ಕಾಲಿಕ ಅಥವಾ ಖಾಯಂ ನೇಮಕಾತಿಗಾಗಿ ತದನಂತರ ಸ್ಥಳೀಯ ಆಯ್ಕೆ ಸಮಿತಿ ಅಥವಾ ಕ್ರಮಬದ್ಧ ಆಯ್ಕೆ ಸಮಿತಿಯಿಂದ ಆಯ್ಕೆಗೊಂಡ ಹೊರತು, ಅಂಥ ತಾತ್ಕಾಲಿಕ ಉದ್ಯೋಗದಲ್ಲಿ ಮುಂದುವರಿಯತಕ್ಕದ್ದಲ್ಲ.

## ಅಧ್ಯಾಯ – VII

## ವಿಶ್ವವಿದ್ಯಾಲಯದ ನಿಧಿಗಳು

**43. ಸಾಮಾನ್ಯ ನಿಧಿಗಳು.-** ವಿಶ್ವವಿದ್ಯಾಲಯವು ಒಂದು ಸಾಮಾನ್ಯ ನಿಧಿಯನ್ನು ಹೊಂದಿರತಕ್ಕದ್ದು, ಅದಕ್ಕೆ,-

(ಎ) ಶುಲ್ಕಗಳು, ಅನುದಾನಗಳು, ದಾನಗಳು ಮತ್ತು ಕೊಡುಗೆಗಳು, ಯಾವುವಾದರೂ ಇದ್ದರೆ, ಅವುಗಳಿಂದ ಬರುವ ವರಮಾನ;

(ಬಿ) ಕೇಂದ್ರ ಸರ್ಕಾರದಿಂದ ಮಾಡಲಾದ ಯಾವುದೇ ವಂತಿಗೆ ಅಥವಾ ಅನುದಾನಗಳು, ಯಾವುವಾದರೂ ಇದ್ದರೆ, ಅವು ಅಥವಾ ಯಾವುದೇ ರಾಜ್ಯ ಸರ್ಕಾರ, ವಿಶ್ವವಿದ್ಯಾಲಯ ಅನುದಾನದ ಆಯೋಗ ಅಥವಾ ಅಂಥದೇ ಪ್ರಾಧಿಕಾರ, ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ಅದರ ನಿಯಂತ್ರಣದಲ್ಲಿರುವ ಯಾವುದೇ ನಿಗಮದಿಂದ ಮಾಡಲಾದ ಯಾವುದೇ ವಂತಿಗೆ ಅಥವಾ ಅನುದಾನ; ಮತ್ತು

(ಸಿ) ದತ್ತಿಗಳು ಮತ್ತು ಇತರ ಸ್ವೀಕೃತಿಗಳು,

– ಜಮೆಯಾಗತಕ್ಕದ್ದು.

**44. ಇತರ ನಿಧಿಗಳು.–** ವಿಶ್ವವಿದ್ಯಾಲಯವು, ಶಾಸನಗಳ ಮೂಲಕ ನಿಯಮಿಸಬಹುದಾದಂಥ ಇತರ ನಿಧಿಗಳನ್ನು ಹೊಂದಿರಬಹುದು.

**45. ಸಾಲ ಪಡೆದುಕೊಳ್ಳುವ ಅಧಿಕಾರ.–** ವಿಶ್ವವಿದ್ಯಾಲಯವು, ಶಾಸನಗಳ ಮೂಲಕ ನಿಯಮಿಸಬಹುದಾದ ಯಾವುವೇ ಉದ್ದೇಶಗಳಿಗಾಗಿ, ಒಂದು ಬ್ಯಾಂಕು ಅಥವಾ ನಿಗಮದಿಂದ ಹಣವನ್ನು ಸಾಲ ಪಡೆದುಕೊಳ್ಳಬಹುದು. ಸಾಲ ಪಡೆದುಕೊಂಡ ಹಣದ ಒಟ್ಟು ಮೊಬಲಗು ಐದು ಲಕ್ಷ ರೂಪಾಯಿಗಳನ್ನು ಮೀರುವಲ್ಲಿ, ಅಂಥ ಸಾಲಕ್ಕೆ ಸರ್ಕಾರದ ಪೂರ್ವ ಅನುಮೋದನೆಯನ್ನು ಪಡೆದುಕೊಳ್ಳತಕ್ಕದ್ದು.

**46. ನಿಧಿಗಳ ನಿರ್ವಹಣೆ.–** ವಿಶ್ವವಿದ್ಯಾಲಯದ ಎಲ್ಲ ನಿಧಿಗಳನ್ನು ಶಾಸನಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ನಿರ್ವಹಿಸತಕ್ಕದ್ದು.

**47. ಲೆಕ್ಕ ಪರಿಶೋಧನೆಗೆ ನಿರ್ದೇಶಿಸಲು ಸರ್ಕಾರದ ಅಧಿಕಾರ.–** ಸರ್ಕಾರವು ಅವಶ್ಯಕವೆಂದು ಭಾವಿಸಿದಾಗಲೆಲ್ಲಾ ತಾನು ನಿರ್ದೇಶಿಸಬಹುದಾದಂಥ ಲೆಕ್ಕ ಪರಿಶೋಧಕರಿಂದ ವಿಶ್ವವಿದ್ಯಾಲಯದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ ನಡೆಸುವಂತೆ ಆದೇಶಿಸುವ ಅಧಿಕಾರವನ್ನು ಹೊಂದಿರತಕ್ಕದ್ದು.

**48. ಹಣಕಾಸಿನ ಅಂದಾಜುಗಳು.–** (1) ಕುಲಪತಿಯವರು, ನಿಯಮಿಸಬಹುದಾದಂಥ ದಿನಾಂಕದಂದು ಅಥವಾ ಅದಕ್ಕಿಂತ ಮೊದಲು, ಮುಂಬರುವ ವರ್ಷಕ್ಕಾಗಿ ವಿಶ್ವವಿದ್ಯಾಲಯದ ಹಣಕಾಸು ಅಂದಾಜುಗಳನ್ನು ಸಿದ್ಧಪಡಿಸುವಂತೆ ಮತ್ತು ಅದನ್ನು ಅನುಮೋದನೆಗಾಗಿ ಪ್ರಶಾಸನ ಸಭೆಯ ಮುಂದೆ ಇಡುವಂತೆ ಮಾಡತಕ್ಕದ್ದು.

(2) ಪ್ರಶಾಸನ ಸಭೆಯು ತಾನು ಸೂಕ್ತವೆಂದು ಭಾವಿಸುವಂಥ ಮಾರ್ಪಾಟುಗಳನ್ನು ಮಾಡಿ ಹಣಕಾಸು ಅಂದಾಜುಗಳನ್ನು ಅನುಮೋದಿಸಬಹುದು ಮತ್ತು ಪ್ರಶಾಸನ ಸಭೆ ಅನುಮೋದಿಸಿದ ಹಣಕಾಸು ಅಂದಾಜುಗಳಿಗನುಸಾರವಾಗಿ ಹೊರತು ಯಾವ ವೆಚ್ಚವನ್ನೂ ಮಾಡತಕ್ಕದ್ದಲ್ಲ.

**49. ವಾರ್ಷಿಕ ಲೆಕ್ಕಪತ್ರಗಳು ಮತ್ತು ಲೆಕ್ಕ ಪರಿಶೋಧನೆ.–** (1) ವಿಶ್ವವಿದ್ಯಾಲಯದ ವಾರ್ಷಿಕ ಲೆಕ್ಕ-ಪತ್ರಗಳನ್ನು ಪ್ರಶಿಕ್ಷಣ ಪರಿಷತ್ತಿನ ನಿರ್ದೇಶನದ ಮೇರೆಗೆ ಸಿದ್ಧಪಡಿಸತಕ್ಕದ್ದು.

(2) ಹಾಗೆ ಸಿದ್ಧಪಡಿಸಿದ ವಾರ್ಷಿಕ ಲೆಕ್ಕಪತ್ರಗಳನ್ನು ಪ್ರಶಾಸನ ಸಭೆಯು ತನ್ನ ಮುಂದಿನ ನಿಕಟಸಭೆಯಲ್ಲಿ ಪರಿಗಣಿಸತಕ್ಕದ್ದು. ಪ್ರಶಾಸನ ಸಭೆಯು ಅದರ ಸಂಬಂಧದಲ್ಲಿ ಒಂದು ನಿರ್ಣಯವನ್ನು ಹೊರಡಿಸಬಹುದು ಮತ್ತು ಅದನ್ನು ಪ್ರಶಿಕ್ಷಣ ಪರಿಷತ್ತಿಗೆ ತಿಳಿಸಬಹುದು. ಪ್ರಶಿಕ್ಷಣ ಪರಿಷತ್ತು ಪ್ರಶಾಸನ ಸಭೆಯು ಮಾಡಿದ ಸಲಹೆಗಳನ್ನು ಪರಿಗಣಿಸತಕ್ಕದ್ದು ಮತ್ತು ತಾನು ಸೂಕ್ತವೆಂದು ಭಾವಿಸುವಂತ: ಕ್ರಮವನ್ನು ಅದರ ಬಗ್ಗೆ ತೆಗೆದುಕೊಳ್ಳತಕ್ಕದ್ದು ಮತ್ತು ತನ್ನ ಮುಂದಿನ ಸಭೆಯಲ್ಲಿ ತಾನು ತೆಗೆದುಕೊಂಡ ಕ್ರಮವನ್ನು ಅಥವಾ ಕ್ರಮ ಕೈಗೊಳ್ಳುವುದಕ್ಕೆ ಕಾರಣಗಳನ್ನು ಪ್ರಶಾಸನ ಸಭೆಗೆ ತಿಳಿಸತಕ್ಕದ್ದು.

(3) ವಿಶ್ವವಿದ್ಯಾಲಯದ ಲೆಕ್ಕಪತ್ರಗಳನ್ನು ರಾಜ್ಯ ಲೆಕ್ಕಪತ್ರಗಳ ಇಲಾಖೆಯ ನಿಯಂತ್ರಕರು ವರ್ಷಕ್ಕೊಮ್ಮೆ ಏಪ್ರೀಲ್ ತಿಂಗಳಲ್ಲಿ ಲೆಕ್ಕಪರಿಶೋಧನೆ ಮಾಡತಕ್ಕದ್ದು.

(4) ಹಾಗೆ ಲೆಕ್ಕಪರಿಶೋಧನೆ ಮಾಡಿದ ಲೆಕ್ಕಪತ್ರಗಳನ್ನು ಪ್ರಶಾಸನ ಸಭೆಯಮುಂದೆ ಇರಿಸತಕ್ಕದ್ದು ಮತ್ತು ತದನಂತರ ಅದನ್ನು ಪ್ರತಿ ವರ್ಷದ ಸೆಪ್ಟೆಂಬರ ಅಂತ್ಯಕ್ಕೆ ಮುಂಚೆ ತನ್ನ ಟೀಕೆಟಿಪ್ಪಣಿಗಳೊಡನೆ ರಾಜ್ಯ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು. ರಾಜ್ಯ ಸರ್ಕಾರವು ಅದನ್ನು ರಾಜ್ಯ ವಿಧಾನ ಮಂಡಳದ ಮುಂದೆ ಅದರ ನಂತರದ ನಿಕಟ ಅಧಿವೇಶನದಲ್ಲಿ ಇರಿಸತಕ್ಕದ್ದು.

**50. ವಾರ್ಷಿಕ ವರದಿ.-** (1) ಪ್ರಶಿಕ್ಷಣ ಪರಿಷತ್ತು ಪ್ರತಿಯೊಂದು ಹಣಕಾಸು ವರ್ಷಕ್ಕೆ, ಸರ್ಕಾರವು ನಿರ್ದಿಷ್ಟಪಡಿಸಬಹುದಾದಂಥ ವಿವರಗಳನ್ನು ಒಳಗೊಂಡ ವಾರ್ಷಿಕ ವರದಿಯನ್ನು ಸಿದ್ಧಪಡಿಸತಕ್ಕದ್ದು ಮತ್ತು ಶಾಸನಗಳ ಮೂಲಕ ನಿಯಮಿಸಬಹುದಾದಂಥ ದಿನಾಂಕಗಳಂದು ಅಥವಾ ಅದಕ್ಕೆ ಮೊದಲು ಪ್ರಶಾಸನ ಸಭೆಗೆ ಸಲ್ಲಿಸತಕ್ಕದ್ದು. ಪ್ರಶಾಸನ ಸಭೆಯು ಅವುಗಳ ಮೇಲೆ ನಿರ್ಣಯಗಳನ್ನು ಹೊರಡಿಸಬಹುದು ಮತ್ತು ಪ್ರಶಿಕ್ಷಣ ಪರಿಷತ್ತು ಅದಕ್ಕನುಸಾರವಾಗಿ ಕ್ರಮಕೈಗೊಳ್ಳತಕ್ಕದ್ದು. ಕೈಗೊಳ್ಳಲಾದ ಕ್ರಮವನ್ನು ಪ್ರಶಾಸನ ಸಭೆಗೆ ತಿಳಿಸತಕ್ಕದ್ದು.

(2) ವಾರ್ಷಿಕ ವರದಿಯ ಪ್ರತಿಗಳನ್ನು ಹಾಗೂ ಅವುಗಳ ಮೇಲಿನ ಪ್ರಶಾಸನ ಸಭೆಯ ನಿರ್ಣಯಗಳನ್ನು ಸರ್ಕಾರಕ್ಕೆ ಕಳುಹಿಸತಕ್ಕದ್ದು ಮತ್ತು ರಾಜ್ಯ ವಿಧಾನಮಂಡಲದ ಉಭಯ ಸದನಗಳ ಮುಂದೆ ಅವುಗಳನ್ನು ಮಂಡಿಸತಕ್ಕದ್ದು.

## ಅಧ್ಯಾಯ – VIII

## ಸೇವಾ ಷರತ್ತುಗಳು

**51. ನಿವೃತ್ತಿ ವೇತನ, ಉಪದಾನ ಮೊದಲಾದವುಗಳು.-** (1) ವಿಶ್ವವಿದ್ಯಾಲಯವು ವಿಶ್ವವಿದ್ಯಾಲಯದಿಂದ ನಿಯೋಜಿತರಾದ ಅಧಿಕಾರಿಗಳು, ಅಧ್ಯಾಪಕರು ಮತ್ತು ಇತರ ವ್ಯಕ್ತಿಗಳ ಪ್ರಯೋಜನಕ್ಕಾಗಿ ನಿಯಮಿಸ ಬಹುದಾದಂಥ ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೊಳಪಟ್ಟು ತಾನು ಉಚಿತವೆಂದು ಭಾವಿಸುವಂಥ ನಿವೃತ್ತಿ ವೇತನ, ಉಪದಾನ, ವಿಮೆ ಮತ್ತು ಭವಿಷ್ಯ ನಿಧಿಗಳನ್ನು ಪ್ರಾರಂಭಿಸತಕ್ಕದ್ದು.

(2) ವಿಶ್ವವಿದ್ಯಾಲಯವು, (1)ನೇ ಉಪ-ಪ್ರಕರಣದ ಅಡಿಯಲ್ಲಿ ಭವಿಷ್ಯ ನಿಧಿಯನ್ನು ಪ್ರಾರಂಭಿಸಿರುವಲ್ಲಿ, ಸರ್ಕಾರವು, ಭವಿಷ್ಯ ನಿಧಿಗಳ ಅಧಿನಿಯಮ, 1925 (1925ರ ಕೇಂದ್ರಾಧಿನಿಯಮ 19)ರ ಉಪಬಂಧಗಳು, ವಿಶ್ವವಿದ್ಯಾಲಯವು ಒಂದು ಸ್ಥಳೀಯ ಪ್ರಾಧಿಕಾರವೆಂಬಂತೆ ಮತ್ತು ನಿಧಿಯು ಸರ್ಕಾರಿ ಭವಿಷ್ಯ ನಿಧಿಯೆಂಬಂತೆ ಅಂಥ ನಿಧಿಗೆ ಅನ್ವಯವಾಗತಕ್ಕದ್ದೆಂದು ಘೋಷಿಸಬಹುದು.

(3) ವಿಶ್ವವಿದ್ಯಾಲಯವು, ಹಣಕಾಸು ಸಮಿತಿಯೊಂದಿಗೆ ಸಮಾಲೋಚಿಸಿ ತಾನು ನಿರ್ಧರಿಸ ಬಹುದಾದಂಥ ರೀತಿಯಲ್ಲಿ, ಭವಿಷ್ಯ ನಿಧಿಯ ಮೊಬಲಗನ್ನು ತೊಡಗಿಸಬಹುದು.

**52.. ನೇಮಕಾತಿ ವಿಧಾನ ಮತ್ತು ಸೇವಾ ಷರತ್ತುಗಳು.-** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು, ವಿಶ್ವವಿದ್ಯಾಲಯದಲ್ಲಿ ನಿಯೋಜಿತರಾದ ಅಧಿಕಾರಿಗಳು, ಅಧ್ಯಾಪಕರು ಮತ್ತು ಇತರ ವ್ಯಕ್ತಿಗಳ ನೇಮಕಾತಿ, ಆಯ್ಕೆಯ ಕಾರ್ಯವಿಧಾನ, ವೇತನ ಮತ್ತು ಭತ್ಯಗಳು ಮತ್ತು ಇತರ ಸೇವಾ ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು.

**ವಿವರಣೆ.-** ಈ ಪ್ರಕರಣದ ಉದ್ದೇಶಗಳಿಗಾಗಿ, "ಅಧಿಕಾರಿಗಳು" ಎಂಬ ಪದವು ಕುಲಾಧಿಪತಿ ಮತ್ತು ಸಹ ಕುಲಾಧಿಪತಿಯವರನ್ನು ಒಳಗೊಳ್ಳತಕ್ಕದ್ದಲ್ಲ.

**53. ವಿಭಾಗದ ಮುಖ್ಯಸ್ಥರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು.-** (1) ವಿಶ್ವವಿದ್ಯಾಲಯದ ಪ್ರತಿಯೊಂದು ವಿಭಾಗದ, ಪ್ರಾಧ್ಯಾಪಕರಾಗಿರುವ ಒಬ್ಬರನ್ನು ಮುಖ್ಯಸ್ಥರನ್ನಾಗಿ ಹೊಂದಿರತಕ್ಕದ್ದು ಮತ್ತು ಅವರ

ಕರ್ತವ್ಯಗಳು ಮತ್ತು ಪ್ರಕಾರ್ಯಗಳು ಮತ್ತು ನೇಮಕಾತಿಯ ನಿಬಂಧನೆಗಳು ಮತ್ತು ಷರತ್ತುಗಳು ನಿಯಮಿಸಬಹುದಾದಂತೆ ಇರತಕ್ಕದ್ದು:

ಪರಂತು, ಯಾವುದೇ ಇಲಾಖೆಯಲ್ಲಿ ಒಬ್ಬರಿಗಿಂತ ಹೆಚ್ಚು ಮಂದಿ ಪ್ರಾಧ್ಯಾಪಕರಿದ್ದರೆ, ಇಲಾಖಾ ಮುಖ್ಯಸ್ಥರನ್ನು ನಿಯಮಿಸಬಹುದಾದ ರೀತಿಯಲ್ಲಿ ನೇಮಕ ಮಾಡತಕ್ಕದ್ದು:

ಮತ್ತು ಪರಂತು, ಇಲಾಖೆಯಲ್ಲಿ ಪ್ರಾಧ್ಯಾಪಕರು ಇಲ್ಲದಿದ್ದಲ್ಲಿ, ಸಹ ಪ್ರಾಧ್ಯಾಪಕರು ಅಥವಾ ಸಹಾಯಕ ಪ್ರಾಧ್ಯಾಪಕರನ್ನು ನಿಯಮಿಸಲಾದ ರೀತಿಯಲ್ಲಿ ಇಲಾಖಾ ಮುಖ್ಯಸ್ಥರನ್ನಾಗಿ ನೇಮಕ ಮಾಡಬಹುದು.

(2) ಪ್ರಾಧ್ಯಾಪಕರು ಅಥವಾ ಸಹ-ಪ್ರಾಧ್ಯಾಪಕರು ಅಥವಾ ಸಹಾಯಕ ಪ್ರಾಧ್ಯಾಪಕರಿಗೆ ಇಲಾಖಾ ಮುಖ್ಯಸ್ಥರ ಹುದ್ದೆಯನ್ನು ನಿರಾಕರಿಸುವ ಅವಕಾಶವಿರತಕ್ಕದ್ದು.

(3) ಇಲಾಖಾ ಮುಖ್ಯಸ್ಥನಾಗಿ ನೇಮಕಗೊಂಡ ವ್ಯಕ್ತಿಯು, ಮೂರು ವರ್ಷಗಳ ಅವಧಿಯವರೆಗೆ ಇಲಾಖಾ ಮುಖ್ಯಸ್ಥನಾಗಿ ಪದಧಾರಣ ಮಾಡತಕ್ಕದ್ದು ಮತ್ತು ಮರು ನೇಮಕಾತಿಗೆ ಅರ್ಹರಾಗಿರತಕ್ಕದ್ದು.

(4) ಇಲಾಖಾ ಮುಖ್ಯಸ್ಥನು ತನ್ನ ಪದಾವಧಿಯ ಯಾವುದೇ ಕಾಲದಲ್ಲಿ ತನ್ನ ಪದಕ್ಕೆ ರಾಜೀನಾಮೆ ನೀಡಬಹುದು.

(5) ಇಲಾಖಾ ಮುಖ್ಯಸ್ಥನು ನಿಯಮಿಸಬಹುದಾದ ಅಂಥ ಪ್ರಕಾರ್ಯಗಳನ್ನು ನೆರವೇರಿಸತಕ್ಕದ್ದು.

**54. ಫ್ಯಾಕಲ್ಟಿಗಳ ಡೀನರ ಸೇವಾ ನಿಬಂಧನೆಗಳು ಮತ್ತು ಷರತ್ತುಗಳು**.- ಫ್ಯಾಕಲ್ಟಿಯ ಪ್ರತಿಯೊಬ್ಬ ಡೀನರು ಮೊದಲನೇ ಶಾಸನಗಳಲ್ಲಿ ನಿರ್ದಿಷ್ಟಪಡಿಸಲಾದಂಥ ರೀತಿಯಲ್ಲಿ ನೇಮಿತರಾಗತಕ್ಕದ್ದು ಮತ್ತು ಅವರು ಅಂಥ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**55. ಅಧ್ಯಾಪಕರ ಕರ್ತವ್ಯಗಳು.**- (1) ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ವಿದ್ಯಾ ಸಂಸ್ಥೆಯ ಪ್ರತಿಯೊಬ್ಬ ಅಧ್ಯಾಪಕನು, ಕಾಲಕಾಲಕ್ಕೆ ವಿಶ್ವವಿದ್ಯಾಲಯದಿಂದ ಅವನಿಗೆ ವಹಿಸಲಾದ ಬೋಧನೆ, ಸಂಶೋಧನೆ, ಪರೀಕ್ಷೆ ಅಥವಾ ಶೈಕ್ಷಣಿಕ ಕಾರ್ಯಗಳಿಗೆ ಸಂಬಂಧಪಟ್ಟ ಕೆಲಸಗಳನ್ನು ನಿರ್ವಹಿಸತಕ್ಕದ್ದು.

(2) (1)ನೇ ಉಪಪ್ರಕರಣದ ಉದ್ದೇಶಗಳಿಗಾಗಿ, ವಿಶ್ವವಿದ್ಯಾಲಯದ ಮತ್ತು ವಿಶ್ವವಿದ್ಯಾಲಯಕ್ಕೆ ಸಂಯೋಜನೆಗೊಂಡ ಕಾಲೇಜಿನ ಸೇವೆಯಲ್ಲಿರುವ ಬೋಧಕ ಮತ್ತು ಬೋಧಕೇತರ ನೌಕರರನ್ನು ವಿಶ್ವವಿದ್ಯಾಲಯವು ಆಡಳಿತಾತ್ಮಕವಾಗಿ ನಿಯಂತ್ರಿಸತಕ್ಕದ್ದು ಮತ್ತು ಅವರು ಕಾಲಕಾಲಕ್ಕೆ ವಿಶ್ವವಿದ್ಯಾಲಯವು ನೀಡಿದ ಸೂಚನೆಗಳು ಅಥವಾ ಆದೇಶಗಳನ್ನು ಪಾಲಿಸತಕ್ಕದ್ದು.

**56. ಪರೀಕ್ಷಾ ಕಾರ್ಯವನ್ನು ನೆರವೇರಿಸುವ ಹೊಣೆ.-** (1) ಯಾವ ವ್ಯಕ್ತಿಗೆ ಪ್ರಶ್ನೆ ಪತ್ರಿಕೆಯನ್ನು ಸಿದ್ಧಪಡಿಸುವುದು, ಪರಿವೀಕ್ಷಣೆ, ಮೇಲ್ವಿಚಾರಣೆ, ಮೌಲ್ಯಮಾಪನ, ಪ್ರಾಯೋಗಿಕ ಪರೀಕ್ಷೆಗಳನ್ನು ನಡೆಸುವುದು, ಪ್ರಶ್ನೆ ಪತ್ರಿಕೆಗಳ ಮತ್ತು ಉತ್ತರ ಪತ್ರಿಕೆಗಳ ಮುದ್ರಣ ಮತ್ತು ಅಂಕಪಟ್ಟಿಯನ್ನು ಸಿದ್ಧಪಡಿಸುವುದೇ ಮುಂತಾದ ಪರೀಕ್ಷೆಗೆ ಸಂಬಂಧಿಸಿದ ಕಾರ್ಯವನ್ನು ಮತ್ತು ಅದಕ್ಕೆ ಪ್ರಾಸಂಗಿಕವಾದ ಮತ್ತು ಅದಕ್ಕೆ ಸಂಬಂಧಿಸಿದಂಥ ಎಲ್ಲ ಚಟುವಟಿಕೆಗಳನ್ನು ವಹಿಸಲಾಗಿದೆಯೋ ಆ ವ್ಯಕ್ತಿಯು, ಅಂಥ ಕರ್ತವ್ಯಗಳನ್ನು ಶೈಕ್ಷಣಿಕ ಗುಣಮಟ್ಟಗಳನ್ನು ಸಾಧಿಸುವುದಕ್ಕಾಗಿ ವಿವೇಕದಿಂದ ಮತ್ತು ಅತ್ಯಂತ ಪ್ರಾಮಾಣಿಕತೆಯಿಂದ ನಿರ್ವಹಿಸತಕ್ಕದ್ದು.

(2) (1)ನೇ ಉಪಪ್ರಕರಣದ ಅಡಿಯಲ್ಲಿ ಪರೀಕ್ಷಾ ಕಾರ್ಯವನ್ನು ಹಂಚಿಕೆ ಮಾಡಲಾಗಿರುವ ಯಾವೊಬ್ಬ ವ್ಯಕ್ತಿಯು, ಕರ್ತವ್ಯಗಳ ಉಲ್ಲಂಘನೆಯ ತಪ್ಪಿತಸ್ಥನೆಂದು ಕಂಡು ಬಂದರೆ ಅಥವಾ ದುರ್ನಡತೆಯಲ್ಲಿ ಪಾಲ್ಗೊಂಡಿದ್ದರೆ, ಅಪರಾಧ ನಿರ್ಣಯವಾದ ತರುವಾಯ, ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ

ಕಾರಾವಾಸದಿಂದ ಅಥವಾ ಎರಡು ಸಾವಿರ ರೂಪಾಯಿಗಳ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡಿತನಾಗತಕ್ಕದ್ದು.

(3) ಕುಲಸಚಿವರು (ಮೌಲ್ಯಮಾಪನ) ನೀಡಿದ ದೂರಿನ ಮೇಲಲ್ಲದೆ ಈ ಪ್ರಕರಣದ ಅಡಿಯಲ್ಲಿ, ದಂಡನೀಯವಾದ ಒಂದು ಅಪರಾಧದ ಅಥವಾ ಅಂಥ ಅಪರಾಧದ ದುಷ್ಪ್ರೇರಣೆಯ ಸಂಜ್ಞಾನವನ್ನು ಯಾವುದೇ ನ್ಯಾಯಾಲಯವು ತೆಗೆದುಕೊಳ್ಳತಕ್ಕದ್ದಲ್ಲ.

**57. ಅಪರಾಧದ ದುಷ್ಪ್ರೇರಣೆಗಾಗಿ ಶಿಕ್ಷೆ.–** 56ನೇ ಪ್ರಕರಣದ ಅಡಿಯಲ್ಲಿ ದಂಡನೀಯವಾದ ಒಂದು ಅಪರಾಧವನ್ನು ಪ್ರಚೋದಿಸುವ ಅಥವಾ ದುಷ್ಪ್ರೇರಿಸುವ ಯಾವೊಬ್ಬ ವ್ಯಕ್ತಿಯು, ಅಪರಾಧ ನಿರ್ಣಯವಾದ ತರುವಾಯ, ಆ ಪ್ರಕರಣದಲ್ಲಿ ಅದಕ್ಕಾಗಿ ಉಪಬಂಧಿಸಲಾದ ಶಿಕ್ಷೆಯಿಂದಲೇ ದಂಡಿತನಾಗತಕ್ಕದ್ದು.

**58. ಕೆಲವು ಸಂಸ್ಥೆಗಳಿಗೆ ಮಾನ್ಯತೆ.–** (1) **ಸಂಶೋಧನೆ** ಅಥವಾ ನಿರ್ದಿಷ್ಟಪಡಿಸಿದ ಅಧ್ಯಯನಗಳನ್ನು ನಡೆಸುವ ಕಾಲೇಜುಗಳನ್ನು ಹೊರತುಪಡಿಸಿ, ವಿಶ್ವವಿದ್ಯಾಲಯ ಪ್ರದೇಶದ ಒಳಗೆ ಅಥವಾ ಹೊರಗೆ ಇರುವ ಯಾವುದೇ ಸಂಸ್ಥೆಯನ್ನು, ಶಾಸನಗಳ ಮೂಲಕ ನಿಯಮಿಸಬಹುದಾದಂಥ ಉದ್ದೇಶಕ್ಕಾಗಿ ಮತ್ತು ಅಂಥ ವಿಧಾನದಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟು, ಮಾನ್ಯತೆ ಪಡೆದ ಸಂಸ್ಥೆಯೆಂದು ಪ್ರಶಾಸನ ಸಭೆಯು ಮಾನ್ಯತೆ ನೀಡಬಹುದು.

(2) ಯಾವುದೇ ಅಂಥ ಮಾನ್ಯತೆಯನ್ನು ಶಾಸನಗಳ ಮೂಲಕ ನಿಯಮಿಸಬಹುದಾದಂಥ ವಿಧಾನದಲ್ಲಿ ಮತ್ತು ಅಂಥ ಕಾರಣಗಳಿಗಾಗಿ ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಹಿಂತೆಗೆದುಕೊಳ್ಳಬಹುದು ಅಥವಾ ಮಾರ್ಪಾಟು ಮಾಡಬಹುದು.

## ಅಧ್ಯಾಯ – IX

## ಸಂಕೀರ್ಣ ವಿಷಯಗಳು.

**59. ಅಧಿನಿಯಮವು ಇತರ ಅಧಿನಿಯಮಿತಿಗಳಿಗಿಂತ ಹೆಚ್ಚಿನ ಪ್ರಭಾವವುಳ್ಳದ್ದಾಗಿದೆ.–** (1) ಈ ಅಧಿನಿಯಮ ಮತ್ತು ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಯಾವುವೇ ಶಾಸನಗಳು ಅಥವಾ ನಿಯಮಗಳು ಅಥವಾ ವಿನಿಯಮಗಳು, ವಿಶ್ವವಿದ್ಯಾಲಯ ಪ್ರದೇಶದಲ್ಲಿರುವ ಯಾವುದೇ ಕಾಲೇಜಿಗೆ ಸಂಬಂಧಿಸಿದಂತೆ ಭಾರತ ಸಂವಿಧಾನದ ಏಳನೇ ಅನುಸೂಚಿಯ IIನೇ ಪಟ್ಟಿಯಲ್ಲಿ ನಿರೂಪಿಸಲಾದ ವಿಷಯಗಳ ಸಂಬಂಧದಲ್ಲಿ ಇತರ ಯಾವುದೇ ಅಧಿನಿಯಮಿತಿಯಲ್ಲಿ ಅದಕ್ಕೆ ಅಸಂಗತವಾಗಿ ಏನೇ ಇದ್ದರೂ, ಅವು ಪರಿಣಾಮಕಾರಿಯಾಗಿರತಕ್ಕದ್ದು.

**60. ಮಾಹಿತಿ ಪಡೆಯಲು ಅಧಿಕಾರ:–** ಈ ಅಧಿನಿಯಮದಲ್ಲಿ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಸರ್ಕಾರವು ಲಿಖಿತ ಆದೇಶದ ಮೂಲಕ ವಿಶ್ವವಿದ್ಯಾಲಯದ ವ್ಯವಹಾರಗಳಿಗೆ ಸಂಬಂಧಪಟ್ಟ ಯಾವುದೇ ವಿಷಯದ ಬಗ್ಗೆ ವಿಶ್ವವಿದ್ಯಾಲಯದಿಂದ ಯಾವುದೇ ಮಾಹಿತಿಯನ್ನು ಕೋರಬಹುದು ಮತ್ತು ವಿಶ್ವವಿದ್ಯಾಲಯವು, ಅಂಥ ಮಾಹಿತಿಯು ತನ್ನಲ್ಲಿ ಲಭ್ಯವಿದ್ದರೆ ಅಂಥ ಮಾಹಿತಿಯನ್ನು ಸೂಕ್ತ ಅವಧಿಯೊಳಗೆ ಸರ್ಕಾರಕ್ಕೆ ಒದಗಿಸತಕ್ಕದ್ದು:

ಪರಂತು ವಿಶ್ವವಿದ್ಯಾಲಯವು ರಹಸ್ಯ ಎಂದು ಪರಿಗಣಿಸುವ ಮಾಹಿತಿಯನ್ನು ಸಹ–ಕುಲಾಧಿಪತಿಯವರಿಗೆ ಸಲ್ಲಿಸಬಹುದು.

**61. ಪ್ರಥಮ ಕುಲಪತಿಯವರ ನೇಮಕ:–** 12 ನೇ ಪ್ರಕರಣದ (1)ನೇ ಉಪ ಪ್ರಕರಣದಲ್ಲಿ ಏನೇ ಇದ್ದರೂ, ಈ ಅಧಿನಿಯಮವು ಜಾರಿಗೆ ಬಂದ ದಿನಾಂಕದಿಂದ ಆರು ತಿಂಗಳುಗಳೊಳಗೆ ಪ್ರಥಮ ಕುಲಪತಿಯವರನ್ನು ನಾಲ್ಕು ವರ್ಷಗಳಿಗೆ ಮೀರದ ಅವಧಿಗಾಗಿ ಮತ್ತು ತಾನು ಸೂಕ್ತವೆಂದು ಭಾವಿಸುವಂಥ ಇತರ ಷರತ್ತುಗಳ ಮೇಲೆ ಸರ್ಕಾರವು ನೇಮಕ ಮಾಡತಕ್ಕದ್ದು:

ಪರಂತು ಪ್ರಥಮ ಕುಲಪತಿಯವರಾಗಿ ನೇಮಕಗೊಂಡ ವ್ಯಕ್ತಿಯು ತನ್ನ ಪದಾವಧಿಯಲ್ಲಿರುವಾಗ ಅರವತ್ತೈದು ವರ್ಷಗಳ ವಯಸ್ಸು ಪೂರ್ಣಗೊಂಡರೆ ಪದದಿಂದ ನಿವೃತ್ತರಾಗತಕ್ಕದ್ದು.

**62. ಪ್ರಥಮ ಕುಲಪತಿಯವರ ತಾತ್ಕಾಲಿಕ ಅಧಿಕಾರಗಳು.-** (1) ಪ್ರಶಾಸನ ಸಭೆ ಮತ್ತು ವಿಶ್ವವಿದ್ಯಾಲಯದ ಇತರ ಪ್ರಾಧಿಕಾರಗಳನ್ನು, ಈ ಅಧಿನಿಯಮವು ಪ್ರಾರಂಭಗೊಂಡ ದಿನಾಂಕದಿಂದ ಆರು ತಿಂಗಳೊಳಗೆ ಅಥವಾ ಅಧಿಸೂಚನೆಯ ಮೂಲಕ ಸರ್ಕಾರವು ನಿರ್ದೇಶಿಸಬಹುದಾದ ಒಂದು ವರ್ಷಕ್ಕೆ ಮೀರದಂಥ ಹೆಚ್ಚಿನ ಅವಧಿಯೊಳಗಾಗಿ ರಚಿಸಲು ವ್ಯವಸ್ಥೆ ಮಾಡುವುದು ಪ್ರಥಮ ಕುಲಪತಿಯವರ ಕರ್ತವ್ಯವಾಗಿರತಕ್ಕದ್ದು.

(2) ಪ್ರಥಮ ಕುಲಪತಿಯವರು, ಸರ್ಕಾರದೊಂದಿಗೆ ಸಮಾಲೋಚಿಸಿ, ವಿಶ್ವವಿದ್ಯಾಲಯದ ಕಾರ್ಯನಿರ್ವಹಣೆಗೆ ಅವಶ್ಯವಾಗಬಹುದಾದಂಥ ವಿನಿಯಮಗಳನ್ನು ರಚಿಸತಕ್ಕದ್ದು.

(3) (1)ನೇ ಉಪಪ್ರಕರಣದಡಿಯಲ್ಲಿ ರಚಿತವಾದ ಪ್ರಾಧಿಕಾರಗಳು, ಸರ್ಕಾರವು ಈ ಸಂಬಂಧದಲ್ಲಿ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂತಹ ದಿನಾಂಕದಿಂದ ತಮ್ಮ ಪ್ರಕಾರ್ಯಗಳನ್ನು ಪ್ರಾರಂಭಿಸತಕ್ಕದ್ದು.

(4) ತಕ್ಷಣ ಅವಶ್ಯಕವಾಗಬಹುದಾದಂಥ ಕರಡು ಶಾಸನಗಳನ್ನು ರಚಿಸುವುದು ಮತ್ತು ಅನುಮೋದನೆಗಾಗಿ ಅವುಗಳನ್ನು ಪ್ರಶಾಸನ ಸಭೆಗೆ ಸಲ್ಲಿಸುವುದು ಪ್ರಥಮ ಕುಲಪತಿಯವರ ಕರ್ತವ್ಯವಾಗಿರತಕ್ಕದ್ದು ಅಂಥ ಶಾಸನಗಳು ಹಾಗೆ ರಚನೆಯಾದ ತರುವಾಯ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾಗತಕ್ಕದ್ದು.

(5) ಈ ಅಧಿನಿಯಮದಲ್ಲಿ ಮತ್ತು ಶಾಸನಗಳಲ್ಲಿ ಏನೇ ಇದ್ದರೂ ಮತ್ತು ಒಂದು ಪ್ರಾಧಿಕಾರವನ್ನು ಕ್ರಮಬದ್ಧವಾಗಿ ರಚಿಸುವಂಥ ಕಾಲದವರೆಗೆ ಪ್ರಥಮ ಕುಲಪತಿಯವರು ಈ ಅಧಿನಿಯಮ ಮತ್ತು ಶಾಸನಗಳ ಅಡಿಯಲ್ಲಿ ಅಂಥ ಪ್ರಾಧಿಕಾರದ ಯಾವುವೇ ಅಧಿಕಾರಗಳನ್ನು ಚಲಾಯಿಸಲು ಮತ್ತು ಕರ್ತವ್ಯಗಳನ್ನು ನೆರವೇರಿಸಲು ತಾತ್ಕಾಲಿಕವಾಗಿ ಯಾವೊಬ್ಬ ಅಧಿಕಾರಿಯನ್ನು ನೇಮಕ ಮಾಡಬಹುದು ಅಥವಾ ಯಾವುದೇ ಸಮಿತಿಯನ್ನು ರಚಿಸಬಹುದು.

**63. ನೇಮಕದ ವಿಶೇಷ ವಿಧಾನ:-** (1) ಪ್ರಶಾಸನ ಸಭೆಯು, ತಾನು ಸೂಕ್ತವೆಂದು ಭಾವಿಸಬಹುದಾದಂತಹ ನಿಬಂಧನೆಗಳು ಮತ್ತು ಷರತ್ತುಗಳ ಮೇಲೆ ವಿಶ್ವವಿದ್ಯಾಲಯದ ಪ್ರಾಧ್ಯಾಪಕರ ಹುದ್ದೆಯನ್ನು ಒಪ್ಪಿಕೊಳ್ಳಲು ಉನ್ನತ ಶೈಕ್ಷಣಿಕ ಪ್ರಶಸ್ತಿಗಳನ್ನು ಮತ್ತು ವೃತ್ತಿ ಅನುಭವಗಳನ್ನು ಹೊಂದಿರುವ ವ್ಯಕ್ತಿಯನ್ನು ಆಹ್ವಾನಿಸಬಹುದು ಮತ್ತು ಅದಕ್ಕೆ ಒಪ್ಪಿಕೊಳ್ಳುವ ವ್ಯಕ್ತಿಯನ್ನು ಕುಲಾಧಿಪತಿಯವರ ಅನುಮೋದನೆಗೊಳಪಟ್ಟು ಆ ಹುದ್ದೆಗೆ ನೇಮಕ ಮಾಡಬಹುದು.

(2) ಪ್ರಶಾಸನ ಸಭೆಯು ಇತರ ವಿಶ್ವವಿದ್ಯಾಲಯದಲ್ಲಿ ಅಥವಾ ಸಂಸ್ಥೆಯಲ್ಲಿ ಕಾರ್ಯನಿರತ ಅಧ್ಯಾಪಕನನ್ನು ಅಥವಾ ಶೈಕ್ಷಣಿಕ ಸಿಬ್ಬಂದಿ ಸದಸ್ಯನನ್ನು ನಿಯಮಿಸಬಹುದಾದಂತಹ ರೀತಿಯಲ್ಲಿ ಜಂಟಿ ಪ್ರಾಜೆಕ್ಟನ್ನು ಕೈಗೊಳ್ಳುವುದಕ್ಕಾಗಿ ನೇಮಕಮಾಡಬಹುದು.

**64. ಕುಲಪತಿ ಮತ್ತು ಇತರ ಅಧಿಕಾರಿಗಳು ಮುಂತಾದವರು ಸಾರ್ವಜನಿಕ ನೌಕರರಾಗಿರುವುದು:** ವಿಶ್ವವಿದ್ಯಾಲಯದ ಕುಲಪತಿಯವರು, ಕುಲಸಚಿವರು, ಹಣಕಾಸು ಅಧಿಕಾರಿ ಮತ್ತು ಇತರ ನೌಕರರು ಈ ಅಧಿನಿಯಮದ ಯಾವುದೇ ಉಪಬಂಧಗಳಿಗನುಸಾರವಾಗಿ ಕಾರ್ಯನಿರ್ವಹಿಸುತ್ತಿರುವಾಗ ಅಥವಾ ಕಾರ್ಯನಿರ್ವಹಿಸುತ್ತಿರುವರೆಂದು ತಾತ್ಪರ್ಯವಾಗುವಾಗ, ಭಾರತ ದಂಡ ಸಂಹಿತೆಯ (1860ರ ಕೇಂದ್ರ ಅಧಿನಿಯಮ XL) 21 ನೇ ಪ್ರಕರಣದ ಅರ್ಥ ವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರರೆಂದು ಭಾವಿಸತಕ್ಕದ್ದು.

**65. ತೊಂದರೆಗಳ ನಿವಾರಣೆಗೆ ಅಧಿಕಾರ.-** (1) ವಿಶ್ವವಿದ್ಯಾಲಯದ ಯಾವುದೇ ಪ್ರಾಧಿಕಾರದ ಅಥವಾ ನಿಕಾಯದ ಮೊದಲ ರಚನೆಯ ಅಥವಾ ಪುನಾರಚನೆಯ ಸಂಬಂಧದಲ್ಲಿ ಅಥವಾ ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸುವ ಸಂಬಂಧದಲ್ಲಿ ಯಾವುದೇ ತೊಂದರೆ ಉದ್ಭವಿಸಿದರೆ, ರಾಜ್ಯ ಸರ್ಕಾರವು

ಅಧಿಸೂಚನೆಯ ಮೂಲಕ ತೊಂದರೆಯ ನಿವಾರಣೆಗಾಗಿ ಅವಶ್ಯಕ ಹಾಗೂ ಸಮಂಜಸವೆಂದು ತನಗೆ ಕಂಡುಬರುವಂಥ ಹಾಗೂ ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಉಪಬಂಧಗಳನ್ನು ರಚಿಸಬಹುದು:

ಪರಂತು, 3ನೇ ಪ್ರಕರಣದ ಅಡಿಯಲ್ಲಿ ವಿಶ್ವವಿದ್ಯಾಲಯವು ಸ್ಥಾಪನೆಯಾದ ದಿನಾಂಕದಿಂದ ಐದು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಯಾವುದೇ ಅಧಿಸೂಚನೆಯನ್ನು ಹೊರಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದ ಅಥವಾ ಈ ಅಧಿನಿಯಮದ ಯಾವುದೇ ಉಪಬಂಧದ ಅಡಿಯಲ್ಲಿ ಹೊರಡಿಸಲಾದ ಪ್ರತಿಯೊಂದು ಅಧಿಸೂಚನೆಯನ್ನು, ಅದನ್ನು ಹೊರಡಿಸಿದ ತರುವಾಯ ಆದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಿರಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಸದರಿ ಅವಧಿಯು ಮುಕ್ತಾಯವಾಗುವುದಕ್ಕೆ ಮುಂಚೆ ರಾಜ್ಯ ವಿಧಾನಮಂಡಲದ ಯಾವೊಂದು ಸದನವು ಅಧಿಸೂಚನೆಯಲ್ಲಿ ಯಾವುದೇ ಮಾರ್ಪಾಡು ಮಾಡಿದರೆ, ಅಥವಾ ಆ ಅಧಿಸೂಚನೆಯು ಪರಿಣಾಮಕ್ಕೆ ಬರತಕ್ಕದ್ದಲ್ಲವೆಂದು ನಿರ್ದೇಶಿಸಿದರೆ ಹಾಗೂ ಆ ಮಾರ್ಪಾಡು ಅಥವಾ ನಿರ್ದೇಶನವನ್ನು ಇನ್ನೊಂದು ಸದನವು ಒಪ್ಪಿದರೆ ತದನಂತರ ಅಂಥ ಅಧಿಸೂಚನೆಯು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಡು ಅಥವಾ ರದ್ದತಿಯು ಈ ಅಧಿಸೂಚನೆಯ ಅಡಿಯಲ್ಲಿ ಈ ಮುಂಚೆ ಮಾಡಲಾದ ಯಾವುದೇ ಕಾರ್ಯದ ಮಾನ್ಯತೆಗೆ ಬಾಧೆ ಉಂಟುಮಾಡತಕ್ಕದ್ದಲ್ಲ.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

## (ವಿಧೇಯಕವನ್ನು ಮಂಡಿಸುವಾಗ ಲಗತ್ತಿಸಿದಂತೆ)

(1) ಕರ್ನಾಟಕದಲ್ಲಿ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಕ್ಷೇತ್ರದಲ್ಲಿ ಉಜ್ವಲ ಪರಂಪರೆ ಇರುವುದರಿಂದ ಕರ್ನಾಟಕದಲ್ಲಿ ಈಗಿರುವ ಸಂಸ್ಥೆಗಳಲ್ಲಿ ಸಂಗೀತ ಮತ್ತು ಪ್ರದರ್ಶಕ ಕಲೆಗಳ ಅಧ್ಯಯನವನ್ನು ವ್ಯವಸ್ಥಿತಗೊಳಿಸುವುದಕ್ಕಾಗಿ,

(2) ಸಂಗೀತ ಮತ್ತು ಪ್ರದರ್ಶಕ ಕಲೆಗಳಲ್ಲಿ ಸಂಶೋಧನೆ ಮತ್ತು ಕಲಿಕೆಯ ಮುನ್ನಡೆಗಾಗಿ ಅವಕಾಶಗಳನ್ನು ಕಲ್ಪಿಸಿ ಸಂಗೀತ ಮತ್ತು ಪ್ರದರ್ಶನ ಕಲೆಗಳ ಎಲ್ಲಾ ವಿಭಾಗಗಳಲ್ಲಿ ಶಿಕ್ಷಣ ದೊರೆಯುವಂತೆ ಮಾಡುವುದಕ್ಕಾಗಿ,

(3) ಸಂಗೀತ ಮತ್ತು ಪ್ರದರ್ಶಕ ಕಲಾ ವಿದ್ವಾಂಸರು ಮತ್ತು ಸಂಬಂಧಪಟ್ಟ ವಿದ್ಯಾ ವಿಷಯಗಳ ವಿದ್ವಾಂಸರು ತಮ್ಮ ವಿಚಾರ ವಿನಿಯಮ ಮಾಡಿಕೊಳ್ಳುವುದಕ್ಕಾಗಿ ಒಂದು ಸಾಮಾನ್ಯ ವೇದಿಕೆಯನ್ನು ಒದಗಿಸುವುದಕ್ಕಾಗಿ,

– ಕರ್ನಾಟಕ ರಾಜ್ಯ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯವನ್ನು ಸ್ಥಾಪಿಸುವುದು ಅವಶ್ಯವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಕ್ರಮದಿಂದಾಗಿ 2008–09ನೇ ವರ್ಷದಲ್ಲಿ ಒಂದು ನೂರು ಲಕ್ಷ ರೂಪಾಯಿಗಳ ವೆಚ್ಚವು ಉಂಟಾಗಬಹುದೆಂದು ಅಂದಾಜು ಮಾಡಲಾಗಿದೆ.

**ಉನ್ನತ ಶಿಕ್ಷಣ ಸಚಿವರು**

ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ – X

## (ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳು 324 ರಿಂದ 351ರ ಉದ್ಧ ೃತ ಭಾಗ)

## ಸದಸ್ಯರು ಪಾಲಿಸಬೇಕಾದ ನಿಯಮಗಳು

**324. ಸದನದಲ್ಲಿ ಉಪಸ್ಥಿತರಿದ್ದಾಗ ಸದಸ್ಯರು ಪಾಲಿಸಬೇಕಾದ ನಿಯಮಗಳು:**

ಸಭೆಯ ಉಪವೇಶನದಲ್ಲಿ ಸದಸ್ಯನು:

(1) ಸದನದ ಕಾರ್ಯಕಲಾಪಕ್ಕೆ ಸಂಬಂಧಿಸಿರುವುದನ್ನು ಹೊರತು, ಯಾವುದೇ ಪುಸ್ತಕ, ವಾರ್ತಾ ಪತ್ರಿಕೆ ಅಥವಾ ಕಾಗದವನ್ನು ಓದತಕ್ಕುದಲ್ಲ.

(2) ಯಾವನೇ ಸದಸ್ಯನು ಮಾತನಾಡುತ್ತಿರುವಾಗ ಅವನಿಗೆ ದುರ್ವಚನೆಗಳಿಂದ ಅಥವಾ ಏರುಸ್ವರದಿಂದ ಅಥವಾ ಇತರ ಯಾವುದೇ ಕ್ರಮಬಾಹಿರ ರೀತಿಯಲ್ಲಿ ತೊಂದರೆಯುಂಟು ಮಾಡತಕ್ಕುದಲ್ಲ.

(3) ಸದನವನ್ನು ಪ್ರವೇಶಿಸುವಾಗ ಅಥವಾ ಅಲ್ಲಿಂದ ನಿರ್ಗಮಿಸುವಾಗ ಮತ್ತು ತಮ್ಮ ಜಾಗದಲ್ಲಿ ಕುಳಿತುಕೊಳ್ಳುವಾಗ ಅಥವಾ ಜಾಗವನ್ನು ಬಿಡುವಾಗ ಅಧ್ಯಕ್ಷರಿಗೆ ವಂದಿಸತಕ್ಕದ್ದು.

(4) ಅಧ್ಯಕ್ಷರ ಮತ್ತು ಮಾತನಾಡುತ್ತಿರುವ ಸದಸ್ಯರ ಮಧ್ಯೆ ಹಾದು ಹೋಗತಕ್ಕುದಲ್ಲ.

(5) ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಿರುವಾಗ ಸದನವನ್ನು ತ್ಯಜಿಸತಕ್ಕುದಲ್ಲ.

(6) ಯಾವಾಗಲೂ ಅಧ್ಯಕ್ಷರನ್ನು ಸಂಭೋದಿಸಿ ಮಾತನಾಡತಕ್ಕುದು.

(7) ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ತನ್ನ ಸ್ಥಾನದಲ್ಲಿರತಕ್ಕುದು.

(8) ಸದನದಲ್ಲಿ ಮಾತನಾಡದೇ ಇರುವ ಸಮಯದಲ್ಲಿ ನಿಶ್ಯಬ್ದವಾಗಿರತಕ್ಕುದು.

(9) ಸಭೆಯ ಕಾರ್ಯವಿಧಿಗೆ ತಡೆ ಅಥವಾ ವಿಘ್ನವನ್ನು ತರತಕ್ಕುದಲ್ಲ ಮತ್ತು ಸದನದಲ್ಲಿ ಭಾಷಣವಾಗುತ್ತಿರುವಾಗ ವೀಕ್ಷಕ ವಿವರಣೆಯನ್ನು ಮಾಡತಕ್ಕುದಲ್ಲ.

(10) ಯಾವುದೇ ಉಪ್ಪರಿಗೆಯ ಮೊಗಸಾಲೆಯನ್ನು (ಗ್ಯಾಲರಿಯನ್ನು) ಒಬ್ಬ ಅಪರಿಚಿತನು ಪ್ರವೇಶಿಸಿದಾಗ ಚಪ್ಪಾಳೆ ಹೊಡೆಯತಕ್ಕುದಲ್ಲ.

(11) ಮಾತನಾಡುತ್ತಿರುವಾಗ, ಯಾವುದೇ ಉಪ್ಪರಿಗೆಯ ಮೊಗಸಾಲೆಯಲ್ಲಿರುವ (ಗ್ಯಾಲರಿಯಲ್ಲಿ) ಅಪರಿಚಿತರನ್ನು ಕುರಿತು ಮಾತನಾಡತಕ್ಕುದಲ್ಲ.

(12) ಸದನದಲ್ಲಿ ಘೋಷಣೆಯನ್ನು ಕೂಗತಕ್ಕುದಲ್ಲ ;

(13) ಪೀಠಕ್ಕೆ ಬೆನ್ನು ತೋರಿಸುವಂತೆ ಕುಳಿತುಕೊಳ್ಳತಕ್ಕುದಲ್ಲ ಅಥವಾ ನಿಲ್ಲತಕ್ಕುದಲ್ಲ.

(14) ಸದನದಲ್ಲಿ ಪೀಠದ ಬಳಿ ಖುದ್ದಾಗಿ ಹೋಗತಕ್ಕುದಲ್ಲ ಅವಶ್ಯಕತೆಯುಂಟಾದರೆ ಅವರು ವಿಧಾನ ಮಂಡಲದ ಮುಂದೆ ಅಧಿಕಾರಿಗಳಿಗೆ ಚೀಟಿ ನೀಡಬಹುದು.

(15) ಸದನದಲ್ಲಿ ಬ್ಯಾಡ್ಜುಗಳು ಅಥವಾ ಯಾವುದೇ ವಸ್ತುವನ್ನು ಧರಿಸತಕ್ಕುದಲ್ಲ ಅಥವಾ ಪ್ರದರ್ಶಿಸತಕ್ಕುದಲ್ಲ.

(16) ಸದನದಲ್ಲಿ ಶಸ್ತ್ರಗಳನ್ನು ತರತಕ್ಕುದಲ್ಲ ಅಥವಾ ಪ್ರದರ್ಶಿಸತಕ್ಕುದಲ್ಲ.

(17) ಸದನದಲ್ಲಿ ಬಾವುಟಗಳು, ಲಾಂಛನಗಳು ಅಥವಾ ಯಾವುದೇ ನಿಶಾನೆಗಳನ್ನು ಪ್ರದರ್ಶಿಸತಕ್ಕುದಲ್ಲ.

(18) ತನ್ನ ಭಾಷಣವಾದ ತರುವಾಯ, ಕೂಡಲೇ ಸದನವನ್ನು ಬಿಟ್ಟು ಹೋಗತಕ್ಕುದಲ್ಲ.

(19) ಸದನದ ವ್ಯವಹಾರಗಳಿಗೆ ಸಂಬಂಧಪಡದ ಯಾವುದೇ ಬರವಣಿಗೆ, ಪ್ರಶ್ನಾವಳಿ, ಕರಪತ್ರಗಳು ಪತ್ರಿಕಾ ಹೇಳಿಕೆಗಳು, ಕಾಗದದ ಹಾಳೆಗಳು, ಮೊದಲಾದುವನ್ನು ಸದನದ ಆವರಣದೊಳಗೆ ಹಂಚತಕ್ಕುದಲ್ಲ.

(20) ಸದನದಲ್ಲಿ ಡೆಸ್ಕ್ ಮೇಲೆ ತನ್ನ ಟೋಪಿಯನ್ನು ಇಡತಕ್ಕುದಲ್ಲ, ಕಡತಗಳನ್ನು ಇಡಲು ಅಥವಾ ಬರೆಯುವ ಉದ್ದೇಶಕ್ಕಾಗಿ ರಟ್ಟನ್ನು ತರತಕ್ಕುದಲ್ಲ, ಧೂಮಪಾನ ಮಾಡತಕ್ಕುದಲ್ಲ ಅಥವಾ ಕೋಟನ್ನು ಕೈನಲ್ಲಿ ಹಿಡಿದು ಸದನವನ್ನು ಪ್ರವೇಶಿಸಿತಕ್ಕುದಲ್ಲ.

(21) ಆರೋಗ್ಯದ ಕಾರಣಗಳ ಮೇಲೆ ವಿಧಾನ ಸಭ್ಯಾಧ್ಯಕ್ಷರ ಅನುಮತಿ ಪಡೆಯದೆ ಊರುಗೋಲನ್ನು ತರತಕ್ಕುದಲ್ಲ.

(22) ಸದನದಲ್ಲಿ ಪ್ರತಿಭಟನೆ ಸೂಚಿಸಿ ಕಾಗದ ಪತ್ರಗಳನ್ನು ಹರಿದುಹಾಕತಕ್ಕುದಲ್ಲ;

(23) ಸದನದಲ್ಲಿ ಕ್ಯಾಸೆಟ್ ಅಥವಾ ಟೇಪ್ ರೆಕಾರ್ಡರ್‌ಗಳನ್ನು ತರತಕ್ಕುದಲ್ಲ ಮತ್ತು ಹಾಕತಕ್ಕುದಲ್ಲ ಮತ್ತು

(24) ಸದನಕ್ಕೆ ಜೋರಾಗಿ ಕೇಳಿಸುವಂತೆ ಮೊಗಸಾಲೆಯಲ್ಲಿ ಮಾತನಾಡತಕ್ಕುದಲ್ಲ ಅಥವಾ ನಗತಕ್ಕದಲ್ಲ.

**325. ಅಧ್ಯಕ್ಷರಿಂದ ಕರೆಬಂದಾಗ ಸದಸ್ಯರು ಮಾತನಾಡುವುದು :** ಒಬ್ಬ ಸದಸ್ಯನು ಮಾತನಾಡಲು ಎದ್ದುನಿಂತರೆ, ಅಧ್ಯಕ್ಷರು ಅವರ ಹೆಸರನ್ನು ಕರೆಯತಕ್ಕುದು. ಒಬ್ಬರಿಗಿಂತ ಹೆಚ್ಚು ಸದಸ್ಯರು ಏಕಕಾಲದಲ್ಲಿ ಎದ್ದು ನಿಂತರೆ, ಅಧ್ಯಕ್ಷರು ಹೆಸರು ಕರೆದಿರುವ ಸದಸ್ಯರಿಗೆ ಮಾತನಾಡಲು ಹಕ್ಕಿರುವುದು.

**326. ಸದನವನ್ನು ಉದ್ದೇಶಿಸಿ ಮಾತನಾಡುವ ರೀತಿ :** ಸದನದಲ್ಲಿ ಯಾವುದೇ ವಿಷಯದ ಬಗ್ಗೆ ಒಬ್ಬ ಸದಸ್ಯನು ಯಾವುದೇ ಅಭಿಪ್ರಾಯವನ್ನು ವ್ಯಕ್ತಗೊಳಿಸಲಿಚ್ಛಿಸಿದರೆ, ತನ್ನ ಸ್ಥಳದಿಂದಲೇ ಎದ್ದುನಿಂತು ಅಧ್ಯಕ್ಷರನ್ನು ಸಂಭೋದಿಸಿ ಮಾತನಾಡತಕ್ಕುದು, ಪರಂತು, ಕಾಯಿಲೆ ಅಥವಾ ದುರ್ಬಲತೆಯಿಂದ ನಿಶ್ಯಕ್ತರಾಗಿರುವವರನ್ನು ಕುಳಿತುಕೊಂಡೆ ಮಾತನಾಡಲು ಅನುಮತಿಸಬಹುದು.

**327. ಮಾತನಾಡುವಾಗ ಪಾಲಿಸಬೇಕಾದ ನಿಯಮಗಳು :**

ಸದಸ್ಯರು ಮಾತನಾಡುವಾಗ;-

(1) ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿದ್ದು ತೀರ್ಪು ನೀಡಿರದ ಯಾವುದೇ ಸಂಗತಿಯನ್ನು ಕುರಿತು ಮಾತನಾಡತಕ್ಕುದಲ್ಲ.

(2) ಸದಸ್ಯರೊಬ್ಬರ ಮೇಲೆ ವೈಯಕ್ತಿಕ ದೋಷಾರೋಪಣೆ ಮಾಡತಕ್ಕುದಲ್ಲ.

(3) ಸಂಸತ್ತು ಅಥವಾ ಯಾವುದೇ ರಾಜ್ಯ ವಿಧಾನ ಮಂಡಲದ ವ್ಯವಹರಣೆಗಳು ಮತ್ತು ನಡವಳಿಕೆಗಳನ್ನು ಕುರಿತು ಹೀನಾಯವಾಗಿ ಮಾತನಾಡತಕ್ಕುದಲ್ಲ.

(4) ಸದನದ ಯಾವುದೇ ತೀರ್ಮಾನವನ್ನು ಕುರಿತು ಅದನ್ನು ರದ್ದುಪಡಿಸಲು ಪ್ರಸ್ತಾವ ಮಂಡಿಸುವಾಗ ಹೊರತು ಇನ್ನಾವುದೇ ಆರೋಪಣೆ ಮಾಡತಕ್ಕುದಲ್ಲ.

(5) ಸರಿಯಾದ ವಾಕ್ಯಗಳಲ್ಲಿ ರಚಿಸಲಾದ ಆಧಾರಸಹಿತ ಪ್ರಸ್ತಾವದ ಮೇಲೆ ಚರ್ಚೆ ನಡೆಸಿದ್ದ ಹೊರತು ಉನ್ನತಾಧಿಕಾರದಲ್ಲಿರುವ ವ್ಯಕ್ತಿಗಳ ನಡವಳಿಕೆ ಕುರಿತು ಆರೋಪಿಸತಕ್ಕುದಲ್ಲ.

**ವಿವರಣೆ:** ಉನ್ನತಾಧಿಕಾರದಲ್ಲಿರುವ ವ್ಯಕ್ತಿಗಳು ಎಂದರೆ ಭಾರತ ಸಂವಿಧಾನದ ಮೇರೆಗೆ ಯಾವ ನಡವಳಿಕೆಯನ್ನು ಸರಿಯಾದ ವಾಕ್ಯಗಳಲ್ಲಿ ರಚಿಸಿದ ಆಧಾರಸಹಿತ ಪ್ರಸ್ತಾವಗಳ ಮೇಲೆ ಮಾತ್ರವೇ ಚರ್ಚೆ ನಡೆಸಬಹುದೋ ಆ ವ್ಯಕ್ತಿಗಳು ಅಥವಾ ಯಾರ ನಡವಳಿಕೆಯನ್ನು ತಾವು ಒಪ್ಪುವಂತಹ ವಾಕ್ಯಗಳಲ್ಲಿ ರಚಿಸಲಾದ ಆಧಾರಸಹಿತ ಪ್ರಸ್ತಾವದ ಮೇಲೆ ಮಾತ್ರವೇ ಚರ್ಚಿಸತಕ್ಕುದು ಎಂದು ಅಧ್ಯಕ್ಷರು ಅಭಿಪ್ರಾಯಪಡುತ್ತಾರೋ ಆ ವ್ಯಕ್ತಿಗಳು ;

(6) ಚರ್ಚೆಯ ಮೇಲೆ ಪ್ರಭಾವ ಬೀರುವುದಕ್ಕಾಗಿ ರಾಜ್ಯಪಾಲರ ಹೆಸರನ್ನು ಉಪಯೋಗಿಸತಕ್ಕುದಲ್ಲ;

(7) ರಾಷ್ಟ್ರದ್ರೋಹ, ರಾಷ್ಟ್ರವಿರೋಧಿ ಅಥವಾ ಅಪಮಾನಕರವಾದ ಮಾತುಗಳನ್ನು ಆಡತಕ್ಕುದಲ್ಲ.

(8) ಸದನದ ಕಾರ್ಯಕಲಾಪಗಳನ್ನು ಅಡ್ಡಿಪಡಿಸುವುದಕ್ಕಾಗಿ ತಮ್ಮ ವಾಕ್ ಸ್ವಾತಂತ್ರವನ್ನು ಬಳಸಬಾರದು.

(9) ವಿಧಾನ ಸಭಾಧ್ಯಕ್ಷರ ಪರ ಅಥವಾ ವಿಧಾನಮಂಡಲ ಕಾರ್ಯಾಲಯದ ಯಾವುದೇ ಉದ್ದೇಶವನ್ನು ಕುರಿತು ಆರೋಪಿಸತಕ್ಕುದಲ್ಲ.

(10) ರಾಷ್ಟ್ರಾಧ್ಯಕ್ಷರು ಅಥವಾ ರಾಜ್ಯಪಾಲರ ಅಥವಾ ಯಾವುದೇ ನ್ಯಾಯಾಲಯದ ನಡವಳಿಯನ್ನು ಕುರಿತು ಆರೋಪಿಸತಕ್ಕುದಲ್ಲ ಅಥವಾ ಚರ್ಚೆಯನ್ನು ಪರಿಣಾಮಕಾರಿಯಾಗಿ ಮಾಡುವ ಉದ್ದೇಶಕ್ಕಾಗಿ ರಾಜ್ಯಪಾಲರ ಅಥವಾ ರಾಷ್ಟ್ರಾಧ್ಯಕ್ಷರ ಹೆಸರನ್ನು ಬಳಸತಕ್ಕುದಲ್ಲ ;

(11) ಯಾವುದೇ ಗ್ಯಾಲರಿಯಲ್ಲಿರುವ ಅಪರಿಚಿತರ ಬಗ್ಗೆ ಯಾವುದೇ ಉಲ್ಲೇಖ ಮಾಡತಕ್ಕುದಲ್ಲ ;

(12) ಸರ್ಕಾರಿ ಅಧಿಕಾರಿಗಳನ್ನು ಹೆಸರು ಹಿಡಿದು ಕರೆಯತಕ್ಕದಲ್ಲ ; ಮತ್ತು

(13) ಪೀಠದ ಪೂರ್ವಾನುಮತಿಯ ಹೊರತು ಬರವಣಿಗೆಯಲ್ಲಿರುವ ಭಾಷಣವನ್ನು ಓದತಕ್ಕುದಲ್ಲ;

**328. ಒಬ್ಬ ವ್ಯಕ್ತಿಯನ್ನು ಕುರಿತು ಆಪಾದನೆಯ ಬಗ್ಗೆ ಕೈಗೊಳ್ಳಬೇಕಾದ ಕಾರ್ಯವಿಧಾನ:** ಸದಸ್ಯರು ಅಧ್ಯಕ್ಷರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ, ಮಂತ್ರಿಗಳು ಉತ್ತರ ನೀಡುವ ಉದ್ದೇಶಕ್ಕಾಗಿ ತನಿಖೆ ನಡೆಸಲು ಸಾಧ್ಯವಾಗುವಂತೆ ಪೂರ್ವಮಾಹಿತಿಯನ್ನು ಕೊಟ್ಟಿದ್ದ ಹೊರತು, ಯಾವ ಸದಸ್ಯರು ಯಾವ ವ್ಯಕ್ತಿಯನ್ನು ಕುರಿತು ಅಪಮಾನಕರವಾದ ಅಥವಾ ಅಪರಾಧದ ಆಪಾದನೆ ಮಾಡುವ ಯಾವ ಆರೋಪವನ್ನು ಮಾಡತಕ್ಕುದಲ್ಲ, ಅಲ್ಲದೆ ಅಧ್ಯಕ್ಷರು ಅಂಥ ಆರೋಪವು ಸದನದ ಮರ್ಯಾದೆಗೆ ಕುಂದು ತರುವಂತಹದು ಅಥವಾ ಅದರಿಂದ ಯಾವುದೇ ಸಾರ್ವಜನಿಕ ಹಿತಾಸಕ್ತಿ ಸಾಧಿತವಾಗುವುದಿಲ್ಲ ಎಂದು ಅಭಿಪ್ರಾಯ ಪಡುವುದಾದರೆ, ಯಾವುದೇ ಸಂದರ್ಭದಲ್ಲಿ ಯಾರೇ ಸದಸ್ಯರು ಅಂಥ ಯಾವುದೇ ಆರೋಪ ಮಾಡುವುದನ್ನು ನಿಷೇಧಿಸಬಹುದು.

**329. ಪರಿಷತ್ತಿನಲ್ಲಿ ಮಾಡಲಾದ ಭಾಷಣಗಳನ್ನು ಉದ್ಧರಿಸುವುದಕ್ಕೆ ಪ್ರತಿಬಂಧ :** ಪರಿಷತ್ತಿನಲ್ಲಿ ಮಾಡಲಾದ ಯಾವುದೇ ಭಾಷಣವನ್ನು ಅದು ಒಂದು ಕಾರ್ಯನೀತಿಯ ಬಗ್ಗೆ ಸಚಿವರ ಸ್ಪಷ್ಟ ಹೇಳಿಕೆಯಾಗಿದ್ದ ಹೊರತು ಸದನದಲ್ಲಿ ಉದ್ಧರಿಸತಕ್ಕುದಲ್ಲ.

ಆದರೂ, ಅಧ್ಯಕ್ಷರು ತಮಗೆ ಮುಂಚಿತವಾಗಿ ಸಲ್ಲಿಸಿದ ಕೋರಿಕೆಯ ಮೇಲೆ ಯಾರೇ ಸದಸ್ಯರಿಗೆ ಪರಿಷತ್ತಿನಲ್ಲಿನ ಭಾಷಣಗಳನ್ನು ಉದ್ಧರಿಸಲು ಅಥವಾ ಅಲ್ಲಿನ ಕಾರ್ಯವಿಧಾನವನ್ನು ಕುರಿತು ಉಲ್ಲೇಖಿಸಲು, ಹಾಗೆ ಮಾಡುವುದು ಆ ಸದಸ್ಯರು ಹಕ್ಕು ಬಾಧ್ಯತೆಯ ಅಥವಾ ಕಾರ್ಯವಿಧಾನದ ಅಂಶವೊಂದನ್ನು ವಿಶದೀಕರಿಸಲು ಅವಶ್ಯವೆಂದು ಅಧ್ಯಕ್ಷರು ಯೋಚಿಸಿದಲ್ಲಿ, ಅನುಮತಿ ನೀಡಬಹುದು.

**330. ಪ್ರಶ್ನೆಗಳನ್ನು ಅಧ್ಯಕ್ಷರ ಮುಖಾಂತರವಾಗಿ ಕೇಳತಕ್ಕದು:** ಚರ್ಚೆ ನಡೆಯುತ್ತಿರುವಾಗ ವಿವರಣೆ ಉದ್ದೇಶಗಳಿಗಾಗಿ ಅಥವಾ ಇನ್ನಾವುದೇ ಸಾಕಷ್ಟು ಕಾರಣಗಳಿಗಾಗಿ ಸದನದಲ್ಲಿ ಆಗ ಪರ್ಯಾಲೋಚನೆಯಲ್ಲಿರುವ ಯಾವುದೇ ವಿಷಯದ ಸಂಬಂಧದಲ್ಲಿ ಯಾವುದೇ ಸದಸ್ಯರು ಇನ್ನೊಬ್ಬ ಸದಸ್ಯರಿಗೆ ಪ್ರಶ್ನೆಯನ್ನು ಕೇಳುವ ಅಗತ್ಯವುಂಟಾದರೆ, ಅವರು ತಮ್ಮ ಪ್ರಶ್ನೆಯನ್ನು ಅಧ್ಯಕ್ಷರ ಮೂಲಕ ಕೇಳತಕ್ಕದು.

**331. ಅಸಂಬಂಧಿತ ಅಥವಾ ಪುನರುಕ್ತಿ :** ಅಸಂಬಂಧ ವಿಷಯಗಳನ್ನು ಪ್ರಸ್ತಾಪಿಸುವ ಅಥವಾ ತನ್ನ ವಾದವನ್ನು ಅಥವಾ ಸದಸ್ಯರ ವಾದಗಳನ್ನು ಬೇಸರ ಮಾಡುವಷ್ಟು ಪುನಃ ಪುನಃ ಹೇಳುತ್ತಲೇ ಇರುವ ಸದಸ್ಯರೊಬ್ಬರ ವರ್ತನೆಯನ್ನು ಸದನದ ಗಮನಕ್ಕೆ ತಂದನಂತರ ಅಧ್ಯಕ್ಷರು ಆ ಸದಸ್ಯರನ್ನು ತಮ್ಮ ಭಾಷಣವನ್ನು ನಿಲ್ಲಿಸಬೇಕೆಂದು ನಿರ್ದೇಶಿಸಬಹುದು.

**332. ವೈಯಕ್ತಿಕ ವಿವರಣೆಗಳು :** ಸದಸ್ಯರು ಅಧ್ಯಕ್ಷರ ಅನುಮತಿ ಪಡೆದು ಒಂದು ವಿಷಯವು ಸದನದ ಮುಂದೆ ಚರ್ಚೆಗೆ ಬಂದಿರದಿದ್ದರೂ ಆ ಬಗ್ಗೆ ತಮ್ಮ ವೈಯುಕ್ತಿಕ ವಿವರಣೆಯನ್ನು ನೀಡಬಹುದು, ಆದರೆ ಹಾಗೆ ಮಾಡುವಾಗ ಯಾವುದೇ ಚರ್ಚಾಸ್ಪದ ಅಂಶವನ್ನು ತರತಕ್ಕದಲ್ಲ ಮತ್ತು ಆ ಬಗ್ಗೆ ಯಾವ ಚರ್ಚೆಗೂ ಅವಕಾಶ ನೀಡತಕ್ಕದಲ್ಲ.

**333. ಭಾಷಣಗಳ ಅನುಕ್ರಮ ಮತ್ತು ಉತ್ತರ ನೀಡಲು ಹಕ್ಕು:** (1) ಪ್ರಸ್ತಾವವನ್ನು ಸಭೆಯಲ್ಲಿ ಮಂಡಿಸಿದ ಸದಸ್ಯರು ಮಾತನಾಡಿದ ನಂತರ ಇತರ ಸದಸ್ಯರು ಅಧ್ಯಕ್ಷರು ಅವರ ಹೆಸರನ್ನು ಅನುಕ್ರಮದಲ್ಲಿಯೇ ಆ ಪ್ರಸ್ತಾವವನ್ನು ಕುರಿತು ಮಾತನಾಡತಕ್ಕದು. ಯಾರೇ ಸದಸ್ಯರು ಅಧ್ಯಕ್ಷರು ಕರೆದಾಗ ಮಾತನಾಡದಿದ್ದಲ್ಲಿ ಚರ್ಚೆ ಮುಂದುವರೆದಾಗ, ಅಧ್ಯಕ್ಷರ ಅನುಮತಿಯ ಮೇರೆಗೆ ಹೊರತು ಮಾತನಾಡಲು ಹಕ್ಕುಳ್ಳವರಾಗತಕ್ಕುದಲ್ಲ.

(2) ಉತ್ತರ ಹೇಳುವ ತಮ್ಮ ಹಕ್ಕನ್ನು ಚಲಾಯಿಸುವಾಗ, ಹೊರತು ಅಥವಾ ಈ ನಿಯಮಗಳ ಮೂಲಕ ಅನ್ಯಥಾ ಉಪಬಂಧವಿರುವಂತೆ ಹೊರತು ಅಧ್ಯಕ್ಷರ ಅನುಮತಿ ಪಡೆದಲ್ಲದೆ ಯಾವ ಸದಸ್ಯರೂ ಒಂದು ಪ್ರಸ್ತಾವದ ಮೇಲೆ ಒಂದು ಸಲಕ್ಕಿಂತ ಹೆಚ್ಚು ಬಾರಿ ಮಾತನಾಡತಕ್ಕುದಲ್ಲ.

(3) ಒಂದು ಪ್ರಸ್ತಾವವನ್ನು ಮಂಡಿಸಿದ ಸದಸ್ಯರು ಉತ್ತರ ಹೇಳುವ ಸಲುವಾಗಿ ಮತ್ತೊಮ್ಮೆ ಮಾತನಾಡಬಹುದು ಮತ್ತು ಪ್ರಸ್ತಾವವನ್ನು ಖಾಸಗಿ ಸದಸ್ಯರೊಬ್ಬರು ಮಂಡಿಸಿದ್ದರೆ, ಸಂಬಂಧಪಟ್ಟ ಸಚಿವರು ಅಧ್ಯಕ್ಷರ ಅನುಮತಿ ಪಡೆದು (ಅವರು ಚರ್ಚೆಯಲ್ಲಿ ಈ ಹಿಂದೆ ಮಾತನಾಡಿರಲಿ, ಇಲ್ಲದಿರಲಿ) ಪ್ರಸ್ತಾವ ಮಂಡಿಸಿದ ಸದಸ್ಯರು ಉತ್ತರ ನೀಡಿದನಂತರ ಮಾತನಾಡಬಹುದು.

ಆದರೂ, ಈ ಉಪನಿಯಮದಲ್ಲಿರುವುದು ಯಾವುದೂ ಒಂದು ವಿಧೇಯಕಕ್ಕೆ ತಿದ್ದುಪಡಿಯನ್ನು ಅಥವಾ ಒಂದು ನಿರ್ಣಯವನ್ನು ಪ್ರಸ್ತಾವಿಸಿ ಮಂಡಿಸುವ ಯಾವ ವ್ಯಕ್ತಿಗೂ ಅಧ್ಯಕ್ಷರ ಅನುಮತಿ ಪಡೆದಲ್ಲದೆ ಉತ್ತರ ನೀಡಲು ಯಾವುದೇ ಹಕ್ಕನ್ನು ನೀಡುತ್ತದೆ ಎಂದು ಭಾವಿಸತಕ್ಕುದಲ್ಲ.

**334. ಪ್ರಸ್ತಾವ ಮಂಡಿಸಿದವರ ಉತ್ತರದೊಂದಿಗೆ ಚರ್ಚೆಯ ಸಮಾಪ್ತಿ :** 333ನೇ ನಿಯಮದ (3ನೇ) ಉಪನಿಯಮದ ಉಪಬಂಧಗಳಿಗೆ ಒಳಪಟ್ಟು ಮೂಲ ಪ್ರಸ್ತಾವವನ್ನು ಮಂಡಿಸಿದ ವ್ಯಕ್ತಿಯ ಉತ್ತರದೊಂದಿಗೆ ಎಲ್ಲಾ ಸಂದರ್ಭಗಳಲ್ಲಿಯೂ ಚರ್ಚೆಯು ಮಕ್ತಾಯವಾಗತಕ್ಕುದು.

**335. ಭಾಷಣಗಳ ಕಾಲಾವಧಿ :** ಅಧ್ಯಕ್ಷರು ನಿಯಮಗಳಲ್ಲಿ ನಿರ್ದಿಷ್ಟ ಉಪಬಂಧಗಳನ್ನು ಕಲ್ಪಿಸಿದರೆ ಸಂದರ್ಭಗಳಲ್ಲಿ ಮತ್ತು ಸದನದ ಕಾರ್ಯಕಲಾಪಗಳ ಪರಿಸ್ಥಿತಿಯನ್ನು ಮತ್ತು ಪ್ರಸ್ತಾವದ ಸ್ವರೂಪವನ್ನು ಗಮನದಲ್ಲಿರಿಸಿಕೊಂಡು ಪ್ರಸ್ತಾವವನ್ನು ಕುರಿತು ಭಾಷಣಗಳಿಗೆ ಕಾಲಮಿತಿಯನ್ನು ನಿಗದಿಪಡಿಸಬಹುದು.

**336. ಅಧ್ಯಕ್ಷರ ಭಾಷಣ :** ಅಧ್ಯಕ್ಷರು ಯಾವುದೇ ಸಮಯದಲ್ಲಿ ತಾವಾಗಿಯೇ ಅಥವಾ ಸದಸ್ಯರು ಯಾವುದೇ ಒಂದು ಅಂಶವನ್ನು ಎತ್ತಿದಾಗ ಅಥವಾ ಸದಸ್ಯರೊಬ್ಬರು ಮಾಡಿದ ವಿನಂತಿಯ ಮೇಲೆ, ಸದನದ ಮುಂದೆ ಪರ್ಯಾಲೋಚನೆಯಲ್ಲಿರುವ ವಿಷಯದ ಮೇಲೆ ಸದಸ್ಯರ ಚರ್ಚೆಗೆ ನೆರವು ನೀಡುವ ಉದ್ದೇಶದಿಂದ ಸಭೆಯನ್ನು ಉದ್ದೇಶಿಸಿ ಮಾತನಾಡಬಹುದು ಮತ್ತು ಹಾಗೆ ಅವರು ತಿಳಿಸಿದ ತಮ್ಮ ಅಭಿಪ್ರಾಯಗಳನ್ನು ಒಂದು ತೀರ್ಪು ಎಂದು ಪರಿಗಣಿಸತಕ್ಕುದಲ್ಲ.

**337. ಅಧ್ಯಕ್ಷರು ಎದ್ದುನಿಂತಾಗ ಅನುಸರಿಸಬೇಕಾದ ಕಾರ್ಯವಿಧಾನ :** (1) ಅಧ್ಯಕ್ಷರು ಮಾತನಾಡಲು ಎದ್ದುನಿಂತುಕೊಂಡಾಗಲೆಲ್ಲ ಸದಸ್ಯರು ಮೌನದಿಂದಿದ್ದು ಅವರ ಮಾತುಗಳನ್ನು ಆಲಿಸಬೇಕು ಮತ್ತು ಆ ಸಮಯದಲ್ಲಿ ಮಾತನಾಡುತ್ತಿದ್ದ ಅಥವಾ ಮಾತನಾಡಲು ಆರಂಭಿಸಲಿದ್ದ ಸದಸ್ಯರು ಕೂಡಲೇ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳತಕ್ಕುದು.

(2) ಅಧ್ಯಕ್ಷರು ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವಾಗ ಯಾವ ಸದಸ್ಯರು ತಮ್ಮ ಸ್ಥಾನದಿಂದ ಎದ್ದುಹೋಗತಕ್ಕುದಲ್ಲ.

**338. ಮುಕ್ತಾಯ :** (1) ಪ್ರಸ್ತಾವವನ್ನು ಮಂಡಿಸಿದ ಅನಂತರ ಯಾವುದೇ ಸಮಯದಲ್ಲಿ ಯಾರೇ ಸದಸ್ಯರು "ಈಗ ಸಭೆಯ ಅಭಿಮತಕ್ಕೆ ಹಾಕಬೇಕು". ಎಂದು ಪ್ರಸ್ತಾವವನ್ನು ಮಂಡಿಸಬಹುದು ಮತ್ತು ಈ ಪ್ರಸ್ತಾವವು ಈ ನಿಯಮಾವಳಿಯ ದುರುಪಯೋಗ ಅಥವಾ ಸಮಂಜಸ ಚರ್ಚೆಗೆ ಇರುವ ಹಕ್ಕನ್ನು ಕುಂಠಿತಗೊಳಿಸುತ್ತದೆ ಎಂದು ಅಧ್ಯಕ್ಷರಿಗೆ ತೋರಿದ ಹೊರತು ಅಧ್ಯಕ್ಷರು "ಈಗ ಪ್ರಶ್ನೆಯನ್ನು ಕೇಳಬಹುದು" ಎಂಬ ಪ್ರಸ್ತಾವವನ್ನು ಮಂಡಿಸತಕ್ಕುದು.

(2) "ಈಗ ಪ್ರಶ್ನೆಯನ್ನು ಕೇಳಬಹುದು" ಎಂಬ ಪ್ರಸ್ತಾವಕ್ಕೆ ಸಭೆಯ ಅನುಮೋದನೆ ದೊರೆತಲ್ಲಿ ಅದಕ್ಕೆ ಅನುಷಂಗಿಕವಾದ ಪ್ರಶ್ನೆಯನ್ನು ಅಥವಾ ಪ್ರಶ್ನೆಗಳನ್ನು ಹೆಚ್ಚಿನ ಚರ್ಚೆ ಇಲ್ಲದೆ ಕೂಡಲೇ ಕೇಳತಕ್ಕುದು. ಆದಾಗ್ಯೂ ಅಧ್ಯಕ್ಷರು ಯಾರೇ ಸದಸ್ಯರಿಗೆ ಈ ನಿಯಮದ ಮೇರೆಗೆ ಅವರಿಗಿರುವ ಉತ್ತರ ನೀಡುವ ಹಕ್ಕನ್ನು ಚಲಾಯಿಸಲು ಅವಕಾಶ ನೀಡಬಹುದು.

**339. ಚರ್ಚೆಯ ಪರಿಮಿತಿ :** (1) ಒಂದು ವಿಧೇಯಕಕ್ಕೆ ಸಂಬಂಧಿಸಿದ ಯಾವುದೇ ಪ್ರಸ್ತಾವದ ಮೇಲಿನ ಚರ್ಚೆಯು ಅಥವಾ ಯಾವುದೇ ಇತರ ಪ್ರಸ್ತಾವದ ಮೇಲಿನ ಚರ್ಚೆಯೂ ವೇಳೆ ಮೀರಿ ಮುಂದುವರಿಯುತ್ತಾ ಹೋದಾಗಲೆಲ್ಲ ಅಧ್ಯಕ್ಷರು ಸಭೆಯ ಒಟ್ಟು ಅಭಿಪ್ರಾಯವನ್ನು ತಿಳಿದುಕೊಂಡು ಸಂದರ್ಭಾನುಸಾರ ವಿಧೇಯಕದ ಯಾವುದೇ ಹಂತ ಅಥವಾ ಎಲ್ಲಾ ಹಂತಗಳ ಮೇಲಿನ ಚರ್ಚೆಗಳನ್ನು ಅಥವಾ ಆ ಪ್ರಸ್ತಾವದ ಮೇಲಿನ ಚರ್ಚೆಗಳನ್ನು ಮುಕ್ತಾಯಗೊಳಿಸಲು ಕಾಲ ಪರಿಮಿತಿಯನ್ನು ನಿಗದಿಪಡಿಸತಕ್ಕುದು.

(2) ಯಾವುದೇ ವಿಧೇಯಕ ಅಥವಾ ಪ್ರಸ್ತಾವದ ಒಂದು ನಿರ್ದಿಷ್ಟ ಹಂತವನ್ನು ಪೂರೈಸುವುದಕ್ಕಾಗಿ ಗೊತ್ತುಪಡಿಸಲಾದ ಸಮಯಮಿತಿಗೆ ಅನುಸಾರವಾಗಿ, ಗೊತ್ತಾದ ವೇಳೆಯಲ್ಲಿ ಅಧ್ಯಕ್ಷರು, ಚರ್ಚೆ ಅದಕ್ಕಿಂತ ಮುಂಚಿತವಾಗಿಯೇ ಮುಕ್ತಾಯವಾದ ಹೊರತು ವಿಧೇಯಕ ಅಥವಾ ಪ್ರಸ್ತಾವದ ಆ ಹಂತದ ಸಂಬಂಧದಲ್ಲಿ ಉಳಿದಿರುವ ಎಲ್ಲ ಪ್ರಮುಖ ಅಂಶಗಳನ್ನು ಇತ್ಯರ್ಥಗೊಳಿಸಲು ಅಗತ್ಯವಾದ ಪ್ರತಿಯೊಂದು ಪ್ರಶ್ನೆಯನ್ನು ಕೂಡಲೇ ಹಾಕತಕ್ಕುದು.

(4) ಇತ್ಯರ್ಥಕ್ಕಾಗಿ ಪ್ರಶ್ನೆ

**340. ಸದನದ ನಿರ್ಣಯವನ್ನು ಪಡೆಯಲು ಅನುಸರಿಸಬೇಕಾದ ಕಾರ್ಯ ವಿಧಾನ** : ಸದನದ ನಿರ್ಣಯವನ್ನು ಪಡೆಯಬೇಕಾಗಿರುವ ಯಾವುದೇ ವಿಷಯವು ಯಾವೊಬ್ಬ ಸದಸ್ಯರು ಮಾಡಿದ ಪ್ರಸ್ತಾವದ ಆಧಾರದ ಮೇಲೆ ಅಧ್ಯಕ್ಷರು ಕೇಳುವ ಪ್ರಶ್ನೆಯ ಮೂಲಕ ನಿರ್ಧರಿಸತಕ್ಕುದು.

**341. ಪ್ರಸ್ತಾವ ಮತ್ತು ಇತ್ಯರ್ಥಕ್ಕಾಗಿ ಪ್ರಶ್ನೆಯನ್ನು ಹಾಕುವುದು** : ಒಂದು ಪ್ರಸ್ತಾವವನ್ನು ಸೂಚಿಸಿದಾಗ ಅಧ್ಯಕ್ಷರು ಅದರ ಪರವಾಗಿ ಮತ್ತು ಅದಕ್ಕೆ ವಿರೋಧವಾಗಿ, ಸದಸ್ಯರ ಮತಗಳನ್ನು ಕೇಳುವ ಪ್ರಶ್ನೆಯನ್ನು ಹಾಕಿ ಅದಕ್ಕೆ ಅದನ್ನು ಸಭೆಯ ತೀರ್ಮಾನಕ್ಕೆ ಬಿಡತಕ್ಕುದು. ಒಂದು ಪ್ರಸ್ತಾವದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯ ಪ್ರತ್ಯೇಕವಾದ ವಿಚಾರಗಳು ಅಡಕವಾಗಿದ್ದ ಪಕ್ಷದಲ್ಲಿ, ಅವುಗಳಲ್ಲಿ ಒಂದೊಂದರ ವಿಷಯವಾಗಿಯೂ ಸದನದ ಅಭಿಪ್ರಾಯವನ್ನು ನಿರ್ಧರಿಸಲು ಅಧ್ಯಕ್ಷರು ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಬಹುದು.

**342. ಮತವನ್ನು ಗ್ರಹಿಸಿದ ಮೇಲೆ ಸದಸ್ಯರು ಆ ವಿಷಯದ ಮೇಲೆ ಮಾತನಾಡಕೂಡದು.** : ಅಧ್ಯಕ್ಷರು ಒಂದು ವಿಷಯದ ಮೇಲೆ ಅದರ ಪರವಾಗಿರುವ ಮತ್ತು ಅದಕ್ಕೆ ವಿರೋಧವಾಗಿರುವ ಸದಸ್ಯರ "ಹೌದು ಅಥವಾ ಅಲ್ಲ" ಎಂಬ ಅಭಿಮತವನ್ನು ಪಡೆದ ತರುವಾಯ ಆ ವಿಷಯದ ಮೇಲೆ ಯಾವ ಸದಸ್ಯರೂ ಪುನಃ ಮಾತನಾಡತಕ್ಕುದಲ್ಲ.

**343. ಪ್ರಸ್ತಾಪಿಸಲ್ಪಟ್ಟ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡುವುದು** : ಒಬ್ಬ ಸಚಿವರು ಸದನದ ಮುಂದೆ ಹಾಜರುಪಡಿಸಿದ ಒಂದು ಕಾಗದವನ್ನು ಅಥವಾ ರಾಜ್ಯದ ಇತರ ಪತ್ರವನ್ನು ಸದನದಲ್ಲಿ ಪ್ರಸ್ತಾಪಿಸಿದ ಪಕ್ಷದಲ್ಲಿ ಅವರು ಸಂಬಂಧಪಟ್ಟ ಆ ಪತ್ರವನ್ನು ಸಭೆಯ ಮುಂದೆ ಇಡತಕ್ಕುದು.

ಆದರೆ, ಈ ನಿಯಮವು ಕಾಗದಪತ್ರಗಳನ್ನು ಹಾಜರುಪಡಿಸುವುದರಿಂದ ಸಾರ್ವಜನಿಕ ಹಿತಸಾಧನೆಗೆ ಅಸಂಗತವಾದ ಸ್ವಭಾವದವುಗಳಾಗಿರುತ್ತವೆಂಬುದಾಗಿ ಸಚಿವರಿಂದ ತಿಳಿಸಲಾಗುವಂಥ ಕಾಗದ ಪತ್ರಗಳಿಗೆ ಅನ್ವಯಿಸತಕ್ಕುದಲ್ಲ.

ಅಷ್ಟೇ ಅಲ್ಲದೆ, ಅಂಥ, ಕಾಗದದ ಅಥವಾ ರಾಜ್ಯ ಪತ್ರದ ಸಾರಾಂಶ ಅಥವಾ ಮುಖ್ಯಾಂಶಗಳನ್ನು ಒಬ್ಬ ಸಚಿವರು ತಮ್ಮ ಸ್ವಂತ ಮಾತುಗಳಲ್ಲಿ ತಿಳಿಸಿದಾಗ ಸಂಬಂಧಪಟ್ಟ ಕಾಗದ ಪತ್ರವನ್ನು ಸಭೆಯ ಮುಂದಿಡುವುದು ಅವಶ್ಯಕವಾಗಿರತಕ್ಕುದಲ್ಲ.

**344. ಸಭೆಯ ಮುಂದಿಟ್ಟ ಕಾಗದ ಪತ್ರಗಳ ಬಗೆಗಿನ ವ್ಯವಹಾರ** : 1) ಸಭೆಯ ಮುಂದಿಟ್ಟ ಒಂದು ಕಾಗದ ಅಥವಾ ದಸ್ತಾವೇಜನ್ನು ಅದನ್ನು ಮಂಡಿಸುವ ಸದಸ್ಯರಿಂದ ಕ್ರಮವಾಗಿ ಅಧಿಕೃತಗೊಳಿಸತಕ್ಕುದು.

(2) ಸಭೆಯ ಮುಂದಿಟ್ಟ ಎಲ್ಲ ಕಾಗದಗಳೂ ಮತ್ತು ದಸ್ತಾವೇಜುಗಳೂ ಸಾರ್ವಜನಿಕವಾದುದೆಂದು ಭಾವಿಸತಕ್ಕುದು.

**345. ಮಂತ್ರಿಗಳಿಂದ ಹೇಳಿಕೆ :** ವಿಧಾನ ಸಭಾಧ್ಯಕ್ಷರ ಅನುಮತಿ ಪಡೆದು ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಹೇಳಿಕೆ ನೀಡಬಹುದು. ಅಂತಹ ಹೇಳಿಕೆಯ ಮೇಲೆ ಯಾವುದೇ ಚರ್ಚೆಗೆ ಅವಕಾಶವಿರತಕ್ಕುದಲ್ಲ. ಆದರೆ, ರಾಜ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಪಡೆಯುವ ಉದ್ದೇಶಕ್ಕಾಗಿ ಪ್ರಶ್ನೆಗಳನ್ನು ಕೇಳಲು ಸದಸ್ಯರಿಗೆ ಅನುಮತಿ ನೀಡಬಹುದು.

**346. ಮತಗಳ ಎಣಿಕೆ** : (1) ಒಂದು ಚರ್ಚೆಯ ಮುಕ್ತಾಯವಾದ ಮೇಲೆ ಅಧ್ಯಕ್ಷರು ಚರ್ಚೆಯ ವಿಷಯವನ್ನು ಸಭೆಯ ಮುಂದೆ ಮಂಡಿಸತಕ್ಕುದು ಮತ್ತು ಪ್ರಸ್ತಾವಕ್ಕೆ ಒಪ್ಪಿಗೆಯುಳ್ಳವರು, "ಹೌದು" ಎಂದು ಹೇಳಬೇಕೆಂಬುದಾಗಿಯೂ ಮತ್ತು ಅದಕ್ಕೆ ವಿರೋಧವಾಗಿರುವವರು "ಇಲ್ಲ" ಎಂದು ಹೇಳಬೇಕೆಂದಾಗಿಯೂ ತಿಳಿಸಬೇಕು.

(2) ಅಧ್ಯಕ್ಷರು, ಅನಂತರ, ತೀರ್ಮಾನವು "ಹೌದು" ಎಂದು ಹೇಳುವವರಿಗೆ (ಅಥವಾ ಆಯಾ ಸಂದರ್ಭಾನುಸಾರವಾಗಿ "ಇಲ್ಲ" ಎಂದು ಹೇಳುವವರಿಗೆ) ಅನುಕೂಲವಾಗಿದೆಯೆಂದು ನನಗೆ ತೋರುತ್ತದೆ ಎಂದು ತಿಳಿಯತಕ್ಕುದು, ಒಂದು ಪ್ರಶ್ನೆಯ ತೀರ್ಮಾನದ ಸಂಬಂಧದಲ್ಲಿ ಅಧ್ಯಕ್ಷರ ಅಭಿಪ್ರಾಯವನ್ನು ಪ್ರತಿಭಟಿಸದಿದ್ದಲ್ಲಿ ಅವರ ತೀರ್ಮಾನವು "ಹೌದು" ಎನ್ನುವವರೆಗೆ (ಅಥವಾ ಆಯಾ ಸಂದರ್ಭಾನುಸಾರವಾಗಿ "ಇಲ್ಲ" ಎನ್ನುವವರೆಗೆ) ಅನುಕೂಲವಾಗಿದೆ ಎಂದು ಎರಡು ಸಲ ಹೇಳತಕ್ಕುದು ಮತ್ತು ಸದನದ ಮುಂದೆ ತೀರ್ಮಾನಕ್ಕೆ ಬಂದಿರುವ ವಿಚಾರವನ್ನು ಅದಕ್ಕೆ ತಕ್ಕಂತೆ ತೀರ್ಮಾನಿಸತಕ್ಕುದು.

(3) ಒಂದು ಪ್ರಶ್ನೆಯ ತೀರ್ಮಾನದ ಸಂಬಂಧದಲ್ಲಿ ಅಧ್ಯಕ್ಷರ ಅಭಿಪ್ರಾಯವನ್ನು ಪ್ರತಿಭಟಿಸಿದ್ದಲ್ಲಿ ಮತದ ಎಣಿಕೆ ಗಂಟೆಯನ್ನು ಎರಡು ನಿಮಿಷಗಳವರೆಗೆ ಬಾರಿಸುವಂತೆ ವ್ಯವಸ್ಥೆ ಮಾಡತಕ್ಕುದು.

(4) ಆ ಎರಡು ನಿಮಿಷಗಳು ಮುಗಿದ ಮೇಲೆ ಬಾಗಿಲುಗಳನ್ನು ಮುಚ್ಚಿಬಿಡುವಂತೆ ಹೇಳತಕ್ಕುದು ಮತ್ತು ಪ್ರಶ್ನೆಯನ್ನು ಎರಡನೆಯ ಸಲ ಹಾಕಬೇಕು. ಮತ್ತು ಪ್ರಸ್ತಾವಕ್ಕೆ ಒಪ್ಪಿಗೆಯುಳ್ಳವರು "ಹೌದು" ಎಂದು ಹೇಳಬೇಕೆಂಬುದಾಗಿಯೂ ಮತ್ತು ಅದಕ್ಕೆ ವಿರೋಧವಾಗಿರುವವರು "ಇಲ್ಲ" ಎಂದು ಹೇಳಬೇಕೆಂಬುದಾಗಿಯೂ ತಿಳಿಸತಕ್ಕುದು.

(5) ಒಂದು ಪ್ರಶ್ನೆಯ ತೀರ್ಮಾನದ ಸಂಬಂಧದಲ್ಲಿ ಅಧ್ಯಕ್ಷರ ಅಭಿಪ್ರಾಯವನ್ನು ಪುನಃ ಪ್ರತಿಭಟಿಸಿದರೆ, ಅವರು ತಾವು ಯುಕ್ತವೆಂದು ಭಾವಿಸಿದರೆ "ಹೌದು" ಎನ್ನುವ ಅಭಿಪ್ರಾಯವುಳ್ಳ ಮತ್ತು "ಇಲ್ಲ" ಎನ್ನುವ ಅಭಿಪ್ರಾಯವುಳ್ಳ ಸದಸ್ಯರು ಕ್ರಮವಾಗಿ ತಮ್ಮ ತಮ್ಮ ಸ್ಥಳಗಳಲ್ಲಿ ಎದ್ದು ಸಭೆಯ ತೀರ್ಮಾನವನ್ನು ಪ್ರಕಟಿಸಬಹುದು. ಅಂಥ ಸಂದರ್ಭಗಳಲ್ಲಿ ಮತಗಳನ್ನು ಕೊಟ್ಟವರ ಹೆಸರುಗಳನ್ನು ದಾಖಲು ಮಾಡತಕ್ಕುದಲ್ಲ.

(6) ಮೇಲಿನ (3)ನೆಯ ಉಪನಿಯಮದಲ್ಲಿ ವಿಧಾಯಕ ಮಾಡಿರುವಂಥ ಕಾರ್ಯ ವಿಧಾನವನ್ನು ಅಧ್ಯಕ್ಷರು ಅನುಸರಿಸದಿದ್ದಲ್ಲಿ, ಅವರು ತಾವು ತೀರ್ಮಾನಿಸಬಹುದಾದಂಥ ಇತರ ಯಾವುದೇ ವಿಧಾನದಲ್ಲಿ ವಿಷಯದ ಪರವಾಗಿಯೂ ಮತ್ತು ವಿಷಯಕ್ಕೆ ವಿರುದ್ಧವಾಗಿಯೂ ಎಷ್ಟು ಮಂದಿ ಮತವುಳ್ಳವರಾಗಿದ್ದಾರೆಂಬುದನ್ನು ತಿಳಿಯಬೇಕೆಂದು ಆದೇಶಿಸತಕ್ಕುದು.

ಸದಸ್ಯರುಗಳನ್ನು ಸಭೆಯಿಂದ ಹೊರಕ್ಕೆ ಕಳುಹಿಸುವುದು ಮತ್ತು ಕೆಲಕಾಲ ಸಭೆಗೆ ಬರದಂತೆ ಆಜ್ಞೆ ಮಾಡುವುದು.

**347. ಸದಸ್ಯರು ಸಭೆಯಿಂದ ಹೊರಕ್ಕೆ ಹೋಗಬೇಕೆಂದು ಆದೇಶ ಮಾಡುವುದು:** ಅಧ್ಯಕ್ಷರು ಯಾವ ಸದಸ್ಯರ ನಡವಳಿಕೆಯು ತುಂಬಾ ಅಸಭ್ಯವಾಗಿದೆಯೆಂದು ಭಾವಿಸುತ್ತಾರೋ, ಅಂಥ ಸದಸ್ಯರಿಗೆ ಸದನದಿಂದ ಕೂಡಲೇ ಹೊರಗೆ ಹೋಗುವಂತೆ ಆದೇಶಿಸಬಹುದು ಮತ್ತು ಆ ರೀತಿ ಹೋಗಬೇಕೆಂದು ಆದೇಶ ಮಾಡಿದ ಯಾರೇ ಸದಸ್ಯರು ಕೂಡಲೇ ಸಭೆಯಿಂದ ಹೊರಗೆ ಹೋಗಬೇಕು ಮತ್ತು ಆ ದಿನದ ಉಪವೇಶನದ ಉಳಿದ ಸಮಯದಲ್ಲಿ ಅವರು ಗೈರುಹಾಜರಾಗತಕ್ಕುದು.

**348. ಸದಸ್ಯರನ್ನು ಕೆಲಕಾಲ ಸಭೆಗೆ ಬರದಂತೆ ತಡೆ ಹಿಡಿಯುವುದು :** (1) ಅಧ್ಯಕ್ಷರು ತಾವು ಅವಶ್ಯವೆಂದು ಭಾವಿಸಿದ ಪಕ್ಷದಲ್ಲಿ ಯಾವ ಸದಸ್ಯರು ಅಧ್ಯಕ್ಷರ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೆ ತಿರಸ್ಕಾರ ಮಾಡುತ್ತಾರೋ ಅಥವಾ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ ಮತ್ತು ಉದ್ದೇಶಪೂರ್ವಕವಾಗಿ ಅಡಚಣೆಯನ್ನುಂಟು ಮಾಡುವುದರ ಮೂಲಕ ಸದನದ ನಿಯಮಗಳಿಗೆ ವಿರೋಧವಾಗಿ ವರ್ತಿಸುತ್ತಾರೋ ಆ ಸದಸ್ಯರ ಹೆಸರೆತ್ತಿ ಸದನಕ್ಕೆ ತಿಳಿಸಬಹುದು.

(2) ಆ ರೀತಿ, ಅಧ್ಯಕ್ಷರು ಒಬ್ಬ ಸದಸ್ಯರ ಹೆಸರೆತ್ತಿ ತಿಳಿಸಿದ ಪಕ್ಷದಲ್ಲಿ ಆ ಕೂಡಲೇ ಅವರು ಹೆಸರೆತ್ತಿ ತಿಳಿಸಿದ ಸದಸ್ಯರು ಅಧಿವೇಶನದ ಉಳಿದ ಕಾಲದಲ್ಲಿ (ಅಥವಾ ಅಧ್ಯಕ್ಷರು ನಿರ್ದಿಷ್ಟಗೊಳಿಸಬಹುದಾದಂಥ

ಅಧಿವೇಶನದ ಒಂದು ಭಾಗದವರೆಗೆ) ಸದನಕ್ಕೆ ಬರಬಾರದಂತೆ ಪ್ರಸ್ತಾವವನ್ನು ಮಂಡಿಸಬೇಕು.

ಆದರೆ, ಸದನವು ಯಾವ ಕಾಲದಲ್ಲಾದರೂ, ಒಂದು ಪ್ರಸ್ತಾವವನ್ನು ಸೂಚಿಸಿದ ಮೇಲೆ ಅಂಥ ನಿಷೇಧವನ್ನು ಮುಕ್ತಾಯಗೊಳಿಸಬೇಕೆಂದು ನಿರ್ಣಯ ಮಾಡಬಹುದು.

(3) ಈ ನಿಯಮದ ಮೇರೆಗೆ ಸದನಕ್ಕೆ ಬರದಂತೆ ನಿಷೇಧಿಸಲ್ಪಟ್ಟ ಸದಸ್ಯರು, ಆ ಕೂಡಲೇ ಸದನದ ಆವರಣವನ್ನು ಬಿಟ್ಟು ಹೊರಟುಹೋಗತಕ್ಕುದು.

**349. ಸದನವು ಕೆಲಕಾಲ ನಡೆಯದಂತೆ ಮುಂದಕ್ಕೆ ಹಾಕುವುದಕ್ಕೆ ಅಥವಾ ಉಪವೇಶನವು ಕೆಲಕಾಲ ನಡೆಯದಂತೆ ಆದೇಶ ಮಾಡುವುದಕ್ಕೆ ಅಧ್ಯಕ್ಷರ ಅಧಿಕಾರ:** ಸದನದಲ್ಲಿ ಭಾರಿ ಗೊಂದಲವಿದ್ದ ಪಕ್ಷದಲ್ಲಿ ಅಧ್ಯಕ್ಷರು ಸದನವು ಕೆಲಕಾಲ ನಡೆಯದಂತೆ ಮುಂದಕ್ಕೆ ಹಾಕುವುದು ಅಥವಾ ಉಪವೇಶನವು ಕೊಂಚ ಕಾಲ ನಡೆಯದಂತೆ ತಡೆಹಿಡಿಯುವುದು ಅವಶ್ಯವೆಂದು ಭಾವಿಸಿದ ಪಕ್ಷದಲ್ಲಿ, ಆ ರೀತಿ ಸದನವನ್ನು ಮುಂದಕ್ಕೆ ಹಾಕಬಹುದು, ಅಥವಾ ಉಪವೇಶನವನ್ನು ಕೆಲಕಾಲ ನಡೆಯದಂತೆ ಮಾಡಬಹುದು.

**350. ಕ್ರಿಯಾಲೋಪಗಳು ಮತ್ತು ಅವುಗಳ ಬಗ್ಗೆ ನಿರ್ಣಯಗಳು :** (1) ಒಂದು ಕ್ರಿಯಾಲೋಪವು ಈ ನಿಯಮಗಳ ಅರ್ಥಾನ್ವಯಕ್ಕೆ ಅಥವಾ ಈ ನಿಯಮಗಳನ್ನು ಜಾರಿಗೆ ತರುವುದಕ್ಕೆ ಇಲ್ಲವೇ ವಿಧಾನಸಭೆಯ ಕಾರ್ಯಕಲಾಪಗಳನ್ನು ಕ್ರಮಪಡಿಸುವುದಕ್ಕಿರುವಂತೆ ಸಂವಿಧಾನದ ಅನುಚ್ಛೇದಗಳ ಅರ್ಥಾನ್ವಯಕ್ಕೆ ಅಥವಾ ಅನುಚ್ಛೇದಗಳನ್ನು ಜಾರಿಗೆ ತರುವುದಕ್ಕೆ ಸಂಬಂಧಪಟ್ಟಿರತಕ್ಕುದು ಮತ್ತು ಅಧ್ಯಕ್ಷರು ಗಮನಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿರುವಂಥ ವಿಷಯವನ್ನು ಸದನದ ಗಮನಕ್ಕೆ ತರತಕ್ಕುದು.

(2) ಸದನದ ಮುಂದೆ ತತ್ಕಾಲದಲ್ಲಿ ಬಂದಿರುವ ಕಾರ್ಯಕಲಾಪದ ಸಂಬಂಧದಲ್ಲಿ ಒಂದು ಕ್ರಿಯಾಲೋಪವನ್ನು ತರಬಹುದು.

ಆದರೆ, ಒಂದು ಕ್ರಿಯಾಲೋಪವು ಸದನದ ಶಿಸ್ತುಪಾಲನೆಯನ್ನು ಮಾಡುವುದಕ್ಕಾಗಲಿ ಅಥವಾ ಸದನದ ಮುಂದೆ ಬಂದಿರುವ ಕಾರ್ಯಕಲಾಪಗಳನ್ನು ವ್ಯವಸ್ಥೆಗೊಳಿಸುವುದಕ್ಕಾಗಲಿ ಸಂಬಂಧಪಟ್ಟಿದ್ದರೆ ಕಾರ್ಯಕಲಾಪಗಳ ಪೈಕಿ ಒಂದು ಬಾಬು ಮುಗಿದು ಇನ್ನೊಂದು ಬಾಬು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಬರುವ ಮಧ್ಯ ಕಾಲಾವಧಿಯಲ್ಲಿ ಒಬ್ಬರು ಸದಸ್ಯರು ಒಂದು ಕ್ರಿಯಾಲೋಪವನ್ನೆತ್ತುವುದಕ್ಕೆ ಅಧ್ಯಕ್ಷರು ಅನುಮತಿ ಕೊಡಬಹುದು.

(3) ಮೇಲಿನ (1)ನೆಯ ಮತ್ತು (2)ನೆಯ ಉಪನಿಯಮಗಳಲ್ಲಿ ತಿಳಿಸಿರುವಂಥ ಷರತ್ತುಗಳಿಗೊಳಪಟ್ಟು ಒಬ್ಬ ಸದಸ್ಯರು ಒಂದು ಕ್ರಿಯಾಲೋಪವನ್ನು ರಚಿಸಿ ಮಂಡಿಸಬಹುದು. ಹಾಗೆ ಮಂಡಿಸಿರುವುದು ಕ್ರಿಯಾಲೋಪ ಹೌದೇ ಎಂಬುದನ್ನು ಅಧ್ಯಕ್ಷರು ತೀರ್ಮಾನಿಸತಕ್ಕುದು ಮತ್ತು ಅದು ಕ್ರಿಯಾಲೋಪವಾಗಿದ್ದರೆ ಅದರ ವಿಷಯದಲ್ಲಿ ತಮ್ಮ ನಿರ್ಣಯವನ್ನು ಕೊಡತಕ್ಕುದು, ಅಂಥ ನಿರ್ಣಯ ಅಂತಿಮವಾಗಿರತಕ್ಕುದು.

(4) ಕ್ರಿಯಾಲೋಪದ ಮೇಲೆ ಯಾವ ಚರ್ಚೆಗೂ ಅವಕಾಶಕೊಡತಕ್ಕುದಲ್ಲ ಆದರೆ ಅಧ್ಯಕ್ಷರು, ತಮಗೆ ಯುಕ್ತವೆಂದು ಕಂಡು ಬಂದರೆ, ತಮ್ಮ ನಿರ್ಣಯವನ್ನು ಕೊಡವುದಕ್ಕಿಂತ ಮುಂಚಿತವಾಗಿ ಸದಸ್ಯರುಗಳ ಹೇಳಿಕೆಗಳನ್ನು ಕೇಳಬಹುದು.

(5) ಕ್ರಿಯಾಲೋಪವು ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟ ಸೂಚನೆಯಾಗುವುದಿಲ್ಲ.

(6) ಒಬ್ಬ ಸದಸ್ಯರು ಈ ಕೆಳಕಂಡ ವಿಷಯಗಳಿಗೆ ಸಂಬಂಧಪಟ್ಟಂತೆ ಕ್ರಿಯಾಲೋಪವನ್ನು ಎತ್ತಕೂಡದು.

(ಎ) ಮಾಹಿತಿಯನ್ನು ಕೇಳುವುದಕ್ಕಾಗಲಿ, ಅಥವಾ

(ಬಿ) ತಮ್ಮ ಅಭಿಪ್ರಾಯವನ್ನು ವಿವರಿಸುವುದಕ್ಕಾಗಲಿ, ಅಥವಾ

(ಸಿ) ಯಾವ ಪ್ರಸ್ತಾವದ ಮೇಲೆ ಆಗಲಿ ಬಂದಿರುವ ಒಂದು ಪ್ರಶ್ನೆಯು ವಿಧಾನಸಭೆಯ ಮುಂದೆ ಮಂಡಿಸುತ್ತಿರುವಾಗ ಆಗಲಿ, ಅಥವಾ

(ಡಿ) ಕೇವಲ ಊಹೆಗೆ ಸಂಬಂಧಪಟ್ಟಂತೆ ಅಥವಾ

(ಇ) ಮತಗಳ ಎಣಿಕೆಯಾಗುವುದೆಂದು ಸೂಚಿಸುವ ಗಂಟೆಗಳ ಶಬ್ದವಾಗಲಿಲ್ಲವೆಂದು ಅಥವಾ ಆ ಶಬ್ದಗಳು ಕೇಳಿಸಲಿಲ್ಲವೆಂದು ಒಂದು ಕ್ರಿಯಾಲೋಪವನ್ನು ಎತ್ತಕೂಡದು.

**351. ಕ್ರಿಯಾಲೋಪವಲ್ಲದ ಒಂದು ವಿಚಾರವನ್ನೆತ್ತುವುದು :** ಒಂದು ಕ್ರಿಯಾ ಲೋಪವಲ್ಲದಂಥ ಯಾವ ವಿಷಯವನ್ನಾಗಲಿ ವಿಧಾನಸಭೆಯು ಗಮನಕ್ಕೆ ತರಬೇಕೆಂದು ಇಚ್ಛಿಸುವ ಸದಸ್ಯರು ವಿಧಾನಸಭೆಯಲ್ಲಿ ತಾವು ಎತ್ತಬೇಕೆಂದಿರುವ ವಿಷಯವನ್ನು, ಅದನ್ನು ಸೂಚಿಸಬೇಕೆಂದಿರುವ ಕಾರಣಗಳೊಡನೆ ಸಂಕ್ಷೇಪವಾಗಿ ತಿಳಿಸಿ ಲಿಖಿತ ಮೂಲಕವಾಗಿ ಕಾರ್ಯದರ್ಶಿಯವರಿಗೆ "ಸೂಚನಾಪತ್ರ" ವನ್ನು ಕೊಡಬೇಕು ಅಧ್ಯಕ್ಷರು ಅನುಮತಿ ಕೊಟ್ಟಮೇಲೆ ಮಾತ್ರವೇ ಅವರು ಅದನ್ನು ಸೂಚಿಸುವುದಕ್ಕೆ ಅವರಿಗೆ ಅನುಮತಿ ದೊರೆಯಬೇಕು ಮತ್ತು ಅಧ್ಯಕ್ಷರು ಗೊತ್ತುಮಾಡಬಹುದಾದ ಕಾಲದಲ್ಲಿ ಮತ್ತು ಆ ದಿನ ಮಾತ್ರ ಅವರು ಅದನ್ನು ಸೂಚಿಸುವುದಕ್ಕೆ ಅವರಿಗೆ ಅನುಮತಿ ದೊರೆಯಬೇಕು.

** ** ***

## ದಿನಾಂಕ ......20. . . ರ ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ಅಂಕಪಟ್ಟಿ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ವಿದ್ಯಾರ್ಥಿ ಹಾಗೂ ಶಾಲೆಯ ಹೆಸರು ಹಾಗೂ ತರಗತಿ | ಶಿಸ್ತು ಮತ್ತು ಸಭ್ಯತೆ (ಗರಿಷ್ಟ 10 ಅಂಕ ಗಳು) | ಸಂಸದೀಯ ಕಾರ್ಯ ವಿಧಾನದ ಪಾಲನೆ (ಗರಿಷ್ಟ 20 ಅಂಕಗಳು) | ಪ್ರಶ್ನೆಗಳಿಗಾಗಿ ಮತ್ತು ಪೂರಕ ಪ್ರಶ್ನೆಗಳಿಗಾಗಿ ವಿಷಯಗಳ ಆಯ್ಕೆ ಹಾಗೂ ಅವುಗಳಿಗೆ ನೀಡಿದ ಉತ್ತರಗಳ ಗುಣಮಟ್ಟ (ಗರಿಷ್ಟ 20 ಅಂಕ ಗಳು) | ಚರ್ಚೆಗಳಿಗೆ ವಿಷಯಗಳ ಆಯ್ಕೆ (ಗರಿಷ್ಟ 10 ಅಂಕ ಗಳು) | ಮಾಡಿದ ಭಷಣದ ಶೈಲಿ ಅಥವಾ ಮೌಲ್ಯ, ಚರ್ಚೆಗಳ ಗುಣಮಟ್ಟ (ಗರಿಷ್ಟ 30 ಅಂಕಗಳು) | ಒಟ್ಟಾರೆ ಸಾಧನೆಯ ಸಾಮಾನ್ಯ ಮೌಲ್ಯ ಮಾಪನ (ಗರಿಷ್ಟ 10 ಅಂಕಗಳು) | ಒಟ್ಟು 100 ಅಂಕ ಗಳು |
|---|---|---|---|---|---|---|---|---|---|
| 1 | | | | | | | | | |
| 2 | | | | | | | | | |

## ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಗಳ ವಿವರಗಳು 2009–10

| | ಜಿಲ್ಲೆಯ ಹೆಸರು | |
|---|---|---|
| ಕ್ರಮ ಸಂಖ್ಯೆ | ಶಾಲೆಯ ಹೆಸರು | ಭಾಗವಹಿಸಿದ ಸ್ಪರ್ಧಾರ್ಥಿಗಳ ಹೆಸರು |
| 1 | | |
| 2 | | |
| 3 | | |
| 4 | | |
| 5 | | |
| ಶಾಲೆಗಳ ಒಟ್ಟು ಸಂಖ್ಯೆ | | ವಿದ್ಯಾರ್ಥಿಗಳ ಒಟ್ಟು ಸಂಖ್ಯೆ |
| | | |

### ಜಿಲ್ಲೆಗಳ ವಿವರ

| ಸ್ಪರ್ಧೆ ಯಲ್ಲಿ ವೈಯಕ್ತಿಕ ಬಹು ಮಾನ ಪಡೆದವರ ಸಂಖ್ಯೆ | ಸ್ಪರ್ಧೆಯಲ್ಲಿ ಮೊದಲ ಐದು ಸ್ಥಾನಗಳಿಸಿದ ವಿದ್ಯಾರ್ಥಿಗಳ ಹೆಸರು | ಪಡೆದ ಅಂಕಗಳು | ಶಾಲೆಯ ಹೆಸರು |
|---|---|---|---|
| | | | |
| | | | |
| | | | |
| | | | |
| | | | |

* * * * *

P-3-AK-VKS

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು.